to the Government, irrespective of political affiliations for the overall development and progress of the State. In this venture of building a strong and prosperous Karnataka, I wish you all success.

Jai Hind

Jai Karnataka

(ಸಭೆಯು ಮಧ್ಯಾಹ್ನ 12.40 ಗಂಟೆಗೆ ಮುಕ್ತಾಯವಾಯಿತು)

(ಸದನವು 1 ಗಂಟೆ 4 ನಿಮಿಷಕ್ಕೆ ಸಮಾವೇಶಗೊಂಡಿತು)

(ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

2. ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿ (ಪ್ರ) : ಮಾನ್ಯ ಸಭಾಧ್ಯಕ್ಷರೆ, ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣದ ಪ್ರತಿಯನ್ನು ಸಭೆಯಲ್ಲಿ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಕಾರ್ಯದರ್ಶಿ(ಪ್ರ) : ಮಾನ್ಯ ಸಭಾಧ್ಯಕ್ಷರೆ, ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಜ್ಯಪಾಲರಿಂದ ಅಥವಾ ರಾಷ್ಟ್ರಾಧ್ಯಕ್ಷರಿಂದ ಸಂದರ್ಭಾನುಸಾರ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯಲ್ಲಿ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು. ಈಗ ಸದನವನ್ನು 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

3. ವಿಶ್ವಾಸ ಮತ ಕೋರುವ ಪ್ರಸ್ತಾಪ

ವಿಷಯ : ಶ್ರೀ ಬಿ.ಎಸ್.ಯಡಿಯೂರಪ್ಪ ಅವರ ನೇತೃತ್ವದ ಸಚಿವ ಸಂಪುಟಕ್ಕೆ ವಿಶ್ವಾಸ ಮತವನ್ನು ಕೋರುವ ಬಗ್ಗೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು) :– ಸನ್ಮಾನ್ಯ ಅಧ್ಯಕ್ಷರೆ, ಈ ಕೆಳಕಂಡ ಪ್ರಸ್ತಾಪವನ್ನು ನಾನು ಮಂಡಿಸುತ್ತಿದ್ದೇನೆ. "ಈ ಸದನವು ಶ್ರೀ ಬಿ.ಎಸ್.ಯಡಿಯೂರಪ್ಪ ಅವರ ನೇತೃತ್ವದ ಸಚಿವ ಸಂಪುಟದಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ."

ಅಧ್ಯಕ್ಷರು : ಪ್ರಸ್ತಾಪವನ್ನು ಮಂಡಿಸಲಾಯಿತು.

ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಸೂಚನೆ ಮೇರೆಗೆ ವಿಶ್ವಾಸ ಮತ ಸಾಬೀತು ಗೊಳಿಸುವುದಕ್ಕೋಸ್ಕರ ಪ್ರಸ್ತಾಪವನ್ನು ಮಂಡಿಸಲಾಗಿದೆ. ಈಗಾಗಲೇ ರಾಜ್ಯಪಾಲರು 116 ಸದಸ್ಯರ ಬೆಂಬಲವಿರುವ ಬಗ್ಗೆ ಖಾತ್ರಿ ಮಾಡಿಕೊಂಡು ನಮಗೆ ಸರ್ಕಾರ ರಚಿಸಲು ಅವಕಾಶ ಮಾಡಿಕೊಟ್ಟಿದ್ದಾರೆ. ನಾನು ಈ ಹಿನ್ನೆಲೆಯಲ್ಲಿ ಪ್ರತಿಪಕ್ಷದ ನಾಯಕರಲ್ಲಿ ಅತ್ಯಂತ ವಿನಯದಿಂದ ವಿನಂತಿಸುತ್ತೇನೆ. ಈ ವಿಶ್ವಾಸ ಮತದ ಬಗ್ಗೆ ಯಾವುದೇ ಚರ್ಚೆ ಇಲ್ಲದೇ ಅಂಗೀಕರಿಸಬೇಕೆಂದು ಹೇಳಿ ನಾನು ತಮ್ಮಲ್ಲಿ ವಿನಂತಿಯನ್ನು ಮಾಡುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಮಾನ್ಯ ವಿರೋಧ ಪಕ್ಷದ ನಾಯಕರು) :- ಸನ್ಮಾನ್ಯ ಅಧ್ಯಕ್ಷರೇ, ಚರ್ಚೆ ಇಲ್ಲದೆಯೇ ಈ ವಿಶ್ವಾಸ ಮತ ಪಾಸ್ ಆಗಬೇಕು, ತೆಗೆದುಕೊಳ್ಳಬೇಕೆಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಮನವಿಯನ್ನು ಮಾಡಿಕೊಂಡಿದ್ದಾರೆ. ಬಹುಶಃ ಈ ಮಾತನ್ನು ಈ ಹಿಂದೆ ಏನು ಎರಡು ಸಲ ಈ ಸದನದಲ್ಲಿ ಸಮ್ಮಿಶ್ರ ಸರ್ಕಾರಗಳು ಇದ್ದಾಗ ಘಟನೆಗಳೇನು ನಡೆದು ಹೋಯಿತು, ಆ ಕಾಲದಲ್ಲಿ ಹೇಳಿದ್ದರೆ ಚೆನ್ನಾಗಿತ್ತು. ಆದರೆ ಇವತ್ತು ಚರ್ಚೆ ಮಾಡತಕ್ಕಂಥ ಅವಶ್ಯಕತೆ ಏಕೆ ಇದೆ ಎನ್ನತಕ್ಕಂಥದ್ದು ಒಂದು ಕಡೆ, ಇನ್ನೊಂದು ಕಡೆ ಈ Vote of Confidence ತನ್ನ ಮಹತ್ವವನ್ನು ಕೂಡ ಕಳೆದುಕೊಂಡಿದೆ. ಕಾರಣ ಏನೆಂದರೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಸಂಪೂರ್ಣವಾದಂಥ 30 ಜನರ ಮಂತ್ರಿಮಂಡಲವನ್ನು ರಚಿಸಿದ್ದಾರೆ ಮತ್ತು ಸ್ವತಂತ್ರವಾಗಿ ಆರಿಸಿ ಬಂದಂತಹ ಸದಸ್ಯರಿಗೂ ಕೂಡ ಈಗಾಗಲೇ ಮಂತ್ರಿಗಳೆಂದು ಹೇಳಿ ಘೋಷಣೆಯನ್ನು ಮಾಡಿದ್ದಾರೆ. ಅಂದರೆ ತಮಗೆ ಏನು ಬೇಕೋ ಅದರ ವ್ಯವಸ್ಥೆಯನ್ನು ಮಾಡಿಕೊಂಡು ಸರ್ಕಾರ ಅಸ್ತಿತ್ವದಲ್ಲಿದೆಯೆಂದು ಹೇಳಿ ತೋರಿಸಿ portfolio ಕೊಡದೇ ಒಂದು ಬ್ಲಾಕ್‌ಮೇಲ್ ಮಾಡತಕ್ಕಂಥ ತಂತ್ರವನ್ನು ಇಟ್ಟುಕೊಂಡು Vote of Confidence ಅನ್ನು ಕೇಳುತ್ತಿದ್ದಾರೆ. ನಾನು ನೇರವಾಗಿ ಅವರಿಗೆ ಕೇಳತಕ್ಕಂಥದ್ದು ಇಷ್ಟೇ. ಒಂದು ವೇಳೆ Vote of Confidence ತೆಗೆದುಕೊಳ್ಳಬೇಕು. ಈ ಸದನದ ಸದಸ್ಯರ ಬೆಂಬಲ ನಿಮಗೆ ಬೇಕಾಗಿದ್ದರೆ ಅಥವಾ ಈ ಸದನದಲ್ಲಿ ನಿಮಗೆ ಬಹುಮತ ಇದೆ ಎನ್ನತಕ್ಕಂಥ ಆತ್ಮ ವಿಶ್ವಾಸ ಇದ್ದಿದ್ದರೆ ತಾವು ಒಬ್ಬರೇ ಅಥವಾ ನಿಮ್ಮ ಜೊತೆಯಲ್ಲಿ ಇನ್ನಿಬ್ಬರು ಮಂತ್ರಿಮಂಡಲದ ಶಪಥವಿಧಿಯನ್ನು ಪೂರೈಸಿ Vote of Confidence ತೆಗೆದುಕೊಂಡು ತದನಂತರ ಜಂಟಿ ಸದನವನ್ನು ಕರೆದು

ನಿಮ್ಮ ಅನಿಸಿಕೆಗಳನ್ನು ಅವರ ಮೂಲಕ ಹೇಳಿ portfolio ಗಳನ್ನು ಹಂಚಿಕೊಂಡು ಹೋಗಿದ್ದರೆ ಖಂಡಿತವಾಗಿ ಚರ್ಚೆ ಇಲ್ಲದೆ ಇದನ್ನು ನಾವು ಈ ಸದನದಲ್ಲಿ ನಡೆಸಿ ಕೊಡಬಹುದಾಗಿತ್ತು. ಆದರೆ ತಾವೇ ತರಾತುರಿಯಲ್ಲಿ ಎಲ್ಲವನ್ನೂ ಕೂಡ ಮಾಡಿಬಿಟ್ಟು ಇವತ್ತು ಕೇಳುತ್ತಿದ್ದೀರಿ Vote of Confidence ಅಂದರೆ, ಇದರ ಬಗ್ಗೆ ಚರ್ಚೆ ಕೂಡ ಆಗಬಾರದು ಎಂದರೆ ಎಷ್ಟರಮಟ್ಟಿಗೆ ಸರಿ ಎನ್ನತಕ್ಕಂಥದ್ದು ತಾವು ಹೇಳಬೇಕು. ಎಷ್ಟರಮಟ್ಟಿಗೆ ಇದಕ್ಕೆ ಮಹತ್ವ ಇದೆ ಎನ್ನತಕ್ಕಂಥ ಮಾತನ್ನು ತಾವು ತಿಳಿಸಬೇಕು. ಇವತ್ತು ರಾಜ್ಯಪಾಲರ ಬಾಯಿಂದಲೂ ಕೂಡ 14 ಪುಟದ ಭಾಷಣವನ್ನು ತಾವು ಈ ಸದನದ ಮುಂದೆ ಇಟ್ಟಿದ್ದೀರಿ. ಅಂದರೆ ವಿಶ್ವಾಸ ಮತವನ್ನು ಪಡೆಯುವುದಕ್ಕೆ ಮುಂಚೆಯೇ ನಿಮ್ಮ ಅನಿಸಿಕೆಗಳನ್ನು ಅವರ ಬಾಯಿಂದ ಈ ಸಂದರ್ಭದಲ್ಲಿ ಹೇಳಿಸಿದ್ದೀರಿ ಮತ್ತು ಈಗ ಏಕೆ ವಿಶ್ವಾಸ ಮತ ಪಡೆಯುತ್ತಿದ್ದೀರಿ? ನಮಗೆ ವಿಶ್ವಾಸ ಇಲ್ಲದೇ ಹೋಗಿದ್ದರೆ ನಾವು No Confidence Motion ಸಹಜವಾಗಿ ತರುತ್ತಿದ್ದೆವು ಮತ್ತು ಆ No Confidence Motion ತಂದಾಗ ನೀವು ಹೇಳಬೇಕಾಗಿತ್ತು ಇಲ್ಲ ನನಗೆ ಬಹುಮತ ಇದೆ ಮತ್ತು ನಾನು ವಿಶ್ವಾಸವನ್ನು ಗಳಿಸಲಿಕ್ಕೆ ಸಾಧ್ಯ ಇದೆ ಎಂದು ಹೇಳತಕ್ಕಂಥ ಮಾತು ಆಗ ಹೇಳಬೇಕಾಗಿತ್ತು. ಆದರೆ ವಿಶ್ವಾಸ ಮತ ಪಡೆದುಕೊಳ್ಳುವಾಗ ನೀವು ನಡೆದುಕೊಂಡಂಥ ರೀತಿ ಮತ್ತು ಈಗಾಗಲೇ ಮಾಡಿದಂಥ ಮಂತ್ರಿಮಂಡಲದ ರಚನೆ ಅಷ್ಟೇ ಅಲ್ಲ, ನಾಳೆಯೂ ಕೂಡ ಒಬ್ಬ ಮಂತ್ರಿಗಳಿಗೆ ತಾವು ಪ್ರಮಾಣ ವಚನವನ್ನು ಸ್ವೀಕಾರ ಮಾಡಲಿಕ್ಕೆ ಈಗಾಗಲೇ ಸೂಚನೆಯನ್ನು ಕೊಟ್ಟಿದ್ದೀರಿ. ಅಂದರೆ ಎಲ್ಲವನ್ನೂ ಮುಗಿಸಿದ್ದೀರಿ. ಸರ್ಕಾರ ಆಗಿದೆ, ವಿಶ್ವಾಸ ಬೇಕಾಗಿಲ್ಲ. ಅದಕ್ಕಾಗಿ ಇದು ನೇರವಾಗಿ ತೆಗೆದುಕೊಳ್ಳಬೇಕು ಎಂದು ಹೇಳಿ ಮತ್ತು ಸರ್ಕಾರದ ಕ್ರಮವನ್ನು ಕೂಡ ಏನೇನು ಮಾಡಬೇಕು, ಏನಿಲ್ಲ ಎನ್ನುವಂಥದ್ದನ್ನು ಕೂಡ ಗವರ್ನರ್‌ರವರು ಇವತ್ತು ಮಧ್ಯಾಹ್ನ ತಾನೇ ಹೇಳಿದ್ದಾರೆ. ಇಂಥ ಸಂದರ್ಭದಲ್ಲಿ ಇವತ್ತು ತಾವು Vote of Confidence Motion ತೆಗೆದು ಕೊಳ್ಳುತ್ತಿದ್ದೀರಿ. ಇದರ ಅವಶ್ಯಕತೆ, ಇದರ ಔಚಿತ್ಯ, ಇದರ ಮಹತ್ವ ಏನು ಇದೆ ಎಂಬುದನ್ನು ನಾವು ತಿಳಿದುಕೊಳ್ಳಬೇಕು. ಇನ್ನೊಂದು ನಾವು ಚರ್ಚೆ ಏಕೆ ಮಾಡುತ್ತಿದ್ದೇವೆಂದರೆ ಈ ಸತ್ಸಂಪ್ರದಾಯ ಹೋದ ಸಲ ತಾವೇ ಹಾಕಿದ್ದೀರಿ. ಸಮ್ಮಿಶ್ರ ಸರ್ಕಾರ ಇದ್ದಾಗ Vote of Confidence Motion ತೆಗೆದು ಕೊಳ್ಳುವಂಥದ್ದು, ಮಾನ್ಯ ಕುಮಾರಸ್ವಾಮಿ ಯವರು ಮುಖ್ಯಮಂತ್ರಿಗಳಾಗಿ ಆ ಶಪಥವಿಧಿಯನ್ನು ತೆಗೆದುಕೊಂಡಾಗ ಮಾನ್ಯ ರಾಜ್ಯಪಾಲರ ಹತ್ತಿರ ಹೋಗಿ ಲಿಸ್ಟ್ ಕೊಟ್ಟು ಬಂದ ಮೇಲೆ ಈ ಸದನದಲ್ಲೇ ಬಂದು ಅವರು Vote of Confidence ಕೇಳಿದ್ದರು. ಆಗ ತಾವೂ ಕೂಡ

ಅದಕ್ಕೆ ಭಾಗಿಗಳಾಗಿದ್ದಿರಿ. ಅಂದರೆ Vote of Confidence ಕೇಳುವಾಗ ಚರ್ಚೆಗೆ ಆಸ್ಪದ ಇದೆ ಎನ್ನತಕ್ಕಂಥ ಅರ್ಥ ಇದೆ ಮತ್ತು ಹಿಂದಿದ್ದ ಸಂಪ್ರದಾಯ ಸರಿಯಿಲ್ಲ ಎಂಬುದು ಕೂಡ ಪತ್ರಿಕೆಗಳಲ್ಲಿ ಕೆಲವು ಕಡೆ ಬಂದಿರುವುದನ್ನು ನಾನು ಓದಿದ್ದೇನೆ. ಅವರ ದೃಷ್ಟಿಯಿಂದ ಹಾಗಿರಬಹುದು. ಅಂದರೆ ಹಿಂದೆ ಮಾಡಿದ್ದಂಥ ಸಂಪ್ರದಾಯ ಸರಿಯಿಲ್ಲ, ಚರ್ಚೆಯಾಗಬಾರದು ಎಂದು ಹೇಳತಕ್ಕಂಥದ್ದು ಒಂದು. ಇವತ್ತು ಈ ಬಗ್ಗೆ ಚರ್ಚೆ ಮಾಡುವ ಅವಶ್ಯಕತೆಯೇ ಇಲ್ಲವೆಂದು ನೀವು ಹೇಳುವುದು ಇದನ್ನು ನೋಡಿದಾಗ ಮಾನ್ಯ ಅಧ್ಯಕ್ಷರೇ ಈ ಬಗ್ಗೆ ತಮಗೆ ಬಿಡುತ್ತೇನೆ. ಇದು ಸರಿಯಲ್ಲ, ಚರ್ಚೆ ಮಾಡಲೇಬೇಕಾಗುತ್ತದೆ ಮತ್ತು ಯಾವ ಕಾರಣಕ್ಕಾಗಿ ಈ ಸರ್ಕಾರ ಇವತ್ತು ಬಂದಿದೆ. ಇವತ್ತು 110 ಜನ ಭಾರತೀಯ ಜನತಾ ಪಾರ್ಟಿಯಿಂದ ಆರಿಸಿ ಬಂದಿದ್ದಾರೆ. 80 ಜನ ಕಾಂಗ್ರೆಸ್ ಪಕ್ಷದಿಂದ, ಸುಮಾರು 28 ಜನ ಜೆಡಿಎಸ್ ಪಕ್ಷದಿಂದ ಆರಿಸಿ ಬಂದಿದ್ದಾರೆ. 6 ಜನ ಸ್ವತಂತ್ರವಾಗಿ ಇಂಡಿಪೆಂಡೆಂಟ್ಸ್ ಆರಿಸಿ ಬಂದಿದ್ದಾರೆ. ಅಂದರೆ ಈ ಸದನದಲ್ಲಿ ಬಹುಮತ ಬಿಜೆಪಿಗೆ ಇಲ್ಲವೆನ್ನುವುದು ಸಾಬೀತಾಗುತ್ತದೆ. ಏಕೆಂದರೆ 110 ನಿಮ್ಮ ಪಕ್ಷದ ಗುರುತಿನ ಮೇಲೆ ಆರಿಸಿ ಬಂದ ಜನ ಇದ್ದ ಕಾರಣ ನೀವು ಸ್ವತಂತ್ರ ಪಕ್ಷದಿಂದ ಆರು ಜನರನ್ನು ತೆಗೆದುಕೊಂಡು ಅವರೆಲ್ಲರಿಗೂ ಕೂಡ ಮಂತ್ರಿಗಳನ್ನಾಗಿ ಮಾಡಿ Vote of Confidence ಗೆ ಬರುತ್ತಿದ್ದೀರಿ. ಆದರೆ ಅಲ್ಲಿಯವರೆಗೆ ನಿಮಗೆ ಅವರ ಮೇಲೆ Confidence ಇಲ್ಲ. ಅದಕ್ಕಾಗಿಯೇ ನೀವು port folio ಕೂಡ ಹಂಚಿಲ್ಲ. ಅದಕ್ಕಾಗಿಯೇ ನೀವು ಅವರನ್ನು ತರಾತುರಿಯಲ್ಲಿಯೇ ಮಂತ್ರಿಗಳನ್ನಾಗಿ ಮಾಡಬೇಕಾಗಿದ್ದರೆ ಇದೇ Vote of Confidence ತೆಗೆದುಕೊಂಡು ಆಮೇಲೆ ಮಂತ್ರಿಗಳನ್ನಾಗಿ ಮಾಡಬೇಕಾಗಿತ್ತು. ಆದರೆ ನಿಮಗೆ ಭಯ. ಒಂದು ವೇಳೆ ಅವರನ್ನು ಮಂತ್ರಿಗಳನ್ನಾಗಿ ಮಾಡದೇ ಹೋದರೆ, ಅವರೆಲ್ಲರಿಗೂ ಕೂಡ ಯಾವುದೋ ಒಂದು criteria ಮೇಲೆ ಮಾಡಿದ್ದೀರಿ ಎಂದರೆ ನಾನು ಒಪ್ಪಿಕೊಳ್ಳುತ್ತೇನೆ. ಯಾವುದೋ ಒಂದು ನೀತಿ, ಯಾವುದೋ ಒಂದು ಮಾನದಂಡ, ಯಾವುದೋ ಒಂದು at least ಈ ಸಮಾಜದಲ್ಲಿರುವಂಥ ವ್ಯವಸ್ಥೆಯ ಪ್ರಕಾರ ನಾವು ಹೀಗೆ ಮಾಡಿದ್ದೇವೆಂದು ಹೇಳಿಕೊಳ್ಳುವಂಥ ನೈತಿಕ ಅಧಿಕಾರ ನಿಮಗೆ ಇಲ್ಲ. ಯಾವುದೋ ರೀತಿಯಿಂದ ಸರ್ಕಾರವನ್ನು ಮಾಡಬೇಕು, ಅದು ಸರಿಯೋ ತಪ್ಪೋ, ಎಷ್ಟು ಜನ ಮಂತ್ರಿಗಳು ಒಂದೇ ಭಾಗದಿಂದಾಗಲೀ, ಒಂದೇ ಜಿಲ್ಲೆಯಿಂದಾಗಲೀ, ಅಥವಾ experience ಇರಲಿ, ನಾನು ಬದುಕಬೇಕಾದರೆ, ನಾನು survive ಆಗಬೇಕಾಗಿದ್ದರೆ ನನ್ನ ಪಕ್ಷ ಅಧಿಕಾರಕ್ಕೆ ಬರಬೇಕಾಗಿದ್ದರೆ ಏನು ಬೇಕಾಗಿದ್ದರೂ ಮಾಡಬಹುದು ಎನ್ನುವುದಕ್ಕೆ ಇದು ಒಂದು ಸಾಕ್ಷಿ. ಅದಕ್ಕೆ ಈ Vote of

Confidence ತಂದಿದ್ದೀರಿ ನೀವು "ನನಗೆ ಜನ ಬೆಂಬಲ ಇದೆ" ಎಂದರೆ ಜನ ಬೆಂಬಲ ಎಲ್ಲಿದೆ, 110 ಜನ ಬೆಂಬಲದಿಂದ ನೀವು ರಾಜ್ಯವನ್ನು ಆಳಲಿಕ್ಕಾಗುವುದಿಲ್ಲ. ತಮಗೆ ಗೊತ್ತಿದೆ, ಪಾರ್ಲಿಮೆಂಟಿನಲ್ಲಿ ಒಂದೇ ಓಟಿನಲ್ಲಿ ವಾಜಪೇಯಿ ಸರ್ಕಾರ ಬಿದ್ದು ಹೋಯಿತು. ಇಲ್ಲಿಯೂ ಕೂಡ ಇದೇ ಸದನದಲ್ಲಿ Vote of Confidence ತಾವೇ ತೆಗೆದುಕೊಳ್ಳುವಾಗ ಹೋದ ಫೆಬ್ರವರಿಯಲ್ಲಿ ತಾವು ಏನು ಮಾಡಿದಿರಿ? ತಮಗೆ ಗೊತ್ತಿದೆ ಯಾವಾಗ ಜೆಡಿಎಸ್ ......

ಅಧ್ಯಕ್ಷರು : ನಾನು ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡುವುದೇನೆಂದರೆ, ಚರ್ಚೆ ಮಾಡಬೇಕೋ ಬೇಡವೋ ಎನ್ನುವುದರ ಬಗ್ಗೆ ಮಾತ್ರ ಮಾತನಾಡಿ. ಚರ್ಚೆ ಮಾಡುವುದಿದ್ದರೆ ಚರ್ಚೆ ಮಾಡೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈ ಸದನದಲ್ಲಿ ಚರ್ಚೆಯಾಗಿಲ್ಲ ಎಂದರೆ ಚರ್ಚೆ ಮಾಡುವುದು ಬೇಡ. ಈ ಸದನದಲ್ಲಿ ಆ ಸತ್ಸಂಪ್ರದಾಯವನ್ನು ನೀವೇ ಹಾಕಿಲ್ಲವೇ? ನೀವು ಅದನ್ನು ಹಾಕಿದ ಮೇಲೆ ನಾನು ಮಾತನಾಡುತ್ತಿದ್ದೇನೆ. ನೀವು Vote of Confidence ಏಕೆ ತೆಗೆದುಕೊಳ್ಳುತ್ತಿದ್ದೀರಿ ಎಂಬುದನ್ನು ನಾವೂ ಕೇಳಬೇಕಲ್ಲಾ? ಇದು ರಾಜ್ಯದ ಜನತೆಗೂ ಗೊತ್ತಾಗಬೇಕು. ಎಷ್ಟರಮಟ್ಟಿಗೆ ನಿಮ್ಮ ಈ ಸರ್ಕಾರ ಸತ್ಯಾಸತ್ಯತೆಯ ಮೇಲೆ ಸ್ಥಾಪನೆಯಾಗಿದೆ, ಯಾವ ರೀತಿಯಾಗಿ ಇದು ಅಸ್ತಿತ್ವಕ್ಕೆ ಬಂದಿದೆ, ಇದರ ಹಿನ್ನೆಲೆಯೇನು ಎನ್ನತಕ್ಕದ್ದು ಕೂಡ ಜನರಿಗೆ ಗೊತ್ತಾಗಬೇಕು. ಏಕೆಂದರೆ ಬಹುಸಂಖ್ಯಾತ ಜನ, ಮತದಾರರನ್ನೂ ತೆಗೆದುಕೊಂಡರೆ ಸುಮಾರು ನಾಲ್ಕೂವರೆ ಕೋಟಿ ಜನ ಇವತ್ತಿನ ದಿವಸ...

ಶ್ರೀ ಎಸ್.ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಚರ್ಚೆಗೆ ಹೆದರಿ ಈ ಮನವಿಯನ್ನು ಮಾಡುತ್ತಿಲ್ಲ. ಪ್ರಶ್ನೆ ಇರುವುದು ವಿಶ್ವಾಸ ಮತ ಮತ್ತು ಅವಿಶ್ವಾಸ ಮತ ಇದರ ನಡುವಿನ ವ್ಯತ್ಯಾಸ. ಚುನಾವಣೆ ಆದ ನಂತರ ಇವತ್ತು ಮೊದಲನೆಯ ಅಧಿವೇಶನ ನಡೆಯುತ್ತಿದೆ. ಬಹುಮತ ಸಾಬೀತು ಮಾಡುವುದಕ್ಕೋಸ್ಕರ ಇವತ್ತು ಇಲ್ಲಿ ನಿಂತಿದ್ದೇವೆ. ಇವತ್ತು ಮೊದಲನೆಯ ದಿವಸ ಮೊದಲನೆಯ ಅಧಿವೇಶನದಲ್ಲಿ ನಾವು ನಿಂತಿದ್ದೇವೆ. ನಮ್ಮ ಮುಂದೆ ಇರುವುದು, ರಾಜ್ಯಪಾಲರು ಬಹುಮತವನ್ನು ಸಾಬೀತುಗೊಳಿಸಿ ಎಂದು ಹೇಳಿದ್ದಾರೆ. ರಾಜ್ಯಪಾಲರ ಮುಂದೆ ಹೋಗಿ ನಮಗೆ 116 ಜನರ ಬಹುಮತ ಇರುವುದನ್ನು ಸಾಬೀತು ಮಾಡಿದ ನಂತರ ಸರ್ಕಾರ ರಚಿಸಿ ಎಂದು ಅವರು ಸೂಚನೆ ಕೊಟ್ಟಮೇಲೆ ಇವತ್ತು ನಾವು ಪ್ರಮಾಣ ವಚನ ಸ್ವೀಕರಿಸಿ ಸರ್ಕಾರ ರಚನೆಯಾಗಿದೆ. ಇವತ್ತು ಬಹುಮತ ಸಾಬೀತು ಮಾಡುವುದಕ್ಕೋಸ್ಕರ ಮೋಷನ್ ಅನ್ನು ಮುಂದಿಟ್ಟಿದ್ದೇವೆ. ವಿಶ್ವಾಸ ಮತದ ಬಗ್ಗೆ ಚರ್ಚೆಯ ಅಗತ್ಯ ಇಲ್ಲ ಎಂದು

ಒಂದು ಮನವಿಯನ್ನು ಮಾಡಿದ್ದೇವೆ. ಚರ್ಚೆಯ ಅಗತ್ಯ ಇದೆಯೆಂದು ನಿಮಗೆ ಅನಿಸಿದರೆ, ಅವಿಶ್ವಾಸ ಮತದ ಮೇಲೆ ಕಾರಣಗಳು ಬೇಕಾದಷ್ಟಿರುತ್ತದೆ. ಸರ್ಕಾರ ಹಾಗೆ ಮಾಡಿದೆ, ಹೀಗೆ ಮಾಡಿದೆ ಎಂದು ಬಹಳಷ್ಟು ಕಾರಣಗಳನ್ನು ಹೇಳಬಹುದು. ಆದರೆ ಇವತ್ತು ಬಹುಮತ ಇದೆ ಎನ್ನುವುದಕ್ಕೆ one line resolution ಸಾಕು. ಆದ್ದರಿಂದ ಚರ್ಚೆಯ ಅಗತ್ಯ ಇದೆಯೆಂದು ಅನಿಸಿದರೆ ಚರ್ಚೆಗೆ ನಾವೂ ಕೂಡ ತಯಾರಿದ್ದೇವೆ. ಮಾನ್ಯ ಅಧ್ಯಕ್ಷರು ಚರ್ಚೆಗೆ ಒಂದು ಸಮಯವನ್ನು ನಿಗದಿ ಮಾಡಲಿ ಚರ್ಚೆಗೆ ಅಗತ್ಯ ಇದೆ ಎನ್ನುವುದಕ್ಕೋಸ್ಕರ ಚರ್ಚೆ ಬೇಡ. ಅದಕ್ಕೋಸ್ಕರ ಒಂದು ಗಂಟೆ ಚರ್ಚೆಯಾಗುವುದು ಬೇಡ. ಆ ಪಕ್ಷಕ್ಕೆ ಎಷ್ಟು ಈ ಪಕ್ಷಕ್ಕೆ ಎಷ್ಟು ಎಂದು ಸಮಯವನ್ನು ದಯವಿಟ್ಟು ನಿಗದಿ ಮಾಡಿ. ಚರ್ಚೆ ನಡೆಯಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: Vote of confidence ಒಂದೇ sentence, No confidence Motion ಒಂದೇ sentence.

ಶ್ರೀ ಎಸ್.ಸುರೇಶ್‌ಕುಮಾರ್ :ಅದಕ್ಕೋಸ್ಕರ ಸಮಯವನ್ನು ನಿಗದಿ ಮಾಡಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಿಮ್ಮ ಕಡೆ ಯಾರೂ participate ಮಾಡುವುದಿಲ್ಲ. ಈ ಕಡೆ ಮಾಡುತ್ತಾರೆ ಎಂದರೆ ಮಾಡುವವರು ಎಷ್ಟು ಜನರು ಮಾಡುತ್ತಾರೆ ಎನ್ನುವ ಮೇಲೆ ಹೋಗುತ್ತದೆ.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರ ಹಾಗೂ ಸಭಾನಾಯಕರ ಅಭಿಪ್ರಾಯವನ್ನು ನಾನು ತಿಳಿದುಕೊಂಡಿದ್ದೇನೆ. ಸಭಾನಾಯಕರು ಈಗಾಗಲೇ ವಿಶ್ವಾಸ ಮತವನ್ನು ಕೇಳಲು ವಿಷಯವನ್ನು ಮಂಡನೆ ಮಾಡಿದ್ದಾರೆ. ಇವತ್ತು ಅವರಿಗೆ ಬಹುಮತ ಇದೆಯೆಂದು ರಾಜ್ಯಪಾಲರು invitation ಕೊಟ್ಟಿದ್ದಾರೆ. ಒಂದು ಅರ್ಥದಲ್ಲಿ ಅವರು ಚರ್ಚೆಯೇ ಬೇಡ ಎನ್ನುವ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಮಾನ್ಯ ವಿರೋಧ ಪಕ್ಷದ ನಾಯಕರು ಈ ಹಿಂದಿನ ಸಂಪ್ರದಾಯದಂತೆ ಚರ್ಚೆ ಮಾಡುವ ಅಗತ್ಯ ಇದೆಯೆಂದು ಅವರ ಭಾವನೆಯನ್ನು ಹೇಳಿದರು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಮ್ಮ ಭಾವನೆಯಲ್ಲ. ಅದನ್ನು ನೀವು ಹಾಕಿದಂಥ ಸತ್ಸಂಪ್ರದಾಯ. ಅವರೇ Vote of confidence ಈ ಸದನದಲ್ಲಿ ಮಂಡಿಸಿ ಮಧ್ಯದಲ್ಲೇ ಓಡಿ ಹೋದಂಥ ಉದಾಹರಣೆ ಇದೆ.

ಅಧ್ಯಕ್ಷರು : ಸರ್ಕಾರದ ಪರವಾಗಿ ಮಾನ್ಯ ಸುರೇಶ್‌ಕುಮಾರ್‌ರವರು ನಾವು

ಚರ್ಚೆಗೆ ತಯಾರಿದ್ದೇವೆಂದು ಹೇಳಿದರು. ನಾನು ಈಗ ಒಂದು ನಿರ್ಣಯಕ್ಕೆ ಬರುತ್ತಿದ್ದೇನೆ. ಇವತ್ತೇನು ಸಭಾನಾಯಕರು ವಿಶ್ವಾಸ ಮತದ ನಿರ್ಣಯವನ್ನು ಮಂಡನೆ ಮಾಡಿದ್ದಾರೆ ಅದರ ಬಗ್ಗೆ ಚರ್ಚೆ ಮಾಡೋಣ. ಆ ಚರ್ಚೆಗೆ ನಾನು ಒಂದು ಕಾಲವನ್ನು ನಿಗದಿಪಡಿಸುತ್ತೇನೆ. ಆ ನಿಗದಿಯಾದ ಕಾಲಾವಧಿಯಲ್ಲಿ ಚರ್ಚೆಯನ್ನು ಮುಗಿಸಿ ಅದರ ಬಗ್ಗೆ ಒಂದು ನಿರ್ಣಯವನ್ನು ಕೈಗೊಳ್ಳೋಣ ವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ಚರ್ಚೆಗೆ ಎರಡು ಗಂಟೆಗಳ ಕಾಲವನ್ನು ನಾನು ನಿಗದಿ ಮಾಡುತ್ತಿದ್ದೇನೆ. ಅದರಲ್ಲಿ ಕಾಂಗ್ರೆಸ್ ಪಕ್ಷಕ್ಕೆ 60 ನಿಮಿಷ, ಭಾರತೀಯ ಜನತಾ ಪಕ್ಷಕ್ಕೆ 40 ನಿಮಿಷ ಹಾಗೂ ಜೆ.ಡಿ.ಎಸ್. ಪಕ್ಷಕ್ಕೆ 20 ನಿಮಿಷ. ಈ ರೀತಿಯಾಗಿ ಎರಡು ತಾಸುಗಳ ಕಾಲಾವಧಿಯನ್ನು ನಾನು ನಿಗದಿ ಮಾಡಿದ್ದೇನೆ. ಆ ಪ್ರಕಾರ ಚರ್ಚೆಯನ್ನು ಈಗ ಪ್ರಾರಂಭ ಮಾಡೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಮಗೆ 60 ನಿಮಿಷ, ಅವರಿಗೆ 40 ನಿಮಿಷ ಎಂದು ಹೇಳುತ್ತಿದ್ದೀರಿ. ಅವರಿಗೇನು ಅದು ಬೇಕಾಗಿಲ್ಲ.

ಅಧ್ಯಕ್ಷರು : ಅವರು ಪ್ರಾರಂಭ ಮಾಡಲಿ.

ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ರಾಜ್ಯದ ಮುಖ್ಯಮಂತ್ರಿಯಾಗಿ ನೇಮಕಗೊಂಡ ತರುವಾಯ ಘನತೆವೆತ್ತ ರಾಜ್ಯಪಾಲರು ನೀಡಿದ ಸಲಹೆಯಂತೆ ನನ್ನ ಸಚಿವ ಸಂಪುಟಕ್ಕೆ ಗೌರವಾನ್ವಿತ ಸದನದ ವಿಶ್ವಾಸ ಮತವನ್ನು ಕೋರಿ ಪ್ರಸ್ತಾಪವನ್ನು ಈಗಾಗಲೇ ನಾನು ಮಂಡನೆ ಮಾಡಿದ್ದೇನೆ. ಕರ್ನಾಟಕದಲ್ಲಿ ಭಾರತೀಯ ಜನತಾ ಪಕ್ಷದ ನೇತೃತ್ವದ ಸರ್ಕಾರದ ಪ್ರತಿಷ್ಠಾಪನೆಯೊಂದಿಗೆ ದಕ್ಷಿಣ ಭಾರತದ ಇತಿಹಾಸದಲ್ಲಿ ಹೊಸ ಯುಗ ಆರಂಭವಾಗಿದೆ. ಭಾರತೀಯ ಜನತಾ ಪಕ್ಷಕ್ಕೆ ಅಭೂತಪೂರ್ವವಾದ ಬೆಂಬಲವನ್ನು ನೀಡುವ ಮೂಲಕ ಏಕ ಪಕ್ಷದ ಸ್ಥಿರ ಸರ್ಕಾರ ಅಸ್ತಿತ್ವಕ್ಕೆ ಬರುವುದಕ್ಕೆ ಈ ನಾಡಿನ ಜನ ಆಶೀರ್ವಾದ ಮಾಡಿದ್ದಾರೆ. ನಾನು ಈ ಮನೆಯ ಮೂಲಕ ಕನ್ನಡ ನಾಡಿನ ಐದೂವರೆ ಕೋಟಿ ಜನರಿಗೆ ಋಣಿಯಾಗಿದ್ದೇನೆ. ನಿಮ್ಮ ನಂಬಿಕೆ ಮತ್ತು ವಿಶ್ವಾಸವನ್ನು ಉಳಿಸಿಕೊಂಡು ಕರ್ನಾಟಕ ರಾಜ್ಯವನ್ನು ಒಂದು ಮಾದರಿ ರಾಜ್ಯವನ್ನಾಗಿ ಮಾಡಲು ಈ ಸದನದಲ್ಲಿರುವ ಎಲ್ಲಾ 224 ಸದಸ್ಯರುಗಳ ಸಹಕಾರವನ್ನು ಪಡೆದು ಪ್ರಾಮಾಣಿಕವಾಗಿ ಕೆಲಸವನ್ನು ಮಾಡುತ್ತೇನೆ ಎಂದು ಹೇಳಲು ಇಚ್ಛೆ ಪಡುತ್ತೇನೆ. 2004ರ ಚುನಾವಣೆಯಲ್ಲಿ ಬಿ.ಜೆ.ಪಿ. ನೇತೃತ್ವದಲ್ಲಿ ಕಾಂಗ್ರೆಸ್ಸೇತರ ಸರ್ಕಾರ ಮಾಡಲು ಅವಕಾಶ ದೊರಕಿತ್ತು. ಆದರೆ ಸಮ್ಮಿಶ್ರ ಸರ್ಕಾರದ ಪ್ರತಿಷ್ಠಾಪನೆ ಯೊಂದಿಗೆ ಜನಾದೇಶಕ್ಕೆ ವಿರುದ್ಧವಾದಂಥ ಒಂದು ವ್ಯವಸ್ಥೆ ನೆಲೆಗೊಳ್ಳುವಂಥದ್ದು

ಈ ನಾಡಿನ ಜನತೆಗೆ ಗೊತ್ತಿರುವ ಸಂಗತಿ. 20 ತಿಂಗಳ ಅವಧಿಯಲ್ಲಿ ಭಾರತೀಯ ಜನತಾ ಪಕ್ಷ ಆ ಸಮ್ಮಿಶ್ರ ಸರ್ಕಾರದ ಭಾಗವಾಗಿ ಕಾರ್ಯನಿರ್ವಹಿಸಿದ ರೀತಿಯನ್ನು ಮನಗಂಡ ರಾಜ್ಯದ ಜನತೆ 2008ರ ಚುನಾವಣೆಯಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಬಿ.ಜೆ.ಪಿ. ಸದಸ್ಯರನ್ನು ಆಯ್ಕೆ ಮಾಡಿರುವಂಥದ್ದು. ಇಂದು ರಾಜ್ಯದ ಜನತೆಗೆ ಅಭಿವೃದ್ಧಿ ಬೇಕಾಗಿದೆ. ಮತ್ತೆ ಮತ್ತೆ ಚುನಾವಣೆ ಜನರಿಗೆ ಸಾಕಾಗಿದೆ. ಈ 40 ತಿಂಗಳು ನಡೆದ ಘಟನಾವಳಿಗಳನ್ನು ನೋಡಿ ಜನರು ಆಕ್ರೋಶಗೊಂಡಿದ್ದಾರೆ. ಅದಕ್ಕಾಗಿ ಒಂದು ಪಕ್ಷದ ಬಹುಮತದತ್ತ ತಮ್ಮ ಅಭಿಪ್ರಾಯವನ್ನು ನೀಡಿರುವುದು ನಮಗೆಲ್ಲ ಗೊತ್ತಿರುವ ಸಂಗತಿ. ಜನ ಅಭೀವೃದ್ಧಿ, ಸ್ಥಿರತೆ ಮತ್ತು ಸ್ಪಂದನಾಶೀಲ ಆಡಳಿತವನ್ನು ಬಯಸಿ ನಮಗೆ ಮತವನ್ನು ನೀಡಿದ್ದಾರೆ. ಜನರ ಆಶಯಗಳಿಗೆ ಅವರ ಭಾವನೆಗಳಿಗೆ ಮತ್ತು ಅವರ ಅಗತ್ಯತೆಗಳಿಗೆ ಸ್ಪಂದಿಸುವ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡುತ್ತೇವೆ ಎಂಬ ಭರವಸೆಯನ್ನು ಕನ್ನಡ ನಾಡಿನ ಐದೂವರೆ ಕೋಟಿ ಜನರಿಗೆ ಈ ಮನೆಯ ಮೂಲಕ ಭಿನ್ನವಿಸಿಕೊಳ್ಳಲು ಇಚ್ಛೆಪಡುತ್ತೇನೆ. ಪ್ರಜಾತಂತ್ರ ಕರ್ನಾಟಕದಲ್ಲಿ ಪ್ರಾಚೀನ ಕಾಲದಲ್ಲಿ ರಾಜಸತ್ತೆಯ ನಡುವೆಯೇ ಉಸಿರಾಡಿದ್ದನ್ನು ಇತಿಹಾಸ ಗುರುತು ಮಾಡಿದೆ. 12ನೇ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ಕಲ್ಯಾಣ ಅನುಭವ ಮಂಟಪದಲ್ಲಿ ನಡೆದಿದ್ದ ಮುಕ್ತ ಚಿಂತನೆ, ವಿಚಾರ ಕ್ರಾಂತಿಯ ಉದಯಕ್ಕೆ ಕಾರಣವಾದಂಥದ್ದು ಕನ್ನಡಿಗರಾದ ನಮ್ಮೆಲ್ಲರಿಗೂ ಹೆಮ್ಮೆಯನ್ನು ತರುವಂಥ ಸಂಗತಿಯೆಂದು ನಾನಾದರೂ ಭಾವಿಸಿದ್ದೇನೆ.

ರಾಜ್ಯಸತ್ತೆಯನ್ನು ಪ್ರಜಾಸತ್ತೆಯಷ್ಟೆ ಜನಪರ ಮತ್ತು ಕ್ರಿಯಾಶೀಲಗೊಳಿಸುವ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರು, ಮುತ್ಸದ್ಧಿ ವಿಶ್ವೇಶ್ವರಯ್ಯನವರಂತಹ ಆಡಳಿತಗಾರರಿಂದ ನಾವು ಸ್ಫೂರ್ತಿಯನ್ನು ಪಡೆಯಬೇಕೆಂದು ಭಾವಿಸಿದ್ದೇನೆ. ಬಸವಣ್ಣನವರ ಕಾಯಕ ತತ್ವ, ಗಾಂಧೀಜಿಯವರ ಬದುಕು ಮತ್ತು ಅವರ ಹೋರಾಟ ಹಾಗೂ ಅಂಬೇಡ್ಕರ್ ಚಿಂತನೆಗಳಿಂದ ಬಾಲ್ಯದಿಂದಲೇ ಪ್ರಭಾವಿತನಾದವನು ನಾನು. ಒಂದು ಕಡೆ ಒಂದು ಮಾತನ್ನು ಹೇಳುತ್ತಾರೆ, ಅದೇನೆಂದರೆ ಕಷ್ಟ ಪಡಲು ಸದಾ ಸಿದ್ಧನಾಗು, ಯಶಸ್ಸು ತಾನಾಗಿಯೇ ಸಿಗುತ್ತದೆ ಎಂದು ಹೇಳುತ್ತಾರೆ. ನಾನು ಒಬ್ಬ ಸಾಮಾನ್ಯ ರೈತನ ಮಗ. ಮೂರುವರೆ ದಶಕಗಳಿಂದ ರೈತರ ಮಧ್ಯೆ, ಕೂಲಿ ಕಾರ್ಮಿಕರ ಮಧ್ಯೆ, ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದ ಜನರ ಮಧ್ಯೆ ಹೋರಾಟ ಮಾಡಿಕೊಂಡು ಇವತ್ತು ನಾನು ಈ ಒಂದು ಸ್ಥಾನದಲ್ಲಿ ನಿಂತಿದ್ದೇನೆ. ಸಂಘದ, ದೇಶಭಕ್ತಿ ಮತ್ತು ಶಿಸ್ತಿನ ವಾತಾವರಣದಲ್ಲಿ ಬೆಳೆದಂತಹ ಒಬ್ಬ ಸಾಮಾನ್ಯ ವ್ಯಕ್ತಿ ನಾನು. ಗಾಂಧೀಜಿಯವರು ಆರಾಧಿಸುತ್ತಿದ್ದ ಸಹನೆ, ಸಹಿಷ್ಣತೆ ಮತ್ತು ತ್ಯಾಗ ಬದುಕಿಗೆ ಒಂದು ಅರ್ಥವನ್ನು

ತರುತ್ತದೆ ಎನ್ನುವ ಬಗ್ಗೆ ಪ್ರಬಲವಾಗಿ ನಂಬಿಕೆ ಹೊಂದಿರುವ ವ್ಯಕ್ತಿ ನಾನು. ಸ್ವಾತಂತ್ರ್ಯದ ನಂತರ ಇಲ್ಲಿಯವರೆಗೆ ಕರ್ನಾಟಕದ ದಕ್ಷ, ಜನಾನುರಾಗಿ ಮತ್ತು ಕ್ರಿಯಾಶೀಲ ಮುಖ್ಯಮಂತ್ರಿಗಳನ್ನು ಈ ನಾಡು ಕಂಡಿದೆ. ಪ್ರಥಮ ಮುಖ್ಯಮಂತ್ರಿ ಕೆ.ಸಿ.ರೆಡ್ಡಿಯವರಿಂದ ಮೊದಲುಗೊಂಡು ಕೆಂಗಲ್, ಎಸ್.ಎನ್, ಅರಸು, ಪಟೇಲ್ ಮೊದಲಾದ ಮಹಾನ್ ನಾಯಕರನ್ನು ನಾವು ನೋಡಿದ್ದೇವೆ. ಆ ಮಹಾನ್ ನಾಯಕರು ಹಾಕಿಕೊಟ್ಟಿರುವ ಉನ್ನತ ಪರಂಪರೆಯ ಬೇರುಗಳನ್ನು ಭದ್ರಪಡಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವ ಭರವಸೆಯನ್ನು ನಾನು ನಾಡಿನ ಜನತೆಗೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ನೀರಾವರಿ ಮತ್ತು ಗ್ರಾಮೀಣಾಭಿವೃದ್ಧಿಗೆ ಖಚಿತ ದಿಕ್ಕು ತೋರಿದ ನಿಜಲಿಂಗಪ್ಪ, ಆಡಳಿತದಲ್ಲಿ ಶಿಸ್ತು ಮತ್ತು ದಕ್ಷತೆಗೆ ಹೆಸರಾದ ವೀರೇಂದ್ರ ಪಾಟೀಲ್ ಅವರು, ಸಾಮಾಜಿಕ ನ್ಯಾಯದ ಪರಿಕಲ್ಪನೆಗೆ ಒಂದು ಹೊಸ ಭಾಷೆ ಬರೆದ ದೇವರಾದ ಅರಸು ಅವರು, ಆಡಳಿತ ವಿಕೇಂದ್ರಿಕರಣದ ರೂವಾರಿ ರಾಮಕೃಷ್ಣ ಹೆಗ್ಡೆ ಅವರು ಅಧಿಕಾರದ ವ್ಯಾಮೋಹಕ್ಕೆ ಒಳಗಾಗದ ಪಟೇಲ್ ಅವರು, ರೈತರ ಕಲ್ಯಾಣಕ್ಕೆ ತಮ್ಮನ್ನೇ ಅರ್ಪಿಸಿಕೊಂಡಿದ್ದ ಮಾನ್ಯ ಮಾಜಿ ಪ್ರಧಾನಮಂತ್ರಿ ದೇವೇಗೌಡರಂತಹವರು ಇಲ್ಲಿ ಮುಖ್ಯಮಂತ್ರಿಗಳಾಗಿ ತಮ್ಮದೆ ಆದಂತಹ ಒಂದು ಕೊಡುಗೆಯನ್ನು ಕನ್ನಡ ನಾಡಿಗೆ ಜನರ ಅಭಿವೃದ್ಧಿಗೆ ಕೊಟ್ಟಿದ್ದಾರೆ. ಸಶಕ್ತ ಮತ್ತು ಸಮೃದ್ಧ ಕರ್ನಾಟಕ ನಿರ್ಮಾಣದ ನಮ್ಮ ಸಂಕಲ್ಪವನ್ನು ಜನರು ಮನ್ನಿಸಿದ್ದಾರೆ, ಅವರು ನೀಡಿರುವ ಮನ್ನಣೆಯನ್ನು ಉಳಿಸಿಕೊಳ್ಳುವಂತಹ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ ಎಂದು ಭಾವಿಸಿದ್ದೇನೆ. ಚುನಾವಣೆ ಕಾಲದ ಸಂಘರ್ಷದ ಗುಂಗಿನಿಂದ ಹೊರ ಬಂದು ನಾಡಿನ ಅಭಿವೃದ್ಧಿಯನ್ನೇ ಏಕೈಕ ಧ್ಯೇಯವಾಗಿಸಿಕೊಂಡು ನನ್ನ ಸರ್ಕಾರದ ಕೆಲಸ ಮಾಡಲಿದೆ ಎನ್ನುವ ಭರವಸೆಯನ್ನು ಈ ಸಂದರ್ಭದಲ್ಲಿ ತಮ್ಮೆಲ್ಲರಿಗೂ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಆದುದರಿಂದ ಅಭಿವೃದ್ಧಿ ಮಾತ್ರ ನನ್ನ ಮಂತ್ರ. ನೀವು ಯಾವುದೇ ರೀತಿಯ ಸಲಹೆಗಳನ್ನು ಕೊಟ್ಟರೂ ಸಹ ಕನ್ನಡ ನಾಡಿಗೆ ಏನೂ ಕೊರತೆ ಇಲ್ಲ. ನಾನು ಎಲ್ಲಾ ಕಡೆಗೆ ಹೋದಾಗ ಹೇಳುತ್ತಿದ್ದೆ, ವಿಜಯನಗರ ಸಾಮ್ರಾಟರ ಕಾಲದಲ್ಲಿ ವಜ್ರವೈಢೂರ್ಯಗಳನ್ನು ಮಾರಾಟ ಮಾಡಿದಂತಹ ಈ ನಾಡು, ಗಂಧದ ನಾಡು, ರೇಷ್ಮೆಯ ಬೀಡು. ಎಲ್ಲವೂ ಇದೆ, ಅದನ್ನು ಉಪಯೋಗ ಮಾಡಿಕೊಂಡು ಈ ನಾಡಿನ ಜನರ ಕಲ್ಯಾಣಕ್ಕಾಗಿ ಕೆಲಸ ಮಾಡುವಂತಹ ಪ್ರಾಮಾಣಿಕ ಕೈಗಳ ಕೊರತೆ ಇದೆ ಎನ್ನುವ ಭಾವನೆ ಈ ನಾಡಿನ ಜನರಲ್ಲಿ ಮೂಡಿದೆ. ಅದನ್ನು ತೆಗೆದು ಹಾಕುವಂತಹ ಕೆಲಸ ಯಾರೋ ಈ ಕಡೆ ಕುಳಿತಿರುವಂತಹ ಕೆಲವರಿಂದ ಸಾಧ್ಯವೆಂದು ನಾನು ಭಾವಿಸುವುದಿಲ್ಲ. ಬಹುಶಃ ಸ್ವಾತಂತ್ರ್ಯ ನಂತರ ನನಗೆ ನೆನಪಿರುವಂತೆ ಮೊದಲ ಬಾರಿಗೆ ನಾನು

ನಂಬಿಕೊಂಡು ಬಂದಿದ್ದು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಆಡಳಿತ ಪಕ್ಷಕ್ಕೆ ಎಷ್ಟು ಜವಾಬ್ದಾರಿ ಇದೆಯೋ ಅದಕ್ಕಿಂತ ಹೆಚ್ಚಿನ ಜವಾಬ್ದಾರಿ ವಿರೋಧ ಪಕ್ಷಕ್ಕಿದೆ ಎಂದು ನಾನು ಅಲ್ಲಿ ಕುಳಿತು ಕೆಲಸ ಮಾಡಿಕೊಂಡು ಬಂದವನು. ಇವತ್ತು ಒಂದು ರೀತಿ ಸಮಬಲವಿರುವ ಈ ಸಂದರ್ಭದಲ್ಲಿ ಒಂದು ರೀತಿಯಲ್ಲಿ ನಿಜಕ್ಕೂ ಸಹ ಪ್ರತಿಯೊಂದು ನನ್ನ ಹೆಜ್ಜೆಯನ್ನು ಗುರುತಿಸಿ ಅಲ್ಲಾಗುವ ಕೊರತೆಯನ್ನು ಗಮನಿಸಿ ನಮಗೆ ಮಾರ್ಗದರ್ಶನ ಮಾಡುವ ಅನುಭವಿ ನಾಯಕರು ಪ್ರತಿಪಕ್ಷದಲ್ಲಿ ಕುಳಿತಿರುವುದು ನಿಜಕ್ಕೂ ನನಗೆ ಹೆಮ್ಮೆ ತರುವಂತ ಸಂಗತಿ. ಇವತ್ತು ನಾವು ನೀವು ಮನಸ್ಸು ಮಾಡಿದರೆ, ಪ್ರತಿ ಹೆಜ್ಜೆಯನ್ನು ಕಣ್ಣಿಟ್ಟು ನೋಡುವ ಪ್ರಯತ್ನವನ್ನು ನಾವು ನೀವೆಲ್ಲಾ ಒಟ್ಟಾಗಿ ಮಾಡಿದರೆ, ನಿಜವಾಗಿಯೂ ಸಹ ಅಧಿಕಾರಿಗಳು ಕೂಡ ಬಹುಶಃ ಎಚ್ಚರಿಕೆಯಿಂದ ಕೆಲಸ ಮಾಡುತ್ತಾರೆ, ನಾವು ಸಹ ಜನಸೇವೆ ಮಾಡುವುದಕ್ಕೆ ಇದೊಂದು ಅವಕಾಶವೆಂದು ತಿಳಿದು ಕೊಂಡಿದ್ದೇನೆ. ಮುಂಬರುವ 5 ವರ್ಷಗಳ ಅವಧಿಯಲ್ಲಿ ನಮ್ಮ ಸಂಕಲ್ಪದಂತೆ ರಾಜ್ಯದ ಜನರಿಗೆ ಆಹಾರದ ಹಕ್ಕು, ಆರೋಗ್ಯದ ಹಕ್ಕು, ಶಿಕ್ಷಣದ ಹಕ್ಕು, ವಸತಿಯ ಹಕ್ಕು, ಶಾಂತಿ, ಸಾಮಾಜಿಕ ನ್ಯಾಯದ ಹಕ್ಕು ಅಲ್ಲದೆ ಗ್ರಾಮೀಣ, ನಗರ ಪ್ರದೇಶಗಳ ಮೂಲಸೌಕರ್ಯಗಳನ್ನು ಮೇಲ್ದರ್ಜೆಗೇರಿಸಿ ಜನಜೀವನ ಗುಣಮಟ್ಟವನ್ನು ಸುಧಾರಿಸುವುದು ಕೂಡ ನಮ್ಮ ಸರ್ಕಾರ ಆದ್ಯತೆಯಾಗಿದೆ ಎಂದು ಹೇಳುತ್ತೇನೆ. ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎನ್ನುವ ನೀತಿಗೆ ನಮ್ಮ ಸರ್ಕಾರ ಬದ್ಧವಾಗಿ ಎಲ್ಲಾ ವರ್ಗದ ಜನರ ಕಲ್ಯಾಣಕ್ಕೆ ಶ್ರಮಿಸುತ್ತೇವೆಂಬುದನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೆ ಮತ್ತೆ ಈಗಾಗಲೇ ಹೇಳಿರುವಂತೆ ಸಂಘರ್ಷ ಮತ್ತು ದ್ವೇಷ ರಾಜಕಾರಣದಲ್ಲಿ ನನಗೆ ನಂಬಿಕೆ ಇಲ್ಲ. ಆದಷ್ಟು ಒಮ್ಮತದ ಆಧಾರದ ಮೇಲೆ ನಿಮ್ಮೆಲ್ಲರ ಸಹಕಾರದೊಂದಿಗೆ ಈ ನಾಡು ನಿರ್ಮಾಣ ಕಾಯಕದಲ್ಲಿ ತೊಡಗಿಸಿಕೊಳ್ಳುವಂತಹ ಸಂಕಲ್ಪ ನನ್ನದಾಗಿದೆ. ರಾಜಸತ್ತೆಯ ಅಂತ್ಯದೊಳಗೆ ಪ್ರಜಾಸತ್ತೆ ಉದಯವಾಗಿದೆ. ಪ್ರಜಾಸತ್ತೆ ಎಂದರೆ ಪ್ರಜೆಯೇ ಪ್ರಭು. ನಾನು ಅತ್ಯಂತ ವಿನಮ್ರದಿಂದ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ, ತಾವು ಪರೀಕ್ಷೆ ಮಾಡಿ, ಮುಖ್ಯಮಂತ್ರಿಯ ಸ್ಥಾನವೆಂದರೆ ರಾಜನಸ್ಥಾನವೆಂದು ನಾನು ತಿಳಿದುಕೊಂಡಿಲ್ಲ. ಐದೂವರೆ ಕೋಟಿ ಕನ್ನಡ ನಾಡಿನ ಜನರ ಸೇವೆ ಮಾಡಲು ಇರುವ ನಾನೊಬ್ಬ ಸೇವಕನೆಂದು ತಿಳಿದುಕೊಂಡು ಅತ್ಯಂತ ವಿನಮ್ರತೆಯಿಂದ ಕೆಲಸ ಮಾಡುತ್ತೇವೆ ಎನ್ನುವ ಭರವಸೆಯನ್ನು ನಾನು ಈ ಮನೆಗೆ ಕೊಡುತ್ತಿದ್ದೇನೆ. ಈ ಭಾರಿಯ ಚುನಾವಣೆಯಲ್ಲಿ ಶೋಷಿತ ವರ್ಗಗಳು, ಹಿಂದುಳಿದ ವರ್ಗದವರು ಮತ್ತು

ಅಲ್ಪಸಂಖ್ಯಾತ ಬಂಧುಗಳು ನಮಗೆ ಅಧಿಕ ಸಂಖ್ಯೆಯಲ್ಲಿ ಮತವನ್ನು ನೀಡಿದ್ದಾರೆ. ಅದಕ್ಕಾಗಿ ಆ ಎಲ್ಲಾ ಮತ ಬಾಂಧವರಿಗೆ ನಾನು ಕೃತಜ್ಞತೆಯನ್ನು ಈ ಸಂದರ್ಭದಲ್ಲಿ ಸಲ್ಲಿಸುತ್ತಿದ್ದೇನೆ. ಈ ಪರಿಶಿಷ್ಟಜಾತು: ಪರಿಶಿಷ್ಟ ವರ್ಗ, ಹಿಂದುಳಿದ ವರ್ಗದ ಜನ ಚುನಾವಣೆಯಲ್ಲಿ ಸ್ಪರ್ಧೆ ಮಾಡಿದಂತಹವರು ಭಾರಿ ಹೆಚ್ಚಿನ ಸಂಖ್ಯೆಯಲ್ಲಿ ಭಾರತೀಯ ಜನತಾ ಪಾರ್ಟಿಯಲ್ಲಿ ಆಯ್ಕೆಯಾಗಿರುವುದು, ಕಳೆದ ಅನೇಕ ವರ್ಷಗಳಿಂದ ಆ ಸಮೂಹಕ್ಕೆ ನಂಬಿಕೆ ವಿಶ್ವಾಸವನ್ನು ಪಡೆಯುವುದರಲ್ಲಿ ನಾವು ಸಫಲರಾಗಿದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಶೋಷಿತರಿಗೆ ಅಗ್ರಸ್ಥಾನವನ್ನು ನೀಡುವ ಬಸವ ತತ್ವದ ಅನುಯಾಯಿಯಾಗಿ ನಾನು ಈ ಬೆಳವಣಿಗೆಯನ್ನು ಬಹಳ ಹರ್ಷದಿಂದ ಗಮನಿಸಿದ್ದೇನೆ. ಈ ವರ್ಗದ ಕಲ್ಯಾಣಕ್ಕಾಗಿ ಬದುಕಿರುವವರೆಗೆ ನಾನು ಕೆಲಸ ಮಾಡುತ್ತೇನೆ. ಸರ್ಕಾರದಲ್ಲಿ 5 ವರ್ಷಗಳ ಕಾಲ ಶೋಷಿತಪೀಡಿತ ದಲಿತ ಜನಾಂಗದ ಅಭಿವೃದ್ಧಿಗಾಗಿ ಅವರು ಸ್ವಾಭಿಮಾನದಿಂದ, ನೆಮ್ಮದಿಯಿಂದ, ಗೌರವದಿಂದ ಬದುಕುವುದಕ್ಕೆ ಏನು ಸಾಧ್ಯವಿದೆಯೊ ಅದೆಲ್ಲವನ್ನೂ ನಿಮ್ಮೆಲ್ಲರ ಸಹಕಾರದಿಂದ ಮಾಡುವುದಕ್ಕೆ ನಾನು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ ಎನ್ನುವ ಭರವಸೆಯನ್ನು ನಾನು ಈ ಸಂದರ್ಭದಲ್ಲಿ ಕೊಡುತ್ತೇನೆ. ನಮ್ಮ ಸರ್ಕಾರದ ಆಡಳಿತದಲ್ಲಿ "ಇವನಾರವ ಇವನಾರವ ಎಂದೆಣಿಸದೆ, ಇವ ನಮ್ಮವ ಇವ ನಮ್ಮವ ಎಂದೆಣಿಸಿ" ಸರ್ವರನ್ನು ಸಮಭಾವದಿಂದ ನೋಡುವ ಮತ್ತು ಸರ್ವರ ಏಳಿಗೆಗೆ ಸಮಾನ ಅವಕಾಶ ಕಲ್ಪಿಸಲು ನಾನು ನಿರ್ಧರಿಸಿದ್ದೇನೆ. ನನ್ನ ಮಂತ್ರಿಮಂಡಲದಲ್ಲಿ ಈ ವರ್ಗಕ್ಕೆ ಹಿಂದೆದಿಗಿಂತ ಹೆಚ್ಚಿನ ಸ್ಥಾನವನ್ನು ಕಲ್ಪಿಸಿದ್ದೇನೆ ಎನ್ನುವಂತಹ ಸಮಾಧಾನ ನನಗಿದೆ. ಪರಿಶಿಷ್ಟ ಜಾತಿಯವರು ಏಳು ಜನ, ಪರಿಶಿಷ್ಟವರ್ಗದವರು ಒಬ್ಬರು, ಹಿಂದುಳಿದ ವರ್ಗಕ್ಕೆ ಸೇರಿದ ಮೂವರು ಮತ್ತು ಮುಸ್ಲಿಂ ಸಮುದಾಯದವರು ಒಬ್ಬರು ಮತ್ತು ಜೈನ ಸಮುದಾಯದ ಒಬ್ಬರು ಸೇರಿ ಇವತ್ತು ಸಚಿವ ಸಂಪುಟಕ್ಕೆ ಸೇರ್ಪಡೆಯಾಗಿರುವುದನ್ನು ತಾವು ಗಮನಿಸಿದ್ದೀರಿ ಎಂದು ನಾನು ಭಾವಿಸಿದ್ದೇನೆ. ಶೋಷಿತ ವರ್ಗಗಳಿಗೆ ಅಗ್ರ ಸ್ಥಾನ ನೀಡಿ, ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪ್ರಧಾನ ಪಾತ್ರ ವಹಿಸುವಂತಹ ಒಂದು ವಾತಾವರಣ ಮೂಡಿಸುವಂತದ್ದು ನನ್ನ ಗುರಿಯಾಗಿದೆ. ಸ್ವಾತಂತ್ರ್ಯ ಭಾರತದ ಉದಯಕ್ಕೆ ಕಾರಣರಾದ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಆದರ್ಶ ಮತ್ತು ಕನಸುಗಳನ್ನು ಸಾಕಾರಗೊಳಿಸಲು ನನ್ನಿಂದಾಗುವಂತಹ ಎಲ್ಲ ಪ್ರಯತ್ನಗಳನ್ನು ನಾನು ಮಾಡುತ್ತೇನೆ. ನಾನು ದೆಹಲಿಗೆ ಹೋದಾಗ ರಾಜ್‌ಘಾಟ್‌ಗೆ ಹೋಗಿ ಮಹಾತ್ಮಾ ಗಾಂಧೀಜಿಯವರ ಮುಂದೆ ನಿಂತು ನಮನವನ್ನು ಸಲ್ಲಿಸಿ ಯಾವ ವಿಚಾರಗಳನ್ನು ನನ್ನ ಮನಸ್ಸಿನಲ್ಲಿ

ಇಟ್ಟುಕೊಂಡಿದ್ದೇನೋ, ಆ ಮಹಾತ್ಮ ಗಾಂಧೀಜಿಯವರ ಗ್ರಾಮರಾಜ್ಯ, ರಾಮರಾಜ್ಯದ ಆ ಕಲ್ಪನೆಯನ್ನು ಸಾಕಾರಗೊಳಿಸುವಂತಹ ಶಕ್ತಿ ನೀಡಬೇಕೆಂದು ಪ್ರಾರ್ಥನೆ ಮಾಡಿ ಬಂದಿದ್ದೇನೆ. ಲಭ್ಯ ಇರುವಂತಹ ಪ್ರತಿ ಕ್ಷಣವನ್ನು ನಾಡಿನ ಏಳಿಗೆಗಾಗಿ ಬಳಸಿಕೊಳ್ಳುವ ಮೂಲಕ ಜನರ ಋಣವನ್ನು ತೀರಿಸುವಂತಹ ಒಂದು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಕನ್ನಡ ನಾಡು ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳ ಒಂದು ಕಣಜ, ದುಡಿಯುವ ಎಲ್ಲಾ ಕೈಗಳಿಗೆ ಕೆಲಸ, ಎಲ್ಲರಿಗೂ ರಕ್ಷಣೆ, ವಿಶೇಷವಾಗಿ ನಮ್ಮ ಹೆಣ್ಣು ಮಕ್ಕಳು ನಿರ್ಭಯವಾಗಿ ಬದುಕುವ ಮತ್ತು ನಾಡು ಕಟ್ಟುವ ಕಾಯಕದಲ್ಲಿ ಎಲ್ಲರಂತೆ ಭಾಗಿಯಾಗುವ ವ್ಯವಸ್ಥೆಯ ನಿರ್ಮಾಣ ನನ್ನ ಕನಸಾಗಿದೆ. ಇತ್ತೀಚೆಗೆ ಒಬ್ಬ ಜಗದ್ಗುರು ಹೇಳಿರುವಂತಹ ಮಾತನ್ನು ಇಲ್ಲಿ ಕುಳಿತಿರುವಂತಹ ನಾವೆಲ್ಲರೂ ಗಮನಿಸಬೇಕು. ಅವರು ಏನು ಹೇಳಿದ್ದಾರೆ ಎಂದರೆ "ಉಣ್ಣುವವನು ಉಣ್ಣುತ್ತಲೇ ಇದ್ದಾನೆ, ದುಡಿಯುವವನು ದುಡಿಯುತ್ತಲೇ ಇದ್ದಾನೆ, ಉಣ್ಣುವ ವರ್ಗ ಒಂದಾದರೆ, ದುಡಿಯುವ ವರ್ಗವೇ ಒಂದಾಗಿದೆ. ಉಣ್ಣುವವನು ದುಡಿಯುವಂತಿಲ್ಲ. ದುಡಿಯುವವನು ಉಣ್ಣುವಂತಿಲ್ಲ." ಎಂತಹ ಅರ್ಥಗರ್ಭಿತ ಮಾತು, ಬಹುಶಃ ಸ್ವಾತಂತ್ರ್ಯ ಬಂದ ಇಷ್ಟು ವರ್ಷಗಳ ನಂತರವೂ ಈ ಪರಿಸ್ಥಿತಿಯನ್ನು ನೋಡಿದಾಗ ಕಣ್ಣಿನಲ್ಲಿ ನೀರು ಬರುತ್ತದೆ. ನಾನು ಹಣಕಾಸಿನ ಸಚಿವನಾಗಿದ್ದಾಗ, ಗೋಪಾಲಕೃಷ್ಣ ಅಡಿಗರ ಒಂದು ಮಾತನ್ನು ಹೇಳಿದ್ದೆ, "ಅನ್ನವನು ಕೊಡು ಮೊದಲು, ಬಟ್ಟೆಯನು ಕೊಡು ಉಡಲು, ಕಟ್ಟಿಕೊಡು ಮನೆಗಳನ್ನು, ಇದು ಮೊದಲು, ಆಮೇಲೆ ಉಳಿದದ್ದೆಲ್ಲಾ" ಎಂದು ಹೇಳಿದ್ದಾರೆ. ಅಂದರೆ ಇಷ್ಟು ವರ್ಷಗಳ ನಂತರವೂ ಸಹ ಇಷ್ಟು ವಿಶಾಲವಾದಂತಹ ಈ ಪ್ರದೇಶ ಅಲ್ಲಿ, ಶೋಷಿತ ಪೀಡಿತ ವ್ಯಕ್ತಿಗಳಿಗೆ ಇರುವುದಕ್ಕೆ ಒಂದು ಮನೆ/ನೆರಳು ಕೊಡುವುದಕ್ಕಾಗಲಿಲ್ಲ, ದುಡಿಯುವಂತಹ ಕೈಗಳಿಗೆ ಕೆಲಸ ಕೊಡುವುದಕ್ಕಾಗಲಿಲ್ಲ, ಹಳ್ಳಿ ಬಿಟ್ಟು ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಕೃಷಿ ಬೇಡವೆಂದು ರೈತ ಬೇಸತ್ತಿದ್ದಾನೆ. ಕೃಷಿಕರು ಆತ್ಮಹತ್ಯೆ ಮಾಡಿಕೊಳ್ಳುವಂತಹ ಪ್ರಸಂಗಗಳನ್ನು ನಾವು ಕಾಣುತ್ತಿದ್ದೇವೆ. ಇಂತಹ ವಿಚಿತ್ರವಾದ ಈ ಸನ್ನಿವೇಶ ಇರುವಂತಹ ಈ ಸಂದರ್ಭದಲ್ಲಿ ಬಹುಶಃ ನಾವು ನೀವು ಎಲ್ಲಾ ಒಟ್ಟಾಗಿ ಈ ನಾಡನ್ನು ಕಟ್ಟುವಂತಹ ಪ್ರಯತ್ನವನ್ನು ಮಾಡೋಣ. ನನ್ನ ಈ ನಾಡಿನಲ್ಲಿ ಅಜ್ಞಾನ, ಅನಕ್ಷರತೆಗೆ ಆಸ್ಪದ ಇಲ್ಲ, ದರ್ಪ ದೌರ್ಜನ್ಯಗಳಿಗೆ ಆಶ್ರಯವಿಲ್ಲ, ಹಸಿವು ಸಂಕಟಗಳಿಗೆ ನೆಲೆಯಿಲ್ಲ, ಮಾನವೀಯ ಮೌಲ್ಯಗಳಿಗೆ ಕೊರತೆಯಿಲ್ಲ, ನಮ್ಮ ಈ ಕರುನಾಡಿನಲ್ಲಿ ಸತ್ಯ, ಶಾಂತಿ ಮತ್ತು ಅಹಿಂಸೆಗೆ ಬರವಿಲ್ಲ, ಸುಖ ಸಂತೋಷ, ನೆಮ್ಮದಿಯ ಬೀಡೆಲ್ಲಾ, ಇದೆಲ್ಲಾ ಸಾಕಾರ ಆಗುವವರೆಗೆ ವಿಶ್ರಾಂತಿ ಇಲ್ಲ. ಸನ್ಮಾನ್ಯ

ಸಭಾಧ್ಯಕ್ಷರೆ, ಕರ್ನಾಟಕವನ್ನು ಕಲ್ಯಾಣ ಕರ್ನಾಟಕವನ್ನಾಗಿ ರೂಪಿಸುವ ನನ್ನ ಆಶಯದ ನೀಲ ನಕ್ಷೆಯನ್ನು ಬಿಚ್ಚಿರಿಸಿದ್ದೇನೆ. ಅಭಿವೃದ್ಧಿಯ ಪಥದಲ್ಲಿ ರಾಜ್ಯವನ್ನು ಮತ್ತಷ್ಟು ವೇಗವಾಗಿ ಹಾಗೂ ಪರಿಣಾಮಕಾರಿಯಾಗಿ ಮುನ್ನಡೆಸುವ ನನ್ ಸಂಕಲ್ಪಕ್ಕೆ ಸದನದ ಎಲ್ಲಾ ಗೌರವಾನ್ವಿತ ಸದಸ್ಯರುಗಳು ಸಮಭಾಗಿಗಳಾಗಿ ಸಹಕರಿಸುವಂತೆ ಮನವಿ ಮಾಡಿ, ನನ್ನ ಸರ್ಕಾರಕ್ಕೆ ವಿಶ್ವಾಸಮತವನ್ನು ಕೋರಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಚಿತ್ತಾಪುರ) (ಮಾನ್ಯ ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಸಭಾಧ್ಯಕ್ಷರೆ, ಇಷ್ಟೆಲ್ಲಾ ತಯಾರಿ ಮಾಡಿಕೊಂಡು ಬಂದು, ಒಂದು ಲೈನ್ ರೆಸಲ್ಯೂಷನ್ ಓದುತ್ತೇನೆ, ಚರ್ಚೆಗೆ ಅವಶ್ಯಕತೆ ಇಲ್ಲವೆಂದು ಹೇಳೀ, ಬಸವಣ್ಣನವರ ವಚನ, ಅಡಿಗರ ಕವಿತೆಗಳು, ಅವರು ಬರೆದುಕೊಂಡು ಬಂದಂತಹ ಕೆಲವು ಮಾತುಗಳು, ಇವೆಲ್ಲಾ ನೋಡಿದಾಗ ಇವರು ಮೊದಲೇ ತಯಾರಾಗಿ ಬಂದಂತೆ ಕಾಣುತ್ತದೆ. ಮತ್ತೆ ಅದಕ್ಕೆ ಏಕೆ ಹದಿನೈದು ನಿಮಿಷ ಟೈಮ್ ವೇಸ್ಟ್ ಮಾಡಿದಿರಿ, ತೊಂದರೆ ಇಲ್ಲ, ಯಾವ ರೀತಿಯಾಗಿ ನುಡಿಯುತ್ತೀರಿ ಮತ್ತು ನಡೆಯುತ್ತೀರಿ, ನಡೆಯಲ್ಲಿ ಮತ್ತು ನುಡಿಯಲ್ಲಿ ಇರುವ ವ್ಯತ್ಯಾಸ ಇದರಿಂದ ಗೊತ್ತಾಗುತ್ತದೆ. ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ Vote of confidence ತೆಗೆದುಕೊಳ್ಳುವುದರ ಮೇಲೆ ಅನೇಕ ವಿಚಾರಗಳನ್ನು ಜನರಲ್ಲಾಗಿ ಅವರು ಪ್ರಸ್ತಾಪ ಮಾಡಿದ್ದಾರೆ. ಅವರ ಕನಸು ಏನು, ಎಂತಹ ರಾಜ್ಯ ಕಟ್ಟಬೇಕೆಂದು ಮಾಡಿದ್ದಾರೆ, ವಿಶ್ರಾಂತಿ ತೆಗೆದುಕೊಳ್ಳದೆ ಸುಖಸಮೃದ್ಧಿಯನ್ನು ಕರ್ನಾಟಕ ರಾಜ್ಯದಲ್ಲಿ ತರಬೇಕೆಂದು ಬಯಸಿದ್ದಾರೆ. ಅನ್ನತಕ್ಕಂತಹ ಮಾತುಗಳು ಅವರ ಬಾಯಿಯಿಂದ ಬಂದವು, ಸಂತೋಷ, ಇಂತಹ ಒಂದು ಕನಸು ಇಟ್ಟುಕೊಂಡು, ಒಬ್ಬ ಕನಸುಗಾರ ಈ ನಾಡನ್ನು ಕಟ್ಟಬೇಕೆಂದು ಹೇಳುವಾಗ ನಾವು ಅನೇಕ ವಿಚಾರಗಳನ್ನು ಕಾದು ನೋಡಬೇಕಾಗುತ್ತದೆ. ನಡೆನುಡಿಯಲ್ಲಿ ಎಷ್ಟು ವ್ಯತ್ಯಾಸ ಇದೆ ಎನ್ನತಕ್ಕಂಥದ್ದು ಕೂಡ ಕಾಲವೇ ನಿರ್ಧಾರ ಮಾಡುತ್ತದೆ. ಈ ಹಿಂದೆಯೂ ಕೂಡ ಅವರು Vote of confidence ತೆಗೆದುಕೊಳ್ಳುವಾಗ ಏಳು ದಿವಸ ಗಳ ಕಾಲ ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಅದಾದ ಮೇಲೆ Vote of confidence ತೆಗೆದುಕೊಂಡು ನಾನು ಇಪ್ಪತ್ತು ತಿಂಗಳ ಕಾಲ ಯಶಸ್ವಿ ಮುಖ್ಯಮಂತ್ರಿ ಆಗುತ್ತೇನೆಂದು ಆಸೆ ಇಟ್ಟುಕೊಂಡಿದ್ದರು, ಕಾರಣಾಂತರಗಳಿಂದ ಜೆ.ಡಿ.ಎಸ್.ನವರು ಅವರದೇ ಆದಂತಹ ನಿಲುವಿಗೆ ಬಿ.ಜೆ.ಪಿ.ಯವರು ವಿರೋಧ ಮಾಡಿದಾಗ ಅಥವಾ ಅವರು ನಡೆದುಕೊಂಡಂತಹ ದಾರಿಗಳ ಮೇಲೆ ಆಕ್ಷೇಪಣೆಯನ್ನು

ತೆಗೆದುಕೊಂಡು ಕೊನೆಗೆ ಆ ಪಕ್ಷದ ಬೆಂಬಲ ವನ್ನು ವಾಪಸ್ಸು ಪಡೆದ ಮೇಲೆ, ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಏನು ಭಾಷಣ ಮಾಡುತ್ತಿದ್ದರು, Vote of confidence ಅನ್ನು ತೆಗೆದುಕೊಳ್ಳದೆ, ಮಧ್ಯದಲ್ಲೇ ಅವರು ತರಾತುರಿಯಾಗಿ ಭಾಷಣವನ್ನು ನಿಲ್ಲಿಸಿ, "ನಾನು ನೇರವಾಗಿ ರಾಜ್ಯಪಾಲರ ಬಳಿ ಹೋಗಿ ರಾಜೀನಾಮೆ ಕೊಡುತ್ತೇನೆ" ಎಂದು ಹೇಳಿದರು, ನಾನು ಈಗಲೂ ಕೂಡ ಅದನ್ನೇ ಅಪೇಕ್ಷೆ ಮಾಡಿದ್ದೆ. ಏಕೆಂದರೆ, ಇನ್ನು ಆರು ಜನ ಪಕ್ಷೇತರ ಶಾಸಕರು ನನಗೆ ಸಂಪೂರ್ಣ ಬೆಂಬಲ ಕೊಟ್ಟಿದ್ದಾರೆ, ಕರ್ನಾಟಕ ರಾಜ್ಯದ ಜನತೆ ನನ್ನ ಹಿಂದೆ ಇದೆ ಎನ್ನತಕ್ಕಂತಹ ಮಾತುಗಳನ್ನು ಹೇಳಿದರು, ನಾನು ಕೇಳಿದೆ, ನಿಮಗೆ ಸಂಪೂರ್ಣವಾದಂತಹ ಬೆಂಬಲ ಎಲ್ಲಿ ಕೊಟ್ಟಿದ್ದಾರೆ? ಸಂಪೂರ್ಣವಾದಂತಹ ಬೆಂಬಲ ನಿಮಗೆ ಸಿಗಬೇಕಾಗಿದ್ದರೆ, ತರಾತುರಿಯಲ್ಲಿ ಆರು ಪಕ್ಷೇತರ ಸದಸ್ಯರ ಪೈಕಿ ಐದು ಜನರನ್ನು ಮಂತ್ರಿಗಳಾಗಿ ಮಾಡುತ್ತಿದ್ದಿರಾ? ಭಾರತ ದೇಶದಲ್ಲಿ ಎಲ್ಲಿಯಾದರೂ ಸಂಪೂರ್ಣವಾದ ಬೆಂಬಲ ಇದೆ ಎನ್ನುವವರೆಗೆ ಪಕ್ಷೇತರರಾಗಿ ಆಯ್ಕೆಯಾಗಿ ಬಂದವರಿಗೆಲ್ಲಾ ಮಂತ್ರಿಗಳಾಗಿ ಮಾಡಿರುವ ಉದಾಹರಣೆಗಳು ಇವೆಯೇ? ನಿಮ್ಮ ಮನಸ್ಸು ಮುಟ್ಟಿ ಹೇಳಿ, ಸುಮ್ಮನೆ ನನಗೆ ಬೆಂಬಲ ಕೊಟ್ಟಿದ್ದಾರೆ ಎನ್ನುವುದು ಒಂದು ಕಡೆ, ಅಂದರೆ ನಿಮ್ಮ ಕಾಲಿನ ಮೇಲೆ ನೀವು ನಿಂತು ಸರ್ಕಾರ ಸ್ಥಾಪನೆ ಮಾಡುವಂತಹ ಸಂಖ್ಯಾಬಲವೂ ಇಲ್ಲ, ಎರಡನೆಯದು, ಜನ ಬೆಂಬಲವಾದರೂ ಇದೆಯೇ? ಜನ ಬೆಂಬಲದಲ್ಲಿ ಸುಮಾರು ನಾಲ್ಕು ಕೋಟಿ ಹತ್ತು ಲಕ್ಷ ಜನ ಮತದಾರರು ಏನು ಈ ಕರ್ನಾಟಕ ರಾಜ್ಯದಲ್ಲಿದ್ದಾರೆ, ಅವರ ಪೈಕಿ ಮತವನ್ನು ಚಲಾಯಿಸಿ ದಂತಹವರು ಸುಮಾರು ಹೆಚ್ಚು ಕಡಿಮೆ ಎರಡು ಕೋಟಿಗೂ ಮೇಲ್ಪಟ್ಟಿದ್ದಾರೆ. ಅದರಲ್ಲಿ ನಿಮಗೆ ಬಂದಂತಹ ಮತಗಳೆಷ್ಟು? 97 ಲಕ್ಷ ಮತಗಳು ನಿಮಗೆ ಬಂದಿವೆ. ಕಾಂಗ್ರೆಸ್ ಪಕ್ಷಕ್ಕೆ 99 ಲಕ್ಷ ಮತಗಳು ಬಂದಿವೆ. ಎಂದರೆ ಜನ ಬೆಂಬಲ ಯಾರಿಗಿದೆ, ನಿಮಗಿದೆಯೇ? ನಮಗಿದೆಯೋ ಸಂಖ್ಯಾಬಲ ನಿಮಗಿಲ್ಲ, ಜನ ಬೆಂಬಲವೂ ನಿಮಗಿಲ್ಲ.

ಸಿ.ಎಂ.ಉದಾಸಿ (ಸಚಿವರು) :– ಲೋಕಸಭೆಯಲ್ಲಿ ಕೊಟ್ಟಿದ್ದಾರೆ

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ :– ನೋಡಿ ನಿಮ್ಮ ನಾಯಕರು ಮಾತನಾಡುವಾಗ ನಮ್ಮವರ್ಯಾರೂ ಕೂಡ ಮಧ್ಯೆ ಮಾತನಾಡಲಿಲ್ಲ. ನಾನು ಸ್ವಲ್ಪ ಮಾತನಾಡಿದ್ದೇನೆ. ಈಗ ಕೇವಲ ಮಂತ್ರಿಮಂಡಲ ರಚಿಸಿದ್ದಾರೆ. ನಿಮಗ್ಯಾರಿಗೂ ಅವಕಾಶವಿಲ್ಲ. ಏನೋ ಅವರಿಗೆ ಚಾನ್ಸ್ ಸಿಕ್ಕದ್ದೇ ಸಿಕ್ಕಿದ್ದು. ನೀವುಗಳು ಇನ್ನೂ

ಸ್ವಲ್ಪ ಸಮಾಧಾನ ದಿಂದ ಇರಿ. ಏಕೆಂದರೆ ನಾನು ಅನೇಕ ಸಾರಿ ನೋಡಿದ್ದೇನೆ. ಮುಖ್ಯಮಂತ್ರಿಗಳು ಮಾತನಾಡುವುದಕ್ಕೆ ಎದ್ದುನಿಂತಾಗ ಅವರನ್ನು ಮೆಚ್ಚಿಸುವುದಕ್ಕೆ ಮಧ್ಯೆ ಮಧ್ಯೆ ಕೆಲವು ಜನರು ಎದ್ದುನಿಂತು ಮಾತನಾಡುತ್ತಾರೆ. ಆದರೆ ಆ ರೀತಿ ಈಗ ನಿವು ಮಾಡುವುದಕ್ಕೆ ಹೋಗಬೇಡಿ. ಏಕೆಂದರೆ ಈಗಾಗಲೇ ಎಲ್ಲ ಕೋಟಾ ಭರ್ತಿ ಯಾಗಿದೆ. ಈಗೇನು ಇನ್ನೂ ಬೋರ್ಡ್ ಅಂಡ್ ಕಾರ್ಪೋರೇಶನ್‌ಗಳು ಇವೆ ಇವುಗಳನ್ನು ನೋಡಿಕೊಂಡು ಆಮೇಲೆ ಅದನ್ನೂ ಭರ್ತಿ ಮಾಡುತ್ತಾರೆ. ಏಕೆಂದರೆ ಅವರು ಮೊದಲು ಈಗ ಸ್ಥಿರವಾಗಬೇಕಾಗಿದೆಯಲ್ಲ. ಇವರಿಗೆ ಜನ ಬೆಂಬಲವೂ ಕೂಡ ಇಲ್ಲ, ಸಂಖ್ಯಾ ಬಲವನ್ನು ನೋಡಿದಾಗ ನಿಮ್ಮ ಶಕ್ತಿ ಮೇಲೆ ನೀವು ರಾಜ್ಯವನ್ನು ಆಳತಕ್ಕಂಥ ಸಂಖ್ಯೆ ಕೂಡ ನಿಮಗೆ ಇಲ್ಲ. ಈ ರೀತಿ ಇದ್ದರೂ ಕೂಡ ನಮಗೆ ಜನ ಬೆಂಬಲ ಇದೆ. ಜನರು ಆಶೀರ್ವಾದ ವನ್ನು ಮಾಡಿದ್ದಾರೆ. ಅದೂ ಹೋದ ಸಮ್ಮಿಶ್ರ ಸರ್ಕಾರಗಳಿಗೆ ಬೇಸತ್ತು ನಮಗೆ ಅಧಿಕಾರ ವಹಿಸಿಕೊಟ್ಟಿದ್ದಾರೆಂದು ನೀವು ಯಾವ ಆಧಾರದ ಮೇಲೆ ಹೇಳಿದಿರಿ? ಏನು ಅದಕ್ಕೆ ಆಧಾರವಿದೆ? ಕೇವಲ ಬಹುಸಂಖ್ಯೆಯನ್ನು ಪಡೆದು 110 ಮಂದಿ ನಾವಿದ್ದೇವೆ, ಪಕ್ಷೇತರರೂ ಕೂಡ ನಮಗೆ ಸಪೋರ್ಟ್ ಮಾಡಿದ್ದಾರೆಂದು ಹೇಳಿದ್ದೀರಿ. ಏನೋ ನಾನಾ ಕಾರಣಗಳಿಂದ ನೀವು ಅವರನ್ನು ಒಳಗಡೆ ತೆಗೆದುಕೊಂಡು ಅವರುಗಳಿಗೆ ಮಂತ್ರಿ ಪದವಿ ಆಮಿಷ ತೋರಿಸಿ ಅಥವಾ ಸಹಕರಿಸಿ ಎಂದು ಕೇಳಿದ್ದೀರಿ. ಅವರೇನಾದರೂ ಸಪೋರ್ಟ್ ಮಾಡದಿದ್ದರೆ ಡಿಸಾಲ್ವ್ ಆಗುತ್ತದೆ ಎಂದು ಹೇಳಿ, ಅದನ್ನು ತಪ್ಪಿಸಲು ನೀವು ಸಪೋರ್ಟ್ ಮಾಡಲು ಬನ್ನಿ ಎಂದು ಅವರನ್ನು ಕರೆದುಕೊಂಡು ಸಮಜಾಯಿಷಿ ಹೇಳಿ ರಾತ್ರೋರಾತ್ರಿ ಅವರು ಎಲ್ಲೆಲ್ಲಿ ಇದ್ದರೋ ಅಲ್ಲಿಗೆಲ್ಲಾ ನೀವು ಹೋಗಿಬಂದಿದ್ದೀರಿ. ನಿಮ್ಮ ಮೆಸೆಂಜರ್ಸ್ ಏನು ಇದ್ರಲ್ಲ ಈ ಕಡೆ ರಿಸಲ್ಟ್ ಆಗಿ ನಿಮಗೆ ಕೊರತೆಯಾಗುತ್ತದೆ ಎಂದ ತಕ್ಷಣವೇ ಅವರೆಲ್ಲರೂ ಕೂಡ ಆಪರೇಟ್ ಮಾಡುವುದಕ್ಕೆ ಪ್ರಾರಂಭ ಮಾಡಿದರು. ಏಕೆಂದರೆ ಇವರುಗಳಿಗೆಲ್ಲಾ ಆಪರೇಟ್ ಮಾಡುವುದಕ್ಕೆ ಬಹುಶಃ ಚೆನ್ನಾಗಿ ಗೊತ್ತು. ಯಾವಾಗಲೂ ಕೂಡ ಪ್ರಾಪಗೆಂಡ ಮಾಡತಕ್ಕಂಥದ್ದು, ಆಪರೇಟ್ ಮಾಡತಕ್ಕಂಥದ್ದು, ಸಣ್ಣದಕ್ಕೆ ದೊಡ್ಡದು ಮಾಡತಕ್ಕಂಥದ್ದು, ಕಡ್ಡಿಯನ್ನು ಗುಡ್ಡ ಮಾಡತಕ್ಕಂಥದ್ದು, ಗುಡ್ಡಕ್ಕೆ ಕಡ್ಡಿ ಮಾಡತಕ್ಕಂಥದ್ದು, ಇವೆಲ್ಲ ಬಹಳ ಚೆನ್ನಾಗಿ ಬಿ.ಜೆ.ಪಿ.ಯವರಿಗೆ ಗೊತ್ತು, ಏಕೆಂದರೆ ಬಹುಶಃ ಇವರು ಟ್ರೈನಿಂಗ್‌ಗೆ ಈ ಗ್ಲೋಬಲ್ ಹುಟ್ಟಿದಾಗ ಬಹುಶಃ ಅಲ್ಲಿಯೇ ಟ್ರೈನಿಂಗ್ ಅನ್ನೂ ಕೆಲವರು ತೆಗೆದುಕೊಂಡಿರಬಹುದೇನೋ ಎಂದೆನಿಸುತ್ತದೆ. ಆ ರೀತಿಯಲ್ಲಿ ಇವರೆಲ್ಲರೂ ಕೂಡ ನಡವಳಿಕೆ ತೋರಿಸು ತ್ತಿದ್ದಾರೆ. ಇವೊತ್ತು ನೀವು ಬೇರೆಯವರ ಬೆಂಬಲದಿಂದ ಅಧಿಕಾರವನ್ನು

ಪಡೆದಿದ್ದೀರಿ. ಹೆಚ್ಚೂ ಕಡಿಮೆ ಇದು ಒಂದು ರೀತಿಯಲ್ಲಿ ಸಮ್ಮಿಶ್ರ ಸರ್ಕಾರ. ಸಂಖ್ಯೆ ಹೆಚ್ಚಿಗೆ ಇರಬಹುದು. ಆದರೆ ಸಂಪೂರ್ಣವಾದಂಥ ಜನ ಬೆಂಬಲ ನಿಮಗೆ ಇಲ್ಲ. ಸಂಪೂರ್ಣವಾದಂಥ ಸಂಖ್ಯೆ ಇಲ್ಲ. ಅಧ್ಯಕ್ಷರೆ ತಾವು ಈಗ ಅಲ್ಲಿ ಕುಳಿತಿದ್ದೀರಿ. ತದನಂತರ ಇನ್ನೊಬ್ಬರು ಡೆಪ್ಯುಟಿ ಸ್ಪೀಕರ್ ಬಂದರೆ ಸರ್ಕಾರದವರ ಗತಿ ಏನು? 113 ಜನರಲ್ಲಿ ಯಾರೋ ಒಬ್ಬರು ಹೊರಗೆ ಹೋದರೆ ಒಳಗೆ ಬರಲಿಲ್ಲವೆಂದರೆ ಮರುದಿವಸವೇ ಬಿದ್ದುಹೋಗುತ್ತದೆ. ಅದಕ್ಕಾಗಿ ನೀವು ಹುಷಾರಾಗಿರಿ. ಅದಕ್ಕಾಗಿ ನೀವು ಇನ್ನೂ ಪೋರ್ಟ್‌ಫೋಲಿಯೋ ಹಂಚಿಲ್ಲ. ಆ ಪೋರ್ಟ್‌ಫೋಲಿಯೋ ಹಂಚಿದಾಗ ನಿಮ್ಮ ಚಾಣಾಕ್ಷತನ, ನಿಮ್ಮ ತಾಳ್ಮೆ, ನಿಮ್ಮ ಗುಣ, ನಿಮ್ಮ ದೊಡ್ಡ ಗುಣ ಎಲ್ಲವೂ ಕೂಡ ಆಗ ಗೊತ್ತಾಗುತ್ತದೆ. ಯಾರು ಯಾರಿಗೆ ಯಾವ ಯಾವ ಇಲಾಖೆಗಳನ್ನು ಕೊಡುತ್ತೀರಿ. ಯಾವ ಖಾತೆಗಳನ್ನು ಕೊಡುತ್ತೀರಿ, ಎಷ್ಟರ ಮಟ್ಟಿಗೆ ಅವರಿಗೆ ನೀವು ಅಧಿಕಾರವನ್ನು ಕೊಡುತ್ತೀರಿ, ಏನು ಎಲ್ಲಾ ಫೈಲುಗಳನ್ನು ನಿಮ್ಮಲ್ಲಿಗೆ ಬರುವ ಹಾಗೆ ಮಾಡಿಕೊಳ್ಳುತ್ತೀರೋ ಅಥವಾ ಅವರವರಿಗೆ ಪೂರ್ಣ ಸ್ವಾತಂತ್ರ್ಯವನ್ನು ಕೊಡುತ್ತೀರೋ ಮತ್ತು ವಿಶೇಷವಾಗಿ ಗಣಿ ಇಲಾಖೆ ಎಲ್ಲಿಗೆ ಹೋಗುತ್ತದೆಯೋ, ಫಾರೆಸ್ಟ್ ಇಲಾಖೆ ಎಲ್ಲಿಗೆ ಹೋಗುತ್ತದೋ, ಅರ್ಬನ್ ಡೆವಲಪ್‌ಮೆಂಟ್ ಇಲಾಖೆ ಎಲ್ಲಿಗೆ ಹೋಗುತ್ತದೋ, ಇವೆಲ್ಲಾ ಮುಖ್ಯ ತಾನೆ. ಅದರ ಆಸೆಗಾಗಿಯೇ ಅನೇಕ ಜನರು ನಿಮಗೆ ಬೆಂಬಲವನ್ನು ನೀಡಿದ್ದಾರೆ.

ಶ್ರೀ ಕೆ.ಎಸ್.ಈಶ್ವರಪ್ಪ(ಮಾನ್ಯ ಸಚಿವರು):- ಆ ಚಿಂತೆಯನ್ನು ಇನ್ನೂ ನೀವು ಬಿಟ್ಟಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ವಿರೋಧ ಪಕ್ಷದ ನಾಯಕರು):- ನೀವು ಪ್ರಮಾಣ ಮಾಡಿ ಹೇಳಿಬಿಡಿ. ನೀವು ಆ ಬೆಂಬಲದಿಂದ ಬಂದಿಲವೆಂದು ಹೇಳಿದರೆ ನಾನು ರಾಜೀನಾಮೆ ಕೊಟ್ಟು ಹೋಗುತ್ತೇನೆ. I am ready, ಆದರೆ ನೀವು ಈ ರೀತಿಯಲ್ಲಿ ಮಾತನಾಡಬೇಡಿ. ಸುಮ್ಮನೆ ಕೆಣಕುವುದಕ್ಕೆ ಹೋಗಬೇಡಿ. ಮಾನ್ಯ ಅಧ್ಯಕ್ಷರೆ ನಾನು ಹೇಳಿದಂತೆ ನಾಳೆ ದಿವಸ ಮುನಿಸಿಕೊಂಡು ಹೋಗುವವರು ಇರುತ್ತಾರೆ. ಖಾತೆ ಹಂಚಿಕೆಯಾದ ಮೇಲೆ ಕೆಲವರು ಮುನಿಸಿಕೊಳ್ಳುವವರು ಇರುತ್ತಾರೆ. ಏಕೆಂದರೆ ಕೆಲವರು ಪಿ.ಡಬ್ಲ್ಯೂ.ಡಿ., ಕೆಲವರು ರೆವಿನ್ಯೂ, ಕೆಲವರು ಬೇರೆ ಬೇರೆ ಖಾತೆ ನಿರೀಕ್ಷಿಸಿರುತ್ತಾರೆ. ಯಾರು ಯಾರಿಗೆ ಎಲ್ಲೆಲ್ಲಿ ಇಂಟರೆಸ್ಟ್ ಇದೆ ಅವರೆಲ್ಲರೂ ಕೂಡ ನಿಮಗೆ ಡಿಮ್ಯಾಂಡ್ ಹಾಕುತ್ತಾರೆ. ಆಗ ನೀವು ಅಭಿಮನ್ಯು ಚಕ್ರವ್ಯೂಹದಲ್ಲಿ ಹೋದಮೇಲೆ ಬಿಡಿಸಿಕೊಂಡು ಬರುವುದು ಎಷ್ಟು ಕಷ್ಟವಾಗುತ್ತದೋ ಅದೇ ರೀತಿ ನೀವು ಇವರಲ್ಲಿ ಸಿಕ್ಕಿಬಿದ್ದರೆ ಬಿಡಿಸಿಕೊಂಡು

ಬರುವುದಕ್ಕೆ ಸುರೇಶ್‌ಕುಮಾರ್‌ರವರೂ ಬರುವುದಿಲ್ಲ, ಈಶ್ವರಪ್ಪನವರೂ ಬರುವುದಿಲ್ಲ, ಆಚಾರ್ಯರವರೂ ಕೂಡ ಪ್ರೆಸ್ ಕಾನ್‌ಫರೆನ್ಸ್ ಕರೆದು ನಾಲ್ಕು ಮಾತುಗಳನ್ನು ಆಡಿ ಬಿಟ್ಟು ಬಿಡುತ್ತಾರೆ. ಏನು ಮಾಡುವುದು ಈ ರೀತಿ ಆಗಿ ಹೋಯಿತು ಎಂದು ಹೇಳಿಬಿಡುತ್ತಾರೆ. ಅದಕ್ಕಾಗಿಯೇ ಈಗ ಆ ಬಗ್ಗೆ ಗೊತ್ತಾಗುತ್ತದೆ. ನಿಮಗೂ ಕೂಡ ಗೊತ್ತಾಗುತ್ತದೆ. ಆಗ ನಿಜವಾದಂಥ ಫ್ರೆಂಡ್ಸ್ ಯಾರು, ನಿಜವಾಗಿ ನಿಮ್ಮ ಜೊತೆಯಲ್ಲಿ ಇರುವವರು ಯಾರು, ನಿಜವಾದಂಥ ನಿಮ್ಮ ತತ್ವ ಮತ್ತು ನೀತಿಗೆ ಸಪೋರ್ಟ್ ಮಾಡತಕ್ಕಂಥವರು ಯಾರು ಎಂಬುದು ಗೊತ್ತಾಗುತ್ತದೆ. ಅದಕ್ಕಾಗಿಯೇ ಅಧ್ಯಕ್ಷರೆ ಹೇಳುತ್ತಾರೆ, ಸಮಯ ಬಂದಾಗ, ಸಂಕಟ ಬಂದಾಗ, ತೊಂದರೆ ಇದ್ದಾಗ, ಸೋತಾಗ ಸೊಗತಿ ಗುಣ ನೋಡಬೇಕು ಎಂದು ಹೇಳುತ್ತಾರೆ. ಕಾಯಿಲೆ ಬಿದ್ದಾಗ ಹೆಂಡತಿ ಗುಣ ನೋಡಬೇಕು ಎಂದು ಹೇಳುತ್ತಾರೆ. ಕಾಯಿಲೆ ಬಿದ್ದಾಗ ಹೆಂಡತಿ ಗಂಡನ ಜೊತೆ ಯಾವ ರೀತಿಯಲ್ಲಿ ನಡೆದುಕೊಳ್ಳುತ್ತಾಳೆ ಎನ್ನುವುದು ಗೊತ್ತಾಗುತ್ತದೆ. ಸೊಗತಿ ಗುಣ ಎಂದರೆ ತೊಂದರೆಯಲ್ಲಿದ್ದಾಗ ಫ್ರೆಂಡ್ಸ್ ಯಾವ ರೀತಿಯಲ್ಲಿ ನಿಮ್ಮ ಜೊತೆ ಬಿಹೇವ್ ಮಾಡುತ್ತಾರೆ ಎಂಬುದು ಆಗ ಗೊತ್ತಾಗುತ್ತದೆ. ಆದುದರಿಂದ ಆಗ ನೀವು ಪೋರ್ಟ್‌ಫೋಲಿಯೇ ಹಂಚಿದ ಮೇಲೆ ನಿಮ್ಮ ಫ್ರೆಂಡ್ಸ್ ಯಾರು, ನಿಮ್ಮನ್ನು ಆಪೋಸ್ ಮಾಡುವವರು ಯಾರು? ನಿಮ್ಮ ಜೊತೆಯಲ್ಲಿ ಯಾರು ಇರುತ್ತಾರೆ ಎನ್ನುವುದು ಆಗ ಗೊತ್ತಾಗುತ್ತದೆ. ಈಗ ನಿಮಗೆ ಗೊತ್ತಿಲ್ಲ. ಅದಕ್ಕಾಗಿಯೇ ನೀವೂ ಕೂಡ ಈ ತಂತ್ರ ಮಾಡಿದ್ದು ಏಕೆಂದರೆ ಈಗ ಮಂತ್ರಿಗಳನ್ನಾಗಿ ಮಾಡಿ ಬಿಟ್ಟುಬಿಡುವುದು. ಫೋರ್ಟ್‌ಫೋಲಿಯೊ ಕೊಡುವುದು ಬೇಡ. ಏಕೆಂದರೆ Vote of confidence ಆಗುವುದರೊಳಗೆಯೇ ಕೊಟ್ಟರೆ ಅವರು ಬಿಟ್ಟು ಹೋದರೆ ಏನು ಮಾಡುವುದು? ಅದಕ್ಕಾಗಿಯೇ ಅವರು ಏನು ಮಾಡಿದರೆಂದರೆ ಎಲ್ಲರಿಗೂ ನೀವು ಮಂತ್ರಿಯಾಗಿ ಎಂದು ಹೇಳಿ ಎಲ್ಲರಿಗೂ ಪ್ರಮಾಣವಚನ ಮಾಡಿಸಿ ಮಂತ್ರಿ ಮಾಡಿ ಈಗ ಕೂಡಿಸಿದ್ದಾರೆ. ಇನ್ನೂ ಪೋರ್ಟ್‌ಫೋಲಿಯೊ ಹಂಚುವುದಕ್ಕೆ ಹೋಗಿಲ್ಲ. ಈಗಾಗಲೇ ಆರೇಳು ದಿವಸವಾದರೂ ಕೂಡ ಇನ್ನೂ ಅವರಿಗೆ ಪೋರ್ಟ್‌ಪೋಲಿಯೊ ಕೊಟ್ಟಿಲ್ಲ. ಏಕೆ ಕೊಟ್ಟಿಲ್ಲ? ಅಂದರೆ ಇವರಿಗೆ ಹೆದರಿಕೆ ಇದೆ. ಬಿಟ್ಟುಹೋಗುತ್ತಾರೆ, ಮುನಿಸಿಕೊಳ್ಳುತ್ತಾರೆ, ಅದಕ್ಕಾಗಿ ನಾಳೆ ನನಗೆ ತೊಂದರೆಯಾಗಬಹುದು ಎನ್ನುವುದಿದೆ. ಏಕೆಂದರೆ ಹಿಂದೆ ಇವರು ಸರ್ಕಾರ ಮಾಡಿದಾಗ ಏಳು ದಿವಸದಲ್ಲಿಯೇ ಸರ್ಕಾರ ಬಿದ್ದುಹೋಗಿತ್ತು. ಈಗ ಬಹುಶಃ ಅವರು ಪೋರ್ಟ್‌ಫೋಲಿಯೊ ಹಂಚಿದ್ದರೆ ಮರುದಿವಸವೇ ಬಿದ್ದುಹೋಗುತ್ತಿತ್ತು. ಆ ಒಂದು ಪರಿಸ್ಥಿತಿ ಇತ್ತು. ಈಗಲೂ ಕೂಡ ಇನ್ನೂ ಅಂಥದ್ದೇ ಪರಿಸ್ಥಿತಿ ಇದೆ. ಅದಕ್ಕಾಗಿಯೇ ತಾವು ಖಾತೆ ಹಂಚದೇ ಮೊದಲು Vote of confidence

ತೆಗೆದುಕೊಂಡು ಆಮೇಲೆ ಖಾತೆಗಳನ್ನು ಹಂಚೋಣವೆಂದು ನೀವು ಕುಳಿತಿದ್ದೀರಿ. ಇದು ನಿಜ ಅಲ್ಲವೆ ಸ್ವಾಮಿ? ಆ ರೀತಿ ಇಲ್ಲದಿದ್ದರೆ ಇಷ್ಟು ಹೊತ್ತಿಗೆ ಖಾತೆಗಳನ್ನು ಮಂತ್ರಿಗಳಿಗೆ ಹಂಚಿ ಬಿಡುತ್ತಿದ್ದಿರಿ. ಏಕೆಂದರೆ ನೀವು ಬಹಳ ತರಾತುರಿಯಲ್ಲಿ ಕೆಲಸ ಮಾಡುವವರು. ಬಹಳ ಫಾಸ್ಟ್. ಒಂದು ರೀತಿಯಲ್ಲಿ ಎಕ್ಸ್‌ಪ್ರೆಸ್ ಇದ್ದಂತೆ. ರೆಡಿಮೇಡ್ ಕಾಫಿ ಇದ್ದಂತೆ. ಏಕೆಂದರೆ ಏನು ನಿಮಗೆ ಅನ್ನಿಸುತ್ತದೆಯೊ ಆ ಬಗ್ಗೆ ನೀವು ತಕ್ಷಣ act ಮಾಡುತ್ತೀರಿ. ಆದರೆ ಇದಕ್ಕೆ ಏಕೆ ನೀವು ಆ ರೀತಿಯಲ್ಲಿ act ಮಾಡಲಿಲ್ಲವೋ ಗೊತ್ತಿಲ್ಲ. ಒಂದೂ ಬಿಡುವುದಿಲ್ಲ ನೋಡಿ. ಈಗ ನೋಡಿ ಸ್ಪೀಕರ್ ಮಾಡಬೇಕಾಗಿತ್ತು. ತಕ್ಷಣ ನೀವು ಮಾಡೇ ಬಿಟ್ಟಿರಿ. ಅದೂ ತಕ್ಷಣವೇ. ಮಾನ್ಯ ಅಧ್ಯಕ್ಷರು ಹೈಕಮಾಂಡ್ ಕಡೆ ಹೋಗಿ ಬಂದರು. ಅದರ ಬಗ್ಗೆ ತಮಗೆ ಮುಜುಗರವಾಗಿರಬಹುದು. ನಾನು ಆ ಬಗ್ಗೆ ಹೇಳುವುದಿಲ್ಲ. ನಾನೇನೋ ನಿಮ್ಮನ್ನು ಮಂತ್ರಿಯನ್ನಾಗಿ ನೋಡಬೇಕು ಎಂದುಕೊಂಡಿದ್ದೆ. ಆದರೆ ಅದು ಹೋಯಿತು ಬಿಡಿ. ಏಕೆಂದರೆ ನಿಮ್ಮ ಮತ್ತು ಅವರ ಮಧ್ಯೆ ಏನಾಯಿತೋ, ಏನು ಸಂಬಂಧಗಳು ಬೆಳೆದವೋ ಏನೋ ನಮಗೆ ಗೊತ್ತಾಗಲಿಲ್ಲ. ಏನು ಸಂಧಾನ ಮಾಡಿಕೊಂಡರೋ ಅದೂ ಕೂಡ ನಮಗೆ ಗೊತ್ತಿಲ್ಲ. ನಾವೇನೋ ನೀವು ಉತ್ತರ ಕರ್ನಾಟಕದ ಕಡೆಯಿಂದ ಬಹಳ ಪವರ್‌ಫುಲ್ ಮಿನಿಸ್ಟರ್ ಆಗುತ್ತೀರಿ. ಉತ್ತರ ಕರ್ನಾಟಕದ ಅಭಿವೃದ್ಧಿ ಯಾಗುತ್ತದೇನೋ ಎಂದು ನಾವು ತಿಳಿದುಕೊಂಡಿದ್ದೆವು. ಅದೂ ಕೂಡ ಹೋಯಿತು. ಹೀಗೆ ಇವತ್ತು Vote of confidence ಇಟ್ಟುಕೊಂಡಿದ್ದಾರೆ. ಇದು ಒಂದು ಕಡೆ. ಮೂರನೆಯದಾಗಿ ಈ ಒಂದು ಚುನಾವಣೆಯಲ್ಲಿ ಅವರು ಹೇಳಿದರು, ಬಹುಶಃ ಪ್ರಾಮಾಣಿಕತೆಯಿಂದ, ದಕ್ಷತೆಯಿಂದ ಸರ್ಕಾರಗಳನ್ನು ನಡೆಸುತ್ತೇವೆಂದರು. ಆದರೆ ಸಾಧ್ಯವಿಲ್ಲ. ಏಕೆ ಸಾಧ್ಯವಿಲ್ಲವೆಂದರೆ ಇವೊತ್ತಿನ ವಾತಾವರಣ, ಇವೊತ್ತಿನ circumstances, ಇವೊತ್ತು ಪಕ್ಷಗಳು ಮಾಡಿದಂಥ ಖರ್ಚುಗಳನ್ನು ನೋಡಿದರೆ ಅಧ್ಯಕ್ಷರೆ, ಮುಂದೆ ಯಾವ ಚುನಾವಣೆಗಳಲ್ಲಿಯೂ ಕೂಡ ಒಬ್ಬ ಪ್ರಾಮಾಣಿಕ ವ್ಯಕ್ತಿ, ಒಬ್ಬ ಒಳ್ಳೆಯ ವ್ಯಕ್ತಿ ಸದನಕ್ಕೆ ಬರಬೇಕೆಂದರೆ ಅದು possible ಇಲ್ಲ ಎನ್ನತಕ್ಕಂಥ ಮಾತನ್ನು ನಾನು ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ. ನಾನು ಒಂಭತ್ತು ಸಲ ಗೆದ್ದುಬಂದಿದ್ದೇನೆ. ಆದರೆ ನಾನು ಇಂಥ ಚುನಾವಣೆಯನ್ನು ನೋಡಿರಲಿಲ್ಲ. ನಾನು 1972 ರಿಂದಲೂ ಕೂಡ ಚುನಾವಣೆಯನ್ನು ನೋಡುತ್ತಾ ಬಂದಿದ್ದೇನೆ. ಒಟ್ಟು 9 ಚುನಾವಣೆಯನ್ನು ಎದುರಿಸಿದ್ದೇನೆ. ಆದರೆ ಇವೊತ್ತಿನ ನಡವಳಿಕೆ ನೋಡಿ. ನಾವು ಎಲ್ಲಿ ತಪ್ಪುತ್ತಿದ್ದೇವೆ ಅಥವಾ ಎಲ್ಲಿ ತೊಂದರೆ ಇದೆ ಎನ್ನತಕ್ಕಂಥದ್ದರ ಬಗ್ಗೆ ನಾವೆಲ್ಲರೂ ಕೂಡ ಆತ್ಮವಿಮರ್ಶೆ ಮಾಡಿಕೊಳ್ಳಬೇಕಾಗಿದೆ.

ಕೇವಲ ಅಧಿಕಾರಕ್ಕಾಗಿಯೇ ಎಲ್ಲವನ್ನೂ ಕೂಡ ಒಪ್ಪತಕ್ಕಂಥದ್ದು. ಎಲ್ಲರ ಪ್ರಭಾವವನ್ನೂ ಕೂಡ ನಾವು ತೆಗೆದುಕೊಳ್ಳತಕ್ಕಂಥದ್ದು. ಎಲ್ಲರ ಪ್ರಭಾವಕ್ಕೆ ಒಳಗಾಗತಕ್ಕಂಥದ್ದು ಇದು ಸರಿಯಲ್ಲ. ಒಂದು ಕಾಲ ಇತ್ತು. ಬರೇ ದುಡ್ಡಿನಿಂದ ಚುನಾವಣೆ ಆಗುತ್ತಿರಲಿಲ್ಲ. ದುಡ್ಡು ಇರುವವರನ್ನು ಮೈಮೇಲೆ ಹಾಕಿಕೊಂಡು, ಹಣವಂತರನ್ನು ಮೈಮೇಲೆ ಹಾಕಿಕೊಂಡು ಈ ದೇಶವನ್ನು ಆಳಿದಂಥ ಜನ ಇದ್ದಾರೆ. ನಾವು ಹೇಳಿದರೆ ಅವರಿಗೆ ಸಿಟ್ಟು ಬರುತ್ತದೆ. ಶ್ರೀಮತಿ ಇಂದಿರಾಗಾಂಧೀಜಿಯವರ ಕಾಲದಲ್ಲಿ ಯಾರ ಹತ್ತಿರ ದುಡ್ಡು ಇರಲಿಲ್ಲ, ದೊಡ್ಡ ದೊಡ್ಡ ರಾಜಮಹಾರಾಜರ ತನಕ ನಿಲ್ಲಿಸಿದರು, ಬ್ಯಾಂಕ್‌ಗಳನ್ನು ರಾಷ್ಟ್ರೀಕರಣ ಮಾಡಿದರು, ಸ್ಟೇಟ್ ಟ್ರೇಡಿಂಗ ಅನ್ನು ಮಾಡಿದರು, ಭೂಸುಧಾರಣೆ ಕಾನೂನನ್ನು ತಂದರು, ದೊಡ್ಡ ದೊಡ್ಡ ಜಮೀನುದಾರರರನ್ನು ಮಟ್ಟ ಹಾಕಿದರು. ಜನ ಇವುಗಳನ್ನು ಮೆಚ್ಚಿ ಮತಗಳನ್ನು ಹಾಕಿದರು. ಆದರೆ ಈಗ ಎಲ್ಲಾ ಉಲ್ಟಾ ಆಗಿಬಿಟ್ಟಿದೆ. ಈಗ ಏನೆಂದರೆ ಕೆಂಪು ನೋಟ್, ಮನೆ ಮನೆಗೆ ಕೆಂಪು ನೋಟ್, ಅವುಗಳು ಎಲ್ಲಿಂದ ಬರುತ್ತವೋ ಏನೋ ಗೊತ್ತಿಲ್ಲ. ಗಣಿಯೊಳಗೆ ಇಟ್ಟರೆ ಕೆಂಪು ಆಗುತ್ತವೋ ಏನೋ ನನಗೆ ಗೊತ್ತಿಲ್ಲ. ಇದರಿಂದ ಏನಾಗಿದೆ ಎಂದರೆ ಹಣದ ಪ್ರಭಾವ ಪೊಲಿಟಿಕ್ಸ್‌ನಲ್ಲಿ ಹೆಚ್ಚಿಗೆ ಆದಕಾರಣ, ನಾಳೆ ನೀವು ಮೂಲಭೂತ ಸೌಕರ್ಯಗಳನ್ನು ತರುತ್ತೇವೆಂದು, ಬಡವರ ಬಗ್ಗೆ ಅನುಕಂಪ ತೋರಿಸುತ್ತೇವೆಂದು, ಪ್ರಗತಿಪರ ಕಾರ್ಯಕ್ರಮಗಳನ್ನು ತರುತ್ತೇವೆಂದು ಏನು ನೀವು ಹೇಳುತ್ತೀರಿ ಅದು ಯಾವುದೂ ಬರುವುದಕ್ಕೆ ಸಾಧ್ಯವಿಲ್ಲ. ಎಲ್ಲಿಯವರೆಗೆ ಹಣ ಮತ್ತು ಅಧಿಕಾರ, ಜೊತೆಯಾಗಿ ಹೋಗುತ್ತದೋ ಅಲ್ಲಿ ಯಾವುದೇ ಬಡವನಿಗೆ ಸಹಾಯ ಆಗುವುದಕ್ಕೆ ಸಾಧ್ಯವಿಲ್ಲ. ನಾನು ಒಂದು ನಿದರ್ಶನವನ್ನು ತಮ್ಮ ಗಮನಕ್ಕೆ ತರುತ್ತೇನೆ. ನಾನು 1978ರಲ್ಲಿ ಎರಡನೇ ಬಾರಿಗೆ ಚುನಾವಣೆಗೆ ನಿಲ್ಲಬೇಕೆಂದು ನಿಂತಿದ್ದೆನು. ನಾನು ಗುಲ್ಬರ್ಗ, ಬೀದರ್ ಮತ್ತು ರಾಯಚೂರು ಜಿಲ್ಲೆಯ ಉಸ್ತುವಾರಿಯನ್ನು ನೋಡಿಕೊಳ್ಳುವುದಕ್ಕೆ ಕೂಡ ಅಂದಿನ ಮಾನ್ಯ ಮುಖ್ಯಮಂತ್ರಿಯವರಾದ ದಿವಂಗತ ದೇವರಾಜ್ ಅರಸುರವರು ಹೇಳಿದರು. Candidates select ಮಾಡುವುದಕ್ಕೆ ನೀವು ಒಂದು ಲಿಸ್ಟ್ ಕೊಡಿ ಎಂದು ಹೇಳಿದ್ದು, ಆಗ ನಾನು ಒಂದು ಲಿಸ್ಟ್‌ನ್ನು ತೆಗೆದುಕೊಂಡು ಹೋಗಿದ್ದೆ. ಅಲ್ಲಿಗೆ ಹೋದಾಗ ದಿವಂಗತ ದೇವರಾಜು ಅರಸುರವರಿಗೆ ಕೆಲವು ಲಿಸ್ಟ್ ಕೊಟ್ಟಮೇಲೆ ಅವರು ಹೇಳಿದರು, "ಏನಪ್ಪ ಈ ಲಿಸ್ಟ್ ತಂದಿದ್ದೀಯಲ್ಲ, ಇದರೊಳಗೆ ಒಬ್ಬಿಬ್ಬರು ಕಾರ್ಯಕರ್ತರು ಬಿಟ್ಟು ಹೋಗಿದ್ದಾರಲ್ಲ, ಅವರನ್ನು ಏಕೆ ಸೇರಿಸಬಾರದು" ಎಂದು ಕೇಳಿದರು. ಅದಕ್ಕೆ ನಾನು "ಸಾರ್, ಅಲ್ಲಿ ಫೈಟ್ ಮಾಡಬೇಕಾದರೆ ಕಷ್ಟ ಆಗುತ್ತದೆ, ಸ್ವಲ್ಪಮಟ್ಟಿಗೆ ಇವರು ಅನುಕೂಲಸ್ಥರಿದ್ದಾರೆ, ಇವನಿಗೆ ನಾವು ಅಲ್ಲಿ

ಟಿಕೆಟ್ ಕೊಟ್ಟರೆ ಖಂಡಿತವಾಗಿ ಆರಿಸಿ ಬರುತ್ತಾರೆ" ಎಂದು ಹೇಳಿದೆ. ಅದಕ್ಕೆ ಅವರು ಒಂದೇ ಮಾತು ಹೇಳಿದರು, ಆ ಮಾತನ್ನು ಅವರಿಗೂ ಕೂಡ ಹೇಳುತ್ತೇನೆ. ಅಧಿಕಾರ ಬರುತ್ತದೆ, ಹೋಗುತ್ತದೆ. ನಾವು ಅಧಿಕಾರವನ್ನು ತೆಗೆದುಕೊಳ್ಳುತ್ತೇವೆ. ಇವತ್ತು ದುಡ್ಡು ಇದೆ, ನಮಗೆ ಅಧಿಕಾರ ಬಂದಿದೆ ಎಂದು ಯಾರಾದರೂ ಭಾವನೆ ಮಾಡಿಕೊಂಡು ಅದನ್ನು ಬೆರೆಸಿಕೊಂಡು ಹೋದರೆ ಇವತ್ತಲ್ಲ ನಾಳೆ ಅದು ನಿಮಗೆ ತೊಂದರೆ ಕೊಡುತ್ತದೆ ಎನ್ನುವ ಎಚ್ಚರಿಕೆ ಮಾತನ್ನು ಖಂಡಿತವಾಗಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆಗ ದೇವರಾಜು ಅರಸುರವರು ಒಂದು ಮಾತು ಹೇಳಿದರು, "ನೋಡಪ್ಪ ಕೆಲವು ಶ್ರೀಮಂತರು ನಿನ್ನ ಹತ್ತಿರ ಬರುತ್ತಾರೆ, ಅವರು ನಿನ್ನ ಹತ್ತಿರ ಬರುವುದು ಏಕೆ? ಏಕೆಂದರೆ ನಿನ್ನ ಹತ್ತಿರ ಅಧಿಕಾರ ಇದೆ ಎಂದು ಹೇಳಿ ಅವರ ಕೆಲಸ ಮಾಡಿಸಿಕೊಳ್ಳುವುದಕ್ಕೋಸ್ಕರ, ಅವರ ಕೆಲಸ ಆಗಬೇಕು ಎಂದು ನಿನ್ನ ಹತ್ತಿರ ಬರುತ್ತಾರೆ. ಈ ಅಧಿಕಾರ ಕೂಡ, ಈ Political power ಕೂಡ ನೀನು ಆರ್ಥಿಕವಾಗಿ ಬಲಶಾಲಿ ಇರುವಂತಹ ಮನುಷ್ಯನ ಕೈಯಲ್ಲಿ ಕೊಟ್ಟರೆ ನಿನ್ನನ್ನು ಯಾರು ಕೇಳುತ್ತಾರೆ" ಎಂದರು. ಅದಕ್ಕೆ Political power and economic power should not go together. ನೀನು ಆದಷ್ಟು ಕಾರ್ಯ ಕರ್ತರನ್ನು ಬೆಂಬಲಿಸಬೇಕು, ಕಾರ್ಯಕರ್ತರನ್ನು ಆರಿಸಬೇಕು. ಅದು ಯಾವುದೇ Political party ಇರಲಿ, ತಮ್ಮ ಕಾರ್ಯಕರ್ತರನ್ನು ಬೆಂಬಲಿಸಿದರೆ ನಿಮ್ಮ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಅದು ಒಂದು ಸಾಧನೆಯಾಗುತ್ತದೆ. ಅದು ಒಂದು ``Means''. ಅದಕ್ಕೆ ಆ ಒಂದು ಮಾತನ್ನು ಹೇಳಿದರು. ಅದಕ್ಕೆ ನಾನು ಮಾನ್ಯ ಯಡಿಯೂರಪ್ಪನವರಿಗೆ ಈ ಒಂದು ಎಚ್ಚರಿಕೆ ಮಾತನ್ನು ಹೇಳುತ್ತೇನೆ. ನಿಮಗೆ ಏನಾದರೂ ಹಣದಿಂದಲೇ ಎಲ್ಲಾ ಮಾಡಲು ಸಾಧ್ಯವಿದೆ ಎನ್ನುವ ಭಾವನೆ ಇದ್ದರೆ ಅಥವಾ ಈ ಚುನಾವಣೆಯಲ್ಲಿ ನಾವೆಲ್ಲರೂ ಕೂಡ ಗೆದ್ದಿದ್ದು ಅದರ ಬಲದ ಮೇಲೆ ಎಂದರೆ ಒಂದಲ್ಲ ಒಂದು ದಿವಸ ಅದೇ ಹಣದ ಬಲದಿಂದ ನಿಮ್ಮ ಕುರ್ಚಿಯನ್ನು capture ಮಾಡದೇ ಹೋದರೆ ನೀವು ಬೇರೆ ಅಂತೀನಿ. ನೀವು ಯಾವ ಹಣ ಬಲದ ಮೇಲೆ ಇವತ್ತು ಅಧಿಕಾರಕ್ಕೆ ಬಂದಿದ್ದೀರಿ ಅಥವಾ ಬಂದಿದ್ದೇವೆ ಎನ್ನುವ ಭಾವನೆಯನ್ನು ಇಟ್ಟುಕೊಂಡಿದ್ದೀರಿ, ಒಂದು ವೇಳೆ ನೀವು ಇದಕ್ಕೆ ಕಡಿವಾಣ ಹಾಕದೇ ಹೋದರೆ ಖಂಡಿತವಾಗಿ ಯಾವ ರೀತಿಯಾಗಿ ಭಸ್ಮಾಸುರ ಎಲ್ಲರ ತಲೆ ಮೇಲೆ ಕೈಯಿಟ್ಟು, ಕೊನೆಗೆ ಶಂಕರನ ತಲೆ ಮೇಲೆ ಕೂಡ ಕೈ ಇಡುವುದಕ್ಕೆ ಹೋದಾಗ ನಾಶವಾದರು, ಆ ರೀತಿಯ ಪರಿಸ್ಥಿತಿಯನ್ನು ತಾವು ಉಂಟು ಮಾಡಿಕೊಳ್ಳಬಾರದು. ಇದರಿಂದ ಇಡೀ ರಾಜ್ಯಕ್ಕೆ ತೊಂದರೆಯಾಗುತ್ತದೆ.

ನೂರಕ್ಕೆ ನೂರು ಸರಿಹೋಗುತ್ತದೆ ಎಂದು ನಾನು ಹೇಳುವುದಿಲ್ಲ. ತಪ್ಪು ನಮ್ಮಿಂದ ಆಗುತ್ತವೆ, ನಿಮ್ಮಿಂದಲೂ ಆಗುತ್ತವೆ. ಇನ್ನೊಬ್ಬರಿಂದ ಕೂಡ ಆಗುತ್ತದೆ. ಆದರೆ ಆ ತಪ್ಪುಗಳನ್ನು ಸರಿಪಡಿಸಿಕೊಳ್ಳತಕ್ಕಂಥ ಶಕ್ತಿ ಇರಬೇಕು ಮತ್ತು ಬಡವರ ಕೆಲಸ ಮಾಡಬೇಕು ಎನ್ನುವಂತಹ ಧೈರ್ಯ ಇರಬೇಕು. ಆ ಧೈರ್ಯವನ್ನು ಹಣಕ್ಕಾಗಿ ಕುಗ್ಗಿಸಬಾರದು ಎನ್ನುವ ಮಾತನ್ನು ನಾನು ಹೇಳುತ್ತೇನೆ. ಅದು ನಿಮ್ಮ ಕೈಯಲ್ಲಿ ಆಗುತ್ತದೆಯೇ ಎನ್ನುವ ಒಂದು ವಿಚಾರ ಇದೆ. ಇವತ್ತು ನೀವು Vote of confidence ತೆಗೆದುಕೊಳ್ಳುತ್ತಿದ್ದೀರಿ, ಇದು ನಿಮ್ಮ ಕೈಯಲ್ಲಿ ಸಾಧ್ಯವಿದೆಯೇ? ನನಗೆ ತಿಳಿದ ಮಟ್ಟಿಗೆ ಅದು ಸಾಧ್ಯವಾಗುವುದಿಲ್ಲ. ಇವತ್ತು ನೀವು ಈ ಚುನಾವಣೆಯಲ್ಲಿ ಯಾವ ದಾರಿಯ ಮೇಲೆ ನಡೆದುಕೊಂಡು ಬಂದಿದ್ದೀರಿ, ಆ ದಾರಿಯನ್ನು ನೋಡಿದರೆ ಖಂಡಿತವಾಗಿ ನೀವು ತೊಂದರೆಯ ದಾರಿ ಮೇಲೆ ನಡೆದಿದ್ದೀರಿ ಎಂದು ನಾನು ಇವತ್ತು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಮತ್ತು ಯಾವುದೇ ಒಂದು ಕೆಲಸವನ್ನು ಮಾಡಬೇಕಾದರೂ ಕೂಡ ಅದಕ್ಕೆ ಜನ ಬೆಂಬಲ ಬೇಕು, ಒಂದು ಕಾರ್ಯಕ್ರಮದಲ್ಲಿ ನಿಷ್ಠೆ ಇರಬೇಕು. ಈಗ ತಾವು ಎಲ್ಲಾ ಹೇಳಿಕೊಂಡು ಬಂದು ಕೊನೆಗೆ ನಾನು ಆರ್‌ಎಸ್‌ಎಸ್‌ನ ಶಿಸ್ತಿನ ಸಿಪಾಯಿ ಮತ್ತು ಆ ಶಿಸ್ತಿನಲ್ಲಿ ಬೆಳೆದುಕೊಂಡು ಬಂದಿದ್ದೇನೆ ಎಂದೂ ಕೂಡ ಹೇಳಿದಿರಿ. ಈಗಾಗಲೇ ನಿಮ್ಮ ಬಿಜೆಪಿಯ hidden agenda ಒಂದೊಂದೆ ಬರುತ್ತಿವೆ, Article 370 ಪ್ರಕಾರ uniform code of conduct ಅನ್ನು ತರಬೇಕು ಎನ್ನುವುದು, ಹಾಗಾದರೆ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ಅವರು Hindu Code Bill ತೆಗೆದುಕೊಂಡು ಬಂದರು. ಅದನ್ನು ನೀವು ಏಕೆ ಸಪೋರ್ಟ್ ಮಾಡಲಿಲ್ಲ? ಸುಮ್ಮನೆ ಅವೆಲ್ಲವನ್ನು ಈಗ ಹೇಳುವುದು ಬೇಡ ಬಿಡಿ. Hindu Code Bill ತಂದಾಗ, ಮುಂದೆ Succession Act, Special Marriage Act ಅವೆಲ್ಲಾ split ಆಗಿ ನಂತರ ಆಗಿದ್ದು ತಾನೇ? ಅದಕ್ಕೆ ಅದನ್ನು ಹೇಳುವುದು ಬೇಡ. ಅದನ್ನು ಬೇರೆ ದಿನ ಚರ್ಚೆ ಮಾಡೋಣ. ನಾನು ಹೇಳುತ್ತಿರುವುದು ಏನೆಂದರೆ ಈಗ ಒಂದು ಆಶ್ವಾಸನೆ ನೀಡುತ್ತಿದ್ದೀರಿ. ನಾವು ಎಲ್ಲರನ್ನು ತೆಗೆದುಕೊಂಡು ಹೋಗುತ್ತಿದ್ದೇವೆ. ನಮಗೆ ಎಲ್ಲರೂ Vote ಕೊಡುತ್ತಿದ್ದಾರೆ ನಾವು minority safeguard ಮಾಡುತ್ತೇವೆ ಎಂದು ಒಂದು ಕಡೆ ಹೇಳುತ್ತಿದ್ದೀರಿ. ಇನ್ನೊಂದು ಕಡೆ ನಾವು uniform code ತಂದು, ಯಾರೇ ಇರಲಿ ಅದನ್ನು ಜಾರಿಯಲ್ಲಿ ತರುತ್ತೇವೆ ಎನ್ನುವುದನ್ನು ಈಗ ಧೈರ್ಯವಾಗಿ ಹೇಳುತ್ತಿದ್ದೀರಿ. ನಿಮ್ಮಲ್ಲಿ ಏಕೆ ಧೈರ್ಯ ಬಂತು? ಜನ Vote ಕೊಟ್ಟವರೆ ಬೇರೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಇರತಕ್ಕಂತವರಲ್ಲಿ, ತಾವು ಜೆಡಿಎಸ್ ಮತವನ್ನೇ ತೆಗೆದುಕೊಳ್ಳಿ, ಕಾಂಗ್ರೆಸ್

ಮತವನ್ನೇ ತೆಗೆದುಕೊಳ್ಳಿ ಅಥವಾ ಈ ಆರು ಜನ independent ಏನು ಆರಿಸಿ ಬಂದಿದ್ದಾರೆ, ಅವರ ಮತಗಳನ್ನು ತೆಗೆದುಕೊಂಡರೂ ಕೂಡ ಇದರಲ್ಲಿ ನೂರಕ್ಕೆ ನೂರು ಎಲ್ಲರೂ ಕೂಡ secular ತತ್ವದ ಮೇಲೆ ನಂಬಿಕೆ ಇಡತಕ್ಕಂಥ ಜನ. ಇದನ್ನು ನೀವು ಎಂದೂ ಕೂಡ ಮರೆಯಬೇಡಿ. ನಿಮ್ಮ ತತ್ವಕ್ಕೆ ಒಪ್ಪಿ ಕೆಲವು ಜನ ಮತ ಹಾಕಿರಬಹುದು. ಆದರೆ 2/3rd majority ಜನ, ಬಹುಸಂಖ್ಯಾತರು ಇವತ್ತಿನ ದಿವಸ ತತ್ವಕ್ಕೆ ಒಪ್ಪಿಕೊಂಡು ಮತವನ್ನು ಕೊಟ್ಟಿದ್ದಾರೆ. ಅದನ್ನು ನೀವು ಯೋಚನೆ ಮಾಡಬೇಕೇ ಹೊರತಾಗಿ ಎಲ್ಲೋ ನಮಗೆ 110 ಸೀಟು ಬಂತು ಅಂದ ತಕ್ಷಣ ಕಾರ್ಯಕಾರಿ ಸಮಿತಿಗೆ ಹೋಗಿ ನೀವು ಸಮ್ಮತಿ ಕೊಡುವುದು. ಯಡಿಯೂರಪ್ಪನವರು, ಹೌದು ಅದಕ್ಕೆ ಬಂತು ಎಂದು ಹೇಳುವುದು. ಅದಕ್ಕೆ ನಾನು ಆರ್‌ಎಸ್‌ಎಸ್ ಆಫೀಸ್‌ಗೆ ಹೋಗುತ್ತೇನೆ, ಅದಕ್ಕೆ ನಾವು ಕೇಶವ ಭವನಕ್ಕೆ ಹೋಗಿ ಆದೇಶ ತರುತ್ತೇವೆ, ನೀವು ಏನು ಆದೇಶ ಕೊಡುತ್ತೀರೋ ಅದನ್ನು ಜಾರಿಯಲ್ಲಿ ತರುತ್ತೇನೆ ಎಂದು ನೀವು ಹೊರಗಡೆ ಕೂಡ ಹೇಳುತ್ತಿದ್ದೀರಿ ತಮ್ಮ ಭಾಷಣಗಳಲ್ಲೂ ಕೂಡ ಹೇಳುತ್ತಿದ್ದೀರಿ ಹಾಗೂ ಈ ಸದನದಲ್ಲಿ ಕೂಡ ಅದನ್ನು ಸಾಬೀತು ಪಡಿಸಿದ್ದೀರಿ. ಆ ನಿಮ್ಮ agenda ಬೇರೆ ಕಡೆ ಇಡಿ. ನಿಮ್ಮ RSS agenda ಬೇರೆ ಕಡೆ ಇಡಿ. ನಿಮ್ಮ hidden agenda ಬೇರೆ ಕಡೆ ಇಡಿ. ಈ ಕರ್ನಾಟಕ ರಾಜ್ಯದ ಜನತೆಗೆ, ರೈತರಿಗೆ ಮತ್ತು ಬಡವರಿಗೆ ನೀವು ಏನು ಕಾರ್ಯಕ್ರಮ ಮಾಡುತ್ತೀರಿ ಅದನ್ನು ಮೊದಲು ಹೇಳಿ, ಅದರ ಬಗ್ಗೆ ಚಿಂತನೆ ಮಾಡಿ. ಅದನ್ನು ಬಿಟ್ಟು ನಾನು ಶಿಸ್ತಿನ ಸಿಪಾಯಿ, ಅವರು ಹೇಳಿದ್ದನ್ನು ಮಾಡುತ್ತೇನೆ ಅಂದರೆ ಅದಕ್ಕೆ ಮೆಚ್ಚಿಕೊಂಡು ಜನ ನಿಮಗೆ Vote ಕೊಟ್ಟಿಲ್ಲ. ಜನ ನಿಮಗೆ ಕೊಟ್ಟಿರುವುದು, ನೀವು ರೈತರ ಬಗ್ಗೆ ಕಾಳಜಿ ತೋರಿಸುತ್ತೇನೆ ಎಂದು, ಅವರಿಗೆ ನಾವು free pump setಗೆ ಕೊಡುತ್ತೇವೆ ಎಂದು, 2 ರೂಪಾಯಿಗೆ ಒಂದು ಕೆಜಿ ಅಕ್ಕಿ ಕೊಡುತ್ತೇವೆಂದು ಇವೆಲ್ಲಾ ಹೇಳಿದಿರಿ. ನಿಮಗೆ ಹೊರಗಡೆ ಪಟ್ಟಾಭಿಷೇಕ ಆಗುವಾಗ ನಾವೆಲ್ಲರೂ ಕೂಡ ಬಂದು ನಿಮಗೆ congratulation ಮಾಡಿದೆವು. ನೀವು ಈ ರಾಜ್ಯದ ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದಿರಿ. ಆದರೆ ಈ ಕಡೆ ಪ್ರಮಾಣ ಸ್ವೀಕಾರ ಮಾಡುತ್ತಿದ್ದಾಗ, ಅಲ್ಲಿ ದಾವಣಗೆರೆಯಲ್ಲಿ ನಿಮ್ಮ ಜನ ಹೋಗಿ ರೈತರ ಮೇಲೆ ಲಾಠಿ ಪ್ರಹಾರ ಮಾಡಿದರು. ಏಕೆಂದರೆ fertilizer ಕೊರತೆ, seeds ಕೊರತೆ ಎಂದು. ಆ ಘಟನೆ ಒಂದೇ ಕಡೆ ಅಲ್ಲ, ಗುಲ್ಬರ್ಗ, ಗದಗ್ ಅನೇಕ ಜಿಲ್ಲೆಗಳಲ್ಲಿ ಈ ಘಟನಾವಳಿಗಳು ನಡೆದವು. ಅದೇ ರೀತಿಯಾಗಿ ತಾವು ಏನು ಹೇಳಿದಿರಿ, ಈ ರಾಜ್ಯದ ಜನ ನನಗೆ ಅವಕಾಶ ಮಾಡಿಕೊಟ್ಟರೆ ಮೊದಲನೆ file free pump setಗೆ ವಿದ್ಯುತ್ ಅನ್ನು ನಾನು ಕೊಡುತ್ತೇನೆ

ಎಂದು ಹೇಳಿದಿರಿ. ಸ್ವಾಮಿ ಎಂಟು ದಿವಸ ಆಯಿತು, ನೀವು ಆ ಎಲ್ಲಿ ಬಿದ್ದಿದೆ, ಏನು ಎಂದು ಹುಡುಕಿ. ಆ ಫೈಲ್ ಎಲ್ಲಾದರೂ ಇದ್ದರೆ ನೋಡಿ ಅದು ಧೂಳು ತಿನ್ನುತ್ತಿದ್ದೆಯೆಂದರೆ ಅದನ್ನು ಹೊರಗಡೆ ತೆಗೆಯಿರಿ. ನೀವು ಹೇಳಿದ್ದು, ನೀವು ರೈತರ ಹೆಸರಿನ ಮೇಲೆ ಆಣೆಯನ್ನು ತೆಗೆದುಕೊಂಡು, ಪ್ರಮಾಣವಚನವನ್ನು ಸ್ವೀಕಾರ ಮಾಡಿ, ಈ ಚುನಾವಣೆ ಸಂದರ್ಭದಲ್ಲಿ ರೈತರಿಗೆ ಆಸೆಯನ್ನು ತೋರಿಸಿ, ಅನೇಕ promises ಮಾಡಿ, ಅಧಿಕಾರಕ್ಕೆ ಬಂದಿರಿ. ಆ ಫೈಲ್ ಎಲ್ಲಿದೆ? ಅದನ್ನು ತಕ್ಷಣ ಜಾರಿಗೆ ತರುವುದಕ್ಕೆ ಆಗಲಿಲ್ಲ. ಬೇರೆ ಬೇರೆ ನಿಮಗೆ ಬೇಕಾದಂಥಾ ಕೆಲಸಗಳನ್ನು ಮಾಡುವುದಕ್ಕೆ ಆಗುತ್ತದೆ. ಆದರೆ ಇದನ್ನು ಐದಾರು ದಿವಸಗಳಲ್ಲಿ ಹುಡುಕಿ, pump setಗೆ free power ಕೊಡುವುದನ್ನು ಏಕೆ ಮಾಡಲಿಲ್ಲ? ಕನಿಷ್ಟ ಪಕ್ಷ ಮಾನ್ಯ ರಾಜ್ಯಪಾಲರಿಂದ 14 ಪೇಜ್‌ಗಳ ಭಾಷಣವನ್ನು ಓದಿಸಿದ್ದೀರಿ. ಅದರಲ್ಲಾದರೂ ತಾವು mention ಮಾಡಿದ್ದೀರಾ? ತಾವು ಇದನ್ನು ತಕ್ಷಣ ಜಾರಿಗೆ ತರುತ್ತಿದ್ದೇವೆಂದು ಹೇಳಿದ್ದೀರಾ? ತಾವು ಅದರಲ್ಲಿ ಏನು ಮಾಡಿದ್ದೀರಿ? ಅದರಲ್ಲಿ ಏನು ಇದೆಯೆಂದರೆ infrastructure ಮಾಡುತ್ತೇನೆ, minority ರಕ್ಷಣೆ ಮಾಡುತ್ತೇನೆ. ರೈತರ ರಕ್ಷಣೆ ಮಾಡುತ್ತೇನೆಂದು ಸುಮ್ಮನೆ ಒಂದೊಂದು sentence ಅನ್ನು ಹೇಳಿಕೊಂಡು ಹೋಗಿದ್ದೀರಿ. ಈ 14 ಪೇಜ್‌ಗಳಲ್ಲಿ ಎಲ್ಲೂ ಕೂಡ ನಿರ್ದಿಷ್ಟವಾದದ್ದು, ಅಥವಾ ನಾನು ಇದನ್ನು ಇಷ್ಟು ದಿವಸಗಳಲ್ಲಿ ಮಾಡಿ ತೋರಿಸುತ್ತೇನೆಂಬುದು ಇಲ್ಲ. ಅದು ಬಿಡಿ. ಎಲ್ಲಾ ರಾಜ್ಯಗಳಲ್ಲೂ petrol, diesel, kerosene, ಮತ್ತು gas ಮೇಲೆ ಇರುವಂಥಾ cess, sale tax ಅನ್ನು ಆ ರಾಜ್ಯದ ಮುಖ್ಯಮಂತ್ರಿಗಳು exempt ಮಾಡುತ್ತಿದ್ದಾರೆ. ಕೆಲವು ಕಡೆ reduce ಮಾಡುತ್ತಿದ್ದಾರೆ. ಕೆಲವು ಕಡೆಗಳಲ್ಲಿ ತೆಗೆದು ಹಾಕುತ್ತಿದ್ದಾರೆ. ತಾವು ಅದನ್ನಾದರೂ mention ಮಾಡಿದ್ದೀರಾ? ಅದು ಜ್ವಲಂತ ಸಮಸ್ಯೆಯಾಗಿದೆ. ಯಾವುದೇ ಜ್ವಲಂತ ಸಮಸ್ಯೆಗೆ ಸ್ಪಂದನೆ ಇಲ್ಲ. ತಾವು ಒಳ್ಳೆಯ ಸರ್ಕಾರವನ್ನು ಕೊಡುತ್ತೇವೆ, ಪ್ರಾಮಾಣಿಕವಾದ ಸರ್ಕಾರ ಕೊಡುತ್ತೇವೆಂದು, ದಕ್ಷತೆ ಸರ್ಕಾರವನ್ನು ಕೊಡುತ್ತೇವೆಂದು, ಎಷ್ಟು ದಿವಸ ಹೀಗೆ ಹೇಳಿಕೊಂಡು ಹೋಗುತ್ತೀರಿ. ಈಗಾಗಲೇ ಎಂಟು ದಿವಸಗಳಾಯಿತು. ನಿಮ್ಮ ಕೈಯಲ್ಲಿ ಯಾವುದು ಇದೆ, ಅವೆಲ್ಲವೂ 5 ವರ್ಷಗಳದ್ದು ಒಂದೇ ವರ್ಷದಲ್ಲಿ, ಒಂದೇ ತಿಂಗಳಲ್ಲಿ ಆಗುತ್ತದೆಂದು ಹೇಳುವುದಿಲ್ಲ. ತಾವು ಇವೆಲ್ಲವನ್ನು ತಕ್ಷಣದಲ್ಲಿ ಮಾಡೇ ತೀರುತ್ತೇವೆಂದು ಹೇಳಿ ನಿಮ್ಮ ಬಾಯಿಂದ ಏನು ಹೇಳಿದ್ದೀರಿ. ಆ ಮಾತನ್ನು ನಾನು ಮೊದಲನೆಯದಾಗಿ ಕೇಳುತ್ತಿದ್ದೇನೆ. ಇನ್ನು ಎರಡನೆಯದಾಗಿ ಈ sales tax, cess, ಅನ್ನು

ತೆಗೆದು ಹಾಕುವಂಥಾದ್ದು ತಕ್ಷಣದ ಕಾರ್ಯಕ್ರಮವಾಗಿದೆ. ರೈತರಿಗೆ fertilizers, seeds, ಅನ್ನು ತಕ್ಷಣವೇ ಕೊಡುವಂಥ ಕಾರ್ಯಕ್ರಮವಾಗಿದೆ. ಮಾನ್ಯ ರಾಜ್ಯಪಾಲರೇ, ರೈತರಿಗೆ ಕಬ್ಬಿನ ಬೆಲೆಯನ್ನು ನಿಗದಿ ಮಾಡಿರಬಹುದು. ಆದರೆ, ಅದನ್ನು ಜಾರಿಗೆ ತರುವಂಥದನ್ನು ನೀವು ಮಾಡಬಹುದಾಗಿತ್ತು. ಇನ್ನೂ ಅನೇಕ ವಿಷಯಗಳು ಇವೆ. ಆದರೆ ಅವೆಲ್ಲವನ್ನೂ ತಾವು ಗಮನದಲ್ಲಿ ಇಟ್ಟುಕೊಂಡು ಮಾಡುತ್ತೇವೆನ್ನುವಂಥಾ ಮಾತನ್ನು ತಾವು ಹೇಳುತ್ತಿದ್ದೀರಿ. ಇದು ಎಷ್ಟರ ಮಟ್ಟಿಗೆ ಸಮಂಜಸ ವೆನ್ನುವಂಥದ್ದರ ಬಗ್ಗೆ ತಾವೇ ಚಿಂತನೆ ಮಾಡಬೇಕು. ಇನ್ನು ತಾವು ಇಷ್ಟೊಂದು ಮಂತ್ರಿಮಂಡಲ ಮಾಡಿದ್ದೀರಿ. ಆದರೆ ತಾವು ಮಾಡಿದಂಥ ಮಂತ್ರಿಮಂಡಲದ ಬಗ್ಗೆ ಅನೇಕ ಶಾಸಕರು ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ. ಈಗ ಅದರ ಬಗ್ಗೆ ಹೇಳುವುದಾದರೆ, ಮೈಸೂರಿನಿಂದ ಮಾನ್ಯ ಶಂಕರಲಿಂಗೇಗೌಡರು, ಅವರು ಸದನಕ್ಕೆ ಬಂದಿದ್ದಾರೋ ಇಲ್ಲವೋಗೊತ್ತಿಲ್ಲ.

ಶಂಕರಲಿಂಗೇಗೌಡರೇ, ತಾವು ಸದನಕ್ಕೆ ಮೂರು ಗಂಟೆಯವರೆಗೂ ಬರುವುದಿಲ್ಲವೆಂದು ಹೇಳಿದ್ದೀರಿ.

ಶ್ರೀ ಶಂಕರಲಿಂಗೇಗೌಡ : ಯಾರು ಹೇಳಿದ್ದು, ನಾನು ಆ ರೀತಿ ಹೇಳಿಲ್ಲ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಿಮ್ಮ ಮೇಲೆ ಗೌರವ ಇದೆ. ಪ್ರೀತಿ ನಿಮ್ಮ ಜೊತೆಯಲ್ಲಿ ಲಗ್ನ ಇನ್ನೊಬ್ಬರ ಜೊತೆಯಲ್ಲಿ ಮಾಡಿಕೊಳ್ಳುವುದಕ್ಕೆ ಹೋಗಬೇಡಿ. ಮಾನ್ಯ ಯಡಿಯೂರಪ್ಪನವರ ಮೇಲೆ ಪ್ರೀತಿ ಇಟ್ಟುಕೊಂಡು, ಲಗ್ನವನ್ನು ಇನ್ನೊಂದು ಕಡೆ ಮಾಡಿಕೊಳ್ಳುವುದಕ್ಕೆ ಹೋಗಬೇಡಿ. ಅವರ ಜೊತೆಯಲ್ಲಿಯೇ ಇರಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನೀವು ಕೊಟ್ಟಿರುವಂಥ statement ಅನ್ನು ನಾನು ಓದಲೇ? ಅವರೂ ಸಹ ಬೇಜಾರು ಪಟ್ಟರು. ನಾನು ಆ statement ಅನ್ನು ಓದುವುದಕ್ಕೆ ಹೋಗುವುದಿಲ್ಲ. ನಾನು ಅದನ್ನು ಓದಿದರೆ ಇವರಿಗೂ ಬೇಸರವಾಗುತ್ತದೆ. ನಾನು ಓದದೇ ಹೋದರೆ, ನನ್ನ ಮಾತನ್ನು ತಾವು ಏಕೆ ಹೇಳಲಿಲ್ಲ ಎಂದು ಅವರಿಗೆ ಬೇಸರವಾಗಬಹುದು. ಇದು ಒಂದು ಕಡೆಯಾದರೆ, ಇನ್ನೊಂದು ಕಡೆ ಆನೇಕಲ್‌ನಲ್ಲಿ ಭುಗಿಲೆದ್ದು ಹೋಯಿತು. ಇನ್ನೊಂದು ಕಡೆ

ಹುಬ್ಬಳ್ಳಿ ಮತ್ತು ಧಾರವಾಡ ನಗರಗಳಲ್ಲಿ ಮತ್ತೊಂದು ಕಡೆ MLC ಗಳು ಕೆಲವು ಸದಸ್ಯರು ಎದ್ದಿದ್ದಾರೆ. ಅವರೆಲ್ಲರ ಪಟ್ಟಿಯನ್ನು ಓದಿ ಎಂದರೆ ನಾನು ಬೇಕಾದರೆ ಓದುತ್ತೇನೆ. ನಮ್ಮದು ಅಸಮಾಧಾನ ಅಲ್ಲ. ನಿಮ್ಮದೇ ನಿಮ್ಮ ಪಕ್ಷದಲ್ಲಿದ್ದಂಥವರೇ ಏನೇನು ಹೇಳಿದ್ದಾರೆಂಬ ಹೇಳಿಕೆಗಳು ಇಲ್ಲಿ ಇವೆ. ನೀವು ನೋಡಿ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಜಗ್ಗೇಶ್‌ರವರ ಬಗ್ಗೆ ಹೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಅಧಿಕಾರಕ್ಕೆ ಬಂದರೆ ಜಗ್ಗೇಶ್ ಅನ್ನು ಸರಿ ಮಾಡುತ್ತಿದ್ದೆ. ನೀವು ಮಾಡುತ್ತಿರಾ? ಇದು ಇವತ್ತು ಸರ್ಕಾರ ರಚನೆ ಆದ ಮೇಲೆ ಅಡಿರುವಂಥ ಮಾತು ಇದು. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ನೀವು ಏನು ಹೇಳಿದ್ದೀರೆಂದರೆ, ನಮ್ಮಲ್ಲಿ ಸದಸ್ಯರು ಸಮಾಧಾನವಾಗಿ ಇದ್ದಾರೆಂದು ಹೇಳಿದಿರಿ. ನಾವು Stable Government ತರಬೇಕು, ದಕ್ಷ ಮತ್ತು ಸ್ವಚ್ಛ ಆಡಳಿತ ತರಬೇಕು ಎಂದು ಜನ ಅಧಿಕಾರಕ್ಕೆ ತಂದಿದ್ದಾರೆ ಎನ್ನತಕ್ಕಂಥ ಮಾತು ಅವರು ಹೇಳಿದ್ದರು. Stable ಎಷ್ಟರ ಮಟ್ಟಿಗೆ ಇದೆ?

ಶ್ರೀ ಸಿ.ಸಿ.ಪಾಟೀಲ್ : ಮಾನ್ಯ ವಿರೋಧ ಪಕ್ಷದ ನಾಯಕರನ್ನು ಆರಿಸುವಂಥ ಸಂದರ್ಭದಲ್ಲಿ ಎಷ್ಟು ಎಡವಟ್ಟು ಆಯಿತು ಮಾನ್ಯ ಖರ್ಗೆ ಸಾಹೇಬರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಒಂದು ಕಡೆ ಆನೇಕಲ್‌ನಿಂದ ಅನೇಕ ಜನರ ಹೇಳಿಕೆಗಳು ಬಂದಿವೆ. ಇನ್ನೊಂದು ಹುಬ್ಬಳ್ಳಿ ಧಾರವಾಡದಲ್ಲಿ ಹೇಳಿಕೆಗಳು ಬಂದಿವೆ. ಇವೆಲ್ಲವನ್ನೂ ನಾವು ನೋಡಿದಾಗ ಏನೋ Stable Government ಇರುತ್ತದೋ, ಇಲ್ಲವೋ ಎನ್ನತಕ್ಕಂಥ ಸಂಶಯ ಮೂಡುತ್ತದೆ. ಇಲ್ಲ, ಅವರನ್ನೆಲ್ಲಾ ಸುಧಾರಿಸಿಕೊಂಡಿದ್ದೇನೆ, ಚೆನ್ನಾಗಿ ಇಟ್ಟುಕೊಂಡಿದ್ದೇನೆ ಎಂದರೆ ಅದು ನಿಮಗೆ ಬಿಟ್ಟಂಥ ವಿಚಾರ. ಆದರೆ ಇಲ್ಲಿ ಬರತಕ್ಕಂಥ ವಿಚಾರಗಳು, ಪ್ರಸ್ತಾವ ಆದಂಥಾ ವಿಚಾರಗಳು, ಪತ್ರಿಕೆಗಳಲ್ಲಿ ಬರತಕ್ಕಂಥದ್ದು ಎಲ್ಲವನ್ನೂ ಕೂಡ ನೋಡಿದಾಗ ಈ ಮಾತುಗಳು ಇವತ್ತು ಬರುತ್ತಾ ಇವೆ. ಜೊತೆಜೊತೆಯಲ್ಲಿ, ಇದನ್ನು ನಾನೇ ಹೇಳುತ್ತೇನೆ ಎಂದು ಅಲ್ಲ, ಈಗ ಏನಾದರೂ ತಮ್ಮ ಪರವಾಗಿ ಬಂದರೆ ಅನೇಕ ಸಾರಿ ಇಲ್ಲೆಲ್ಲ ಓದುವವರು ಬರೇ ಹೇಳೇ ಹೇಳುತ್ತಾರೆ. ಮಾನ್ಯ ರಾಮಾ ಜೋಯಿಸ್‌ರವರು Former Chief Justice ಹೇಳಿದರು, Governor ಹೇಳಿದರು, ಇಲ್ಲ ಚರ್ಚೆಗೆ ಅವಶ್ಯಕತೆ ಇಲ್ಲ, ಹಾಗೇ ಮಾಡಬಹುದು. ಅದನ್ನು ಎಲ್ಲ ಕಡೆ quote ಮಾಡಿ ಮಾನ್ಯ ಬಿ.ಜೆ.ಪಿ. ನಾಯಕರೆಲ್ಲರೂ ಹೇಳಿದರು. ಮಾನ್ಯ ಕೋ.ಚನ್ನಬಸಪ್ಪನವರು ಒಂದು ಆರ್ಟಿಕಲ್ ಅನ್ನು ಉದಯವಾಣಿ ಪತ್ರಿಕೆಯಲ್ಲಿ ಬರೆದಿದ್ದಾರೆ. ಅದನ್ನು

ತಾವು ಓದಿರಬೇಕು. ಅದನ್ನು ನಾನು ಇಲ್ಲಿ ಹೇಳಲಾ? "ಜನಾದೇಶವೋ, ಅಥವಾ ಧನಾದೇಶವೋ" ಎಂದು head lineನಲ್ಲಿ ಬಂದಿದ್ದು. ಹಣದ ಹೊಳೆ ಅಲ್ಲಲ್ಲಿ ಮಹಾಸಾಗರ, ಈ ರಾಜ್ಯದಲ್ಲಿ ಉಕ್ಕಿ ಹರಿಯಲು, ಆ ಹಣ ಎಲ್ಲಿಂದ ಬಂತೆಂಬುದು ಚುನಾವಣಾ ಆಯೋಗಕ್ಕೂ ಗೊತ್ತಿದೆ. ಬಳ್ಳಾರಿ ಗಣಿ ರೆಡ್ಡಿ ದೊರೆಗಳು, ಈ ರಾಜ್ಯವನ್ನು ಅಕ್ರಮ ಗಣಿಗಾರಿಕೆಯಿಂದ ದರೋಡೆ, ಧನಶಾಹಿಯಿಂದ ಈ ರಾಜ್ಯವನ್ನೇ ಕೊಂಡು ಕೊಂಡಿದ್ದಾರೆನ್ನುವಂಥಾ ಈ ಹೇಳಿಕೆಗಳು ಪತ್ರಿಕೆಗಳಲ್ಲಿ ಬಂದಿವೆ. ಇದರಲ್ಲಿ ಸತ್ಯಾಂಶಗಳಿವೆನ್ನುವಂಥಾದ್ದು, ಮಾನ್ಯ ಮುಖ್ಯಮಂತ್ರಿಗಳಿಗೆ ಬಿಟ್ಟಿದ್ದು. ಆದರೆ ಈ ಮಾತುಗಳು ಬರಬೇಕಾಗಿದ್ದರೆ, ಯಾವ ರೀತಿಯಾಗಿ ರಾಜಕಾರಣದಲ್ಲಿ ಹಣದ ಪ್ರಭಾವ ಬೀರಿದೆ ಎನ್ನುವುದಕ್ಕೆ ಈ ಎಲ್ಲಾ articles ಇವೆ. ಕೆಲವರು ಹೆದರಿಕೊಂಡು ಹೇಳುವುದಿಲ್ಲ, ಕೆಲವರು ಹೆದರಿಕೊಂಡು ಬರೆಯುವುದಿಲ್ಲ, ಅಥವಾ ಕೆಲವು ಸಾರಿ ಬರೆಯುವುದನ್ನು ನಾವು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಇದು ಕೂಡ ಆಗುತ್ತದೆ. ಅದಕ್ಕಾಗಿ ನಮಗೆ ಬರೇ ಜನಾದೇಶವಿದೆ, ನಮಗೆ ಸಂಖ್ಯಾಬಲವಿದೆ ಅನ್ನುವಂಥಾದ್ದನ್ನು ಹೇಳಿಕೊಳ್ಳಬೇಡಿ. ಸಂಖ್ಯಾ ಬಲವೂ ಇಲ್ಲ, ಜನಾದೇಶವೂ ಕೂಡ ಇಲ್ಲ. ಕೇವಲ ಧನ ಬಲದ ಮೇಲೆ ಬಂದಿದ್ದೀರೆಂದರೆ ಈ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ, ಮತ್ತೆ ಧನ ಬಲದಿಂದ ಬಂದರೆ ನಾಳೆ ದಿವಸ ಏನು ಅನಾಹುತವಾಗುತ್ತದೆಂಬು ದನ್ನು ಕೂಡ ನಾನು ಹೇಳಿದ್ದೇನೆ. ಅದಕ್ಕಾಗಿ ನಿಮ್ಮ ಕಾರ್ಯಕ್ರಮದಿಂದ ಪ್ರಭಾ ವಿತವಾಗಬಹುದು. ನಿಮ್ಮ ಕಾರ್ಯಕ್ರಮದ ಮೇಲೆ ಪರಿಣಾಮವಾಗಬಹುದು, ಮತ್ತು ಸುಲಲಿತವಾಗಿ ನಡೆಯತಕ್ಕಂಥಾ ರಾಜ್ಯದಲ್ಲಿ ಮೂಲಭೂತ ಸೌಕರ್ಯಗಳನ್ನು ಕೊಡುತ್ತೇನೆಂದು ತಾವು ಏನು ಹೇಳಿದ್ದೀರಿ. ಅವೆಲ್ಲಕ್ಕೂ ಕೂಡ ನೀವು ಮುಕ್ತ ಹಸ್ತದಿಂದ ಕೆಲಸ ಮಾಡುವುದಕ್ಕೆ ಅವಕಾಶವಾಗುವುದಿಲ್ಲವೆನ್ನುವುದಕ್ಕೆ ಅನೇಕ ಸಾಕ್ಷಿಗಳು, ಆಧಾರಗಳು ಇವೆ. ಅದಕ್ಕಾಗಿ ನಾನು ಅದನ್ನು ಈಗಲೇ ಹೇಳುವುದಕ್ಕೆ ಹೋಗುವುದಿಲ್ಲ. ನಾನು ಇಷ್ಟು ಮಾತ್ರ ಹೇಳುವುದಕ್ಕೆ ಇಚ್ಛೆಸುತ್ತಿದ್ದೇನೆ. ಯಾವುದೇ ರೀತಿಯಿಂದ ನಿಮಗೆ ಕರ್ನಾಟಕ ರಾಜ್ಯದ ಜನತೆ ಸಂಪೂರ್ಣವಾದಂಥ ಬೆಂಬಲವನ್ನು ಕೊಡಲಿಲ್ಲ. ನೀವು ನಿಮ್ಮ ಹಣದ ಬಲದಿಂದ ಇವತ್ತು 6 ಜನ ಸದಸ್ಯರನ್ನು ತೆಗೆದುಕೊಂಡು 116 ಸದಸ್ಯರನ್ನು ಮಾಡಿಕೊಂಡು vote of confidence ಅನ್ನು ಕೇಳುತ್ತಿದ್ದೀರಿ. ಅದಕ್ಕಾಗಿ ಇದು ಎಷ್ಟು ದಿವಸ ನಡೆಯುತ್ತದೊ ನನಗೆ ಗೊತ್ತಿಲ್ಲ, ಮತ್ತೆ ಎಷ್ಟು ಜನರು ನಿಮ್ಮ ವಿರುದ್ಧ ಮತವನ್ನು ಹಾಕುತ್ತಾರೋ ಅದೂ ನನಗೆ ಗೊತ್ತಿಲ್ಲ, ಏಕೆಂದರೆ ಅಸಮಾಧಾನದ ಹೊಗೆ ಎಲ್ಲಾ ಕಡೆ ಇದೆ. ಅದಕ್ಕಾಗಿ ನಾನು ಹೆಚ್ಚಿನ ವಿಷಯವನ್ನು ಪ್ರಸ್ತಾಪ ಮಾಡದೇ, ಅಧ್ಯಕ್ಷರೆ, ಇವತ್ತು ಅವರು

vote of confidence ಏನು ತೆಗೆದುಕೊಳ್ಳುತ್ತಿದ್ದಾರೆ. ಇದನ್ನು ನಾನು ವಿಶೇಷವಾಗಿ ವಿರೋಧಿಸುವುದು ಏಕೆಂದರೆ, ನಿಜವಾಗಿ ಇದರ ಮಹತ್ವವನ್ನು ಕಳೆದುಕೊಂಡಿ ದ್ದಾರೆ. ಇದನ್ನು ಅವರು ಮೊದಲೇ ಮಾಡಿ ಆಮೇಲೆ ಇದನ್ನು ರಚಿಸಬೇಕಾಗಿತ್ತು. ಅದರಲ್ಲೂ ಕೂಡ ಇವರು ಎಡವಿದ್ದಾರೆ. ಅದಕ್ಕಾಗಿ ಅವರು ಈ ತರಾತುರಿಯಲ್ಲಿ ತೆಗೆದುಕೊಂಡಂಥಾ ನಿರ್ಣಯದಿಂದ ಅವರಿಗೆ ನಾಳೆ ದಿವಸ ತೊಂದರೆಯಾಗು ವಂಥಾ ಸಾಧ್ಯತೆ ಇದೆ. ಅದಕ್ಕಾಗಿ ನಾನು ಅವರು ಮಂಡಿಸಿರುವಂಥಾ ಈ confidence motion ಅನ್ನು ವಿರೋಧಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ. ಜೈಹಿಂದ್, ಜೈ ಕರ್ನಾಟಕ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ರಾಮನಗರ) : ಸನ್ಮಾನ್ಯ ಅಧ್ಯಕ್ಷರೇ, ಹೊಸ ಸರ್ಕಾರದ ನಾಯಕತ್ವವನ್ನು ವಹಿಸಿರತಕ್ಕಂಥ ಸನ್ಮಾನ್ಯ ಯಡಿಯೂರಪ್ಪನವರು ಈ ದಿನ ಅವರ ಸರ್ಕಾರದ ಪರವಾಗಿ ವಿಶ್ವಾಸಮತವನ್ನು ಈ ಸದನದಲ್ಲಿ ಪಡೆಯತಕ್ಕಂಥ ನಿಟ್ಟಿನಲ್ಲಿ ಒಂದು ಪ್ರಸ್ತಾಪವನ್ನು ಮಂಡನೆ ಮಾಡಿದ್ದಾರೆ. ಹಲವಾರು ವಿಷಯಗಳನ್ನು ಈಗಾಗಲೇ ಅವರು ಪ್ರಸ್ತಾಪ ಮಾಡಿದ್ದಾರೆ. ಅದೆಲ್ಲಕ್ಕಿಂತ ಪ್ರಮುಖವಾಗಿ ವಿರೋಧ ಪಕ್ಷದ ನಾಯಕರಾಗಿರತಕ್ಕಂಥ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸುದೀರ್ಘವಾಗಿ, ಕಳೆದ ಚುನಾವಣೆಯ ಪ್ರಕ್ರಿಯೆಗಳು ಯಾವ ರೀತಿ ನಡೆದವು ಎನ್ನುವುದನ್ನು ಸದನದ ಮುಂದೆ ಮಂಡನೆ ಮಾಡಿದ್ದಾರೆ. ನಾನು ಈ ಸಂದರ್ಭದಲ್ಲಿ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳಲಿಕ್ಕೆ ಹೋಗತಕ್ಕಂಥಾದ್ದು ಅನಾವಶ್ಯಕ ಎನ್ನುವುದು ನನ್ನ ಭಾವನೆ. ಸದನದಲ್ಲಿ ಮುಖ್ಯಮಂತ್ರಿಗಳು ಪ್ರಸ್ತಾವವನ್ನು ಮಂಡನೆ ಮಾಡುತ್ತಿದ್ದಾಗ, ನಾನು ಗಮನಿಸುತ್ತಿದ್ದೆ, ಆ ಭಾಗದ ಕೆಲವು ಸದಸ್ಯರುಗಳು ಮತ್ತು ಸಚಿವರುಗಳೇ, ಖಾಲಿ ಖುರ್ಚಿಗಳು ಇರತಕ್ಕಂಥಾದ್ದನ್ನು ಗಮನಿಸಿ ಗಾಬರಿಯಿಂದ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ, ಆಚೆ ಹೋಗುತ್ತಿದ್ದಂಥಾದ್ದನ್ನು ಗಮನಿಸುತ್ತಿದ್ದೆ. ಈ ಸರ್ಕಾರವನ್ನು ಆರು ಪಕ್ಷೇತರ ಶಾಸಕರ ಬೆಂಬಲದಿಂದ ರಚನೆ ಮಾಡಿದ್ದಾರೆ. ಇದು ಒಂದು ರೀತಿಯಲ್ಲಿ ಸಮ್ಮಿಶ್ರ ಸರ್ಕಾರವಾಗಿಯೇ ಕೆಲಸವನ್ನು ನಿರ್ವಹಿಸತಕ್ಕಂಥ ಫಲಿತಾಂಶ ಏನಿದೆ, ಅದನ್ನು ಸೂಚಿಸುತ್ತದೆ. ನಾನು ಈ ಸರ್ಕಾರದ ಬಗ್ಗೆ, ಅತಂತ್ರ ಸರ್ಕಾರ ಎನ್ನತಕ್ಕಂಥ ಪದಗಳನ್ನು ಬಳಸಲಿಕ್ಕೆ ಹೋಗುವುದಿಲ್ಲ. ನಾನು ಆ ಮಾತನ್ನು ಬಳಸಿದರೆ ಆ ಒಂದು ಗ್ಯಾಲರಿಯಲ್ಲಿ ಕುಳಿತಿರತಕ್ಕಂಥ, ಕಾರ್ಯವನ್ನು ನಿರ್ವಹಣೆ ಮಾಡತಕ್ಕಂಥ, ಸರ್ಕಾರದ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರತಕ್ಕಂಥ ಜವಾಬ್ದಾರಿಯುನ್ನು ನಿರ್ವಹಿಸತಕ್ಕಂಥವರು ಎಷ್ಟಮಟ್ಟಿಗೆ ಸರ್ಕಾರಕ್ಕೆ ಬೆಂಬಲವನ್ನು ಕೊಡುತ್ತಾರೆ

ಎನ್ನುವ ಒಂದು ಅನುಭವವೂ ನನಗೆ ಆಗಿರತಕ್ಕಂಥ ಸನ್ನಿವೇಶವಿರುವುದರಿಂದ, ಈ ಸರ್ಕಾರದಲ್ಲಿ ಇರತಕ್ಕಂಥ ಲೋಪಗಳ ಬಗ್ಗೆ, ಈ ಸರ್ಕಾರದ ಶಕ್ತಿಯ ಬಗ್ಗೆ ನಾನು ಚರ್ಚೆಯನ್ನು ಮಾಡುವುದರ ಮುಖಾಂತರ ರಾಜ್ಯದ ಅಭಿವೃದ್ಧಿಗೆ ಅನಾಹುತಗಳು ಆಗಬಾರದು ಎನ್ನುವ ದೃಷ್ಟಿಯಿಂದ ಅದಕ್ಕೆ ಹೆಚ್ಚಿನ ಮಹತ್ವವನ್ನು ನಾವು ಕೊಡಲಿಕ್ಕೆ ಹೋಗಬಾರದು ಎನ್ನುವ ನೆನಪನ್ನು ಇಲ್ಲಿ ಹೇಳಲಿಕ್ಕೆ ಬಯಸುತ್ತಿದ್ದೇನೆ. ಇವತ್ತು ಸನ್ಮಾನ್ಯ ಯಡಿಯೂರಪ್ಪನವರು ಹೇಳಿದ್ದಾರೆ. ಅವರು ಸಂಘ ಪರಿವಾರದಿಂದ ಬಂದಿರತಕ್ಕಂಥವರು, ನಿಷ್ಠೆಯಿಂದ ಬಂದಿರತಕ್ಕಂಥವರು, ಹೋರಾಟದಿಂದ ಬಂದಿರತಕ್ಕಂಥವರು ಎಂದೆಲ್ಲಾ ಅವರು ಹೇಳಿದ್ದಾರೆ. ಸನ್ಮಾನ್ಯ ಖರ್ಗೆಯವರು ಹೇಳಿದ ಹಾಗೆ, ಆ ಜಾಗದಲ್ಲಿ ಕುಳಿತು ಭಾಷಣವನ್ನು ಮಾಡಬೇಕಾದರೆ, ನಾವು ಏನು ಮಾತುಗಳನ್ನು ಆಡುತ್ತೇವೆ, ಆ ಮಾತುಗಳನ್ನು ಅನುಷ್ಠಾನಕ್ಕೆ ತರಬೇಕಾದರೆ ಅದು ಅಷ್ಟು ಸುಲಭವಾಗಿ ಸಾಧ್ಯವಿಲ್ಲ ಎನ್ನತಕ್ಕಂಥಾದ್ದು ಹಲವಾರು ನಿದರ್ಶನಗಳನ್ನು ನೋಡಿದಾಗ ನಾವು ಗಮನಿಸಬಹುದು ಎನ್ನುವುದು ನನ್ನ ಅಭಿಪ್ರಾಯ. ಇವತ್ತು, ಈ ಸರ್ಕಾರ ಯಾವ ರೀತಿ ರಚನೆಯಾಯಿತು, ಇವತ್ತು ಬಿ.ಜೆ.ಪಿ.ಯ ನಾಯಕರುಗಳು, ನಾವು 110 ಶಾಸಕರುಗಳು ಗೆದ್ದಿದ್ದೇವೆ, ಬಹುಮತ ಪಡೆದಿದ್ದೇವೆ, ಜನಾದೇಶ ನಮ್ಮ ಪರವಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ ಪ್ರತಿಯೊಬ್ಬರಲ್ಲೂ ಕೆಲವು ರೀತಿಯ ಅಳುಕುಗಳು ಇರತಕ್ಕಂಥಾದ್ದನ್ನು ನಾನು ಗಮನಿಸಿದ್ದೇನೆ. ಇವತ್ತು ಈ ಸರ್ಕಾರ ರಚನೆಯಾಗತಕ್ಕಂಥ ಸಂದರ್ಭದಲ್ಲಿ ಆದಂಥ ಘಟನೆಗಳನ್ನು ನೋಡಿ. ವಿರೋಧ ಪಕ್ಷದ ನಾಯಕರು ಕೆಲವು ವಿಷಯಗಳನ್ನು ಹೇಳಿ ಅಲ್ಲಿಗೇ ನಿಲ್ಲಿಸಿದರು. ಬಹುಶಃ ಈ ರಾಷ್ಟ್ರದ ಇತಿಹಾಸದಲ್ಲಿ, ಈ ರಾಜ್ಯದ ಇತಿಹಾಸದಲ್ಲಿ, ಯಾವುದಾದರೂ ಒಬ್ಬ ಶಾಸಕರನ್ನು ಮಂತ್ರಿಯನ್ನಾಗಿ ಮಾಡಲಿಲ್ಲ ಎನ್ನುವ ಕಾರಣದಿಂದ ಸಾರ್ವಜನಿಕ ಆಸ್ತಿಗೆ ನಷ್ಟ ಉಂಟು ಮಾಡತಕ್ಕಂಥ ಘಟನೆ ನಡೆದಿದ್ದರೆ ಅದು ಕರ್ನಾಟಕ ರಾಜ್ಯದಲ್ಲಿ ಮೊದಲ ಬಾರಿಗೆ ನಡೆದು ಇತಿಹಾಸ ಸೃಷ್ಟಿಯಾಗಿದೆ. ಅದೂ ಸಹ ಅದೇ ಪಕ್ಷಕ್ಕೆ ಸೇರಿರತಕ್ಕಂಥ ಕಾರ್ಯಕರ್ತರುಗಳು ಒಂದು ಕಡೆ ಸಾರ್ವಜನಿಕ ಆಸ್ತಿಗೆ ನಷ್ಟವನ್ನು ಉಂಟು ಮಾಡಿದ್ದಾರೆ. ಮತ್ತೊಂದು ಕಡೆ ಆಯಾ ಕ್ಷೇತ್ರಗಳಲ್ಲಿ ಸಾರ್ವಜನಿಕ ಚಟುವಟಿಕೆಗಳನ್ನು ನಿಲ್ಲಿಸತಕ್ಕಂಥಾದ್ದಕ್ಕೆ ಬಂದ್ ಘೋಷಣೆ ಮಾಡಿ, ಬಲವಂತವಾಗಿ ಬಂದ್ ಆಚರಣೆ ಮಾಡಿರತಕ್ಕಂಥ ಘಟನೆಗಳು, ಬಹುಶಃ ಈ ಸರ್ಕಾರ ಮುಂದಿನ ದಿನಗಳಲ್ಲಿ ಯಾವ ರೀತಿ ಹೋಗಬಹುದು ಎನ್ನುವುದನ್ನು ಈ ರಾಜ್ಯದ ಜನತೆಗೆ ಪರಿಚಯ ಮಾಡಿಕೊಟ್ಟಿದ್ದಾರೆ ಎಂದು ಹೇಳಲಿಕ್ಕೆ ಬಯಸುತ್ತೇನೆ.

ಸನ್ಮಾನ್ಯ ಮುಖ್ಯಮಂತ್ರಿಗಳು ರೈತರ ಹೆಸರಿನಲ್ಲಿ ಪ್ರಮಾಣ ವಚನವನ್ನು ಸ್ವೀಕಾರ ಮಾಡಿದರು. ಅವರು ಪ್ರಮಾಣ ವಚನ ಸ್ವೀಕಾರ ಮಾಡಿದಂಥ 24 ಗಂಟೆಗಳಲ್ಲಿ ಏನೇನು ಘಟನೆಗಳು ನಡೆದವು ಎನ್ನುವುದನ್ನು ಗಮನಿಸಬೇಕು. ಈ ರಾಜ್ಯದಲ್ಲಿ ರೈತರು ಬಿತ್ತನೆ ಮಾಡತಕ್ಕಂಥ ಸಂದರ್ಭದಲ್ಲಿ, ಮಾರುಕಟ್ಟೆಗೆ ಗೊಬ್ಬರವನ್ನು ಪಡೆಯಲಿಕ್ಕೆ ಹೋದಾಗ ಏನು ಘಟನೆಗಳು ನಡೆದಿದೆ ಎನ್ನುವುದನ್ನು ನಾನು ಮತ್ತೆ ವಿವರವಾಗಿ ಹೇಳಬೇಕಾದಂಥದು ಅನಾವಶ್ಯಕ. ಈಗಾಗಲೇ ನಮ್ಮ ಸನ್ಮಾನ್ಯ ಖರ್ಗೆಯವರು ಆ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಕಳೆದ ಸರ್ಕಾರದಲ್ಲಿ ನಾವು ಯಾವ ರೈತನಿಗೆ ಬಿತ್ತನೆ ಬೀಜವನ್ನು ಕೊಡಲು 75% ಸಬ್ಸಿಡಿ ಕೊಡುವ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತಂದಿದ್ದೆವು. ಆದರೆ, ಕಾರಣಾಂತರಗಳಿಂದ ರಾಜ್ಯಪಾಲರ ಆಡಳಿತದಲ್ಲಿ ಅದನ್ನು 25% ಕಡಿತ ಮಾಡಿರತಕ್ಕಂಥಾದ್ದು ಏನಿದೆ, ಅದನ್ನು ನಾವು ಮುಂದುವರೆಸಿಕೊಂಡು ಹೋಗುತ್ತೇವೆ ಎಂದು ಮುಖ್ಯ ಮಂತ್ರಿಗಳು ಹೇಳಿರತಕ್ಕಂಥ ವರದಿಗಳನ್ನು ನಾನು ಗಮನಿಸಿದ್ದೇನೆ. ಯಾವ ರೈತನ ಹೆಸರಿನ ಮೇಲೆ ತಾವು ಪ್ರಮಾಣವನ್ನು ಮಾಡಿದಿರಿ, ಇವತ್ತು ಆ ರೈತನಿಗೆ ಉತ್ತಮವಾದ ಬಿತ್ತನೆ ಬೀಜವನ್ನು ಕೊಡತಕ್ಕಂಥ ಸಂದರ್ಭದಲ್ಲಿ ಆ ಸಬ್ಸಿಡಿಯನ್ನು ಕಿತ್ತು ಹಾಕತಕ್ಕಂಥ ಘಟನೆಗಳೇನಿವೆ, ಇದು ರೈತರ ಹೆಸರಿನಲ್ಲಿ, ರೈತರ ಹೆಸರನ್ನು ಸ್ಮರಿಸಿ ಪ್ರಮಾಣ ಸ್ವೀಕಾರ ಮಾಡಿದ 24 ಗಂಟೆಗಳಲ್ಲಿ ಕೊಟ್ಟಿರತಕ್ಕಂಥ ಕೊಡುಗೆ ಎನ್ನುವುದನ್ನು ನಿಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಸಾರ್ವಜನಿಕವಾಗಿ ಹೇಳಿಕೆಯನ್ನು ಕೊಡತಕ್ಕಂಥಾದ್ದು ಬೇರೆ, ಅನುಷ್ಠಾನಕ್ಕೆ ತರತಕ್ಕಂಥಾದ್ದು ಬೇರೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ.

ತಾವು ನಡೆಸಿದ ವಿಡಿಯೋ ಕಾನ್ಫರೆನ್ಸ್ ಮುಖಾಂತರ ವಿಧಾನಸೌಧದಲ್ಲಿ ಕುಳಿತು ಎಲ್ಲಾ ಜಿಲ್ಲಾಧಿಕಾರಿಗಳ ಹತ್ತಿರ ಚರ್ಚೆಯನ್ನು ಮಾಡುತ್ತಿದ್ದೀರಿ. ಆಗ ನೀವು ಒಂದು ಪದವನ್ನು ಬಳಸಿರುವುದನ್ನು ನಾನು ಗಮನಿಸಿದ್ದೇನೆ. ಹಾಸನ ಜಿಲ್ಲೆಯ ಜಿಲ್ಲಾಧಿಕಾರಿಗಳೊಂದಿಗೆ ನೀವು ಚರ್ಚೆಯನ್ನು ಮಾಡಬೇಕಾದರೆ ಅರಕಲಗೂಡು ತಾಲ್ಲೂಕಿನಲ್ಲಿ ಕೆಲವು ರೈತರುಗಳು ಗೊಬ್ಬರ ಮಾರಾಟ ಮಾಡತಕ್ಕಂಥವರ ಮಳಿಗೆಗಳಿಗೆ ನುಗ್ಗಿ ಗೊಬ್ಬರದ ಚೀಲಗಳನ್ನು ಎತ್ತಿಕೊಂಡು ಹೋದರು ಎನ್ನುವ ವಿಷಯದ ಬಗ್ಗೆ ಈಗ ನೀವು ಯಾರನ್ನು ಬಂಧಿಸಿದ್ದೀರಿ, ಅವರ ಹಿನ್ನೆಲೆ ಏನು, ಅದರ ಬಗ್ಗೆ ಇಲ್ಲಿಯವರೆಗೆ ಸರ್ಕಾರಕ್ಕೆ ಏಕೆ ವರದಿ ಯನ್ನು ಕೊಡಲಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ಅಲ್ಲೇ ತಮ್ಮ ನಿಲುವು ಗೊತ್ತಾಗುತ್ತದೆ. ಯಾವುದೇ ರೀತಿಯ ದ್ವೇಷ, ರಾಗ, ಅಸೂಯೆಗಳಿಲ್ಲದೆ ಕೆಲಸ ಮಾಡುತ್ತೇನೆ ಎಂದು ಹೇಳಿದ ನೀವು ಯಾವ ರೀತಿಯ ಪದಗಳನ್ನು ಬಳಸಿದ್ದೀರಿ

ಎನ್ನುವುದು ಗೊತ್ತಾಗುತ್ತದೆ. ಇವತ್ತು ಈ ರೀತಿಯ ಘಟನೆ ನಡೆದಿರುವುದು ಕೇವಲ ಅರಕಲಗೂಡು ಒಂದರಲ್ಲೇ ಅಲ್ಲ. ಅದು ದಾವಣಗೆರೆ ಇರಬಹುದು, ನಿಮ್ಮ ಜಿಲ್ಲೆ ಇರಬಹುದು ಎಲ್ಲ ಕಡೆಗಳಲ್ಲೂ ನಡೆದಿದೆ. ನಿನ್ನೆಯೂ ನಿಮ್ಮ ಜಿಲ್ಲೆಯಲ್ಲೇ ಇಂಥ ಘಟನೆ ನಡೆದಿದೆ. ನೀವು ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕಾರ ಮಾಡಿದ ಎರಡು ದಿವಸಗಳ ನಂತರ ದೆಹಲಿಗೆ ಪ್ರಯಾಣ ಬೆಳಿಸಿದಿರಿ. ಹಲವಾರು ನಾಯಕರುಗಳನ್ನು ಭೇಟಿ ಮಾಡಿ ಅವರೆಲ್ಲರೂ ಸಹಕಾರವನ್ನು ಕೋರಲು ಹೋದಿರಿ. ಈಗ ಮುಂಗಾರು ಮಳೆ ಪ್ರಾರಂಭವಾಗಿದೆ. ರಾಜ್ಯದಲ್ಲಿ ರೈತರು ಬಿತ್ತನೆ ಮಾಡತಕ್ಕಂಥ ಕಾಲ ಸನ್ನಿಹಿತವಾಗಿರುವಂಥ ಈ ಸಂದರ್ಭದಲ್ಲಿ ರೈತರಿಗೆ ಸರ್ಕಾರ ಯಾವ ಯಾವ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ, ರೈತನಿಗೆ ಗೊಬ್ಬರದ ಅವಶ್ಯಕತೆ ಏನಿದೆ, ಎನ್ನುವ ಮಾಹಿತಿಗಳನ್ನೆಲ್ಲಾ ಪಡೆಯದೇ ತಾವು ದೆಹಲಿಯಲ್ಲಿ ಭೇಟಿ ಮಾಡತಕ್ಕ ನಿರ್ಧಾರವನ್ನು ಮಾಡಿ ಅಲ್ಲಿಗೆ ಹೋದಾಗ, ನೀವು ಕೇಂದ್ರದ ಸಂಬಂಧಪಟ್ಟ ಇಲಾಖೆಯ ಸಚಿವರನ್ನು ಭೇಟಿ ಮಾಡಿ ತಾವೇ ಅವರಿಗೆ ಮನವಿಯನ್ನು ಮಾಡಿ ಇವತ್ತು ಈ ಸರ್ಕಾರಕ್ಕೆ, ನಮ್ಮ ರಾಜ್ಯಕ್ಕೆ ಬಿತ್ತನೆಗೆ ಬೇಕಾಗಿರತಕ್ಕಂತ ಗೊಬ್ಬರದ ಅವಶ್ಯಕತೆ ಏನಿದೆ ಎನ್ನುವ ವಿಷಯವನ್ನು ಪ್ರಸ್ತಾಪ ಮಾಡದೇ ತಾವು ಈಗ ಮತ್ತೇ ಪ್ರಧಾನ ಮಂತ್ರಿಗಳಿಗೆ ಪತ್ರವನ್ನು ಬರೆಯುತ್ತೇನೆ ಎನ್ನುವ ಮಾತನ್ನು ಹೇಳುತ್ತಿದ್ದೀರಿ. ಸರ್ಕಾರದ ಅಧಿಕಾರಿಗಳಿಗೆ ನೀವು ಮೊದಲೇ ಸೂಚನೆಯನ್ನು ಕೊಡಬೇಕಾಗಿತ್ತು. ಬಿತ್ತನೆ ಕೆಲಸ ಪ್ರಾರಂಭವಾದಾಗ ಗೊಬ್ಬರದ ಅವಶ್ಯಕತೆ ಯಾವ ರೀತಿ ಇದೆ ಎನ್ನುವ ಮಾಹಿತಿಯನ್ನು ನಿಮಗೆ ಸರಿಯಾಗಿ ಕೊಟ್ಟಿದ್ದಾರೋ, ಇಲ್ಲವೋ ಗೊತ್ತಿಲ್ಲ. 2007ನೇ ಇಸವಿಯಲ್ಲಿ ಇದ್ದಂಥ ಸ್ಟಾಕ್ ಏನು? ಆ ಸಂದರ್ಭದಲ್ಲಿ ಮೇ, ಜೂನ್ ತಿಂಗಳಲ್ಲಿ ಏನು ಸ್ಟಾಕ್ ಇತ್ತು, ಈ ವರ್ಷ ಏನು ಸ್ಟಾಕ್ ಇದೆ ಎನ್ನುವ ಬಗ್ಗೆ ತಾವು ಮಾಹಿತಿಯನ್ನು ಪಡೆಯುವುದು ಸೂಕ್ತ. ಅಧಿಕಾರಿಗಳು ಏನು ಅಸಡ್ಡೆಯಿಂದ ಈ ರೀತಿಯ ಕೆಲಸವನ್ನು ಮಾಡುತ್ತಿದ್ದಾರೆ, ಆ ಅಧಿಕಾರಿಗಳಿಗೆ ನೀವು ಎಚ್ಚರಿಕೆಯನ್ನು ಕೊಟ್ಟಿದ್ದೀರಿ. ರೈತರ ವಿಷಯದಲ್ಲಿ ಹೆಚ್ಚಿನ ಗಮನವನ್ನು ಕೊಡತಕ್ಕಂಥದ್ದು ಸೂಕ್ತ.

ಜಂಟಿ ಅಧಿವೇಶನವನ್ನು ಉದ್ದೇಶಿಸಿ ರಾಜ್ಯಪಾಲರು ಭಾಷಣವನ್ನು ಮಾತನಾಡಬೇಕು ಎನ್ನತಕ್ಕಂಥ ವಿಷಯದಲ್ಲಿ ಸಾರ್ವಜನಿಕವಾಗಿ ಚರ್ಚೆಗಳು ನಡೆದಿರತಕ್ಕಂಥದ್ದನ್ನೂ ಗಮನಿಸಿದ್ದೇನೆ. ರಾಜ್ಯಪಾಲರು ನಿರಾಕರಣೆ ಮಾಡಿದ್ದಾರೆ, ಮೊದಲು ವಿಶ್ವಾಸಮತವನ್ನು ಪಡೆದ ನಂತರ ನಾನು ಜಂಟಿ ಸದನವನ್ನು ಉದ್ಧೇಶಿಸಿ ಮಾತನಾಡುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ ಎಂದಾಗ ನಿಮ್ಮ ಪಕ್ಷದ ವತಿಯಿಂದ ಬಂದಂಥ ಹಲವಾರು ರೀತಿಯ ಪ್ರತಿಕ್ರಿಯೆಗಳನ್ನೂ

ಗಮನಿಸಿದ್ದೇನೆ. ನೀವು ಇಷ್ಟೊಂದು ತರಾತುರಿಯಲ್ಲಿ ಜಂಟಿ ಸದನವನ್ನು ಉದ್ದೇಶಿಸಿ ಮಾತನಾಡಲು ರಾಜ್ಯಪಾಲರನ್ನು ಒಪ್ಪಿಸತಕ್ಕಂಥಾದ್ದಕ್ಕೆ ಪ್ರಯತ್ನ ಪಟ್ಟು, ತಾವು ಆದಷ್ಟು ಬೇಗ ಬರಬೇಕು ಎನ್ನುವ ಒತ್ತಡವನ್ನೇನು ಹೇರಿದಿರಿ, ಅದನ್ನು ನೋಡಿ ನನಗೆ ಎಲ್ಲೋ ಒಂದು ಕಡೆ ಗಾಬರಿ ಇತ್ತು. ಈ ರಾಜ್ಯದ ಜನತೆಗೆ ಏನೋ ಒಂದು ದೊಡ್ಡ ಚಿನ್ನದ ಹೊಳೆಯನ್ನೇ ಹರಿಸತಕ್ಕಂಥ ಕಾರ್ಯಕ್ರಮ ಗಳನ್ನು ಘೋಷಣೆ ಮಾಡಲಿಕ್ಕೆ ರಾಜ್ಯಪಾಲರು ಇಲ್ಲಿ ಬರಬೇಕೆನ್ನತಕ್ಕಂಥ ಒಂದು ಮನವಿಯನ್ನು ಮಾಡಿದ್ದೀರೆನ್ನುವ ಭಾವನೆ ಇಟ್ಟಿದ್ದೆ. ಆದರೆ, ಇವತ್ತಿನ ರಾಜ್ಯ ಪಾಲರ ಭಾಷಣವನ್ನು ನೋಡಿದಾಗ ಇವತ್ತು ಅದರಲ್ಲಿರತಕ್ಕಂಥ 14 ಪುಟಗಳ ಸಾರಾಂಶವನ್ನು, ಈ ಸರ್ಕಾರದ ಭಾವನೆಗಳು ಏನು ಎನ್ನುವುದನ್ನು ರಾಜ್ಯ ಪಾಲರ ಮುಖಾಂತರ, ಸದನದ ಮುಖಾಂತರ ರಾಜ್ಯದ ಜನತೆಗೆ ಏನು ಇಟ್ಟಿ ದ್ದೀರಿ, ಬಹುಶಃ ಮುಂದಿನ ದಿನಗಳು ಈ ಸರ್ಕಾರ ನಿಷ್ಕ್ರಿಯವಾಗಿ ನಡೆಯ ತಕ್ಕಂಥ ಸರ್ಕಾರ ಎನ್ನುವ ಭಾವನೆಯನ್ನು ಮೂಡಿಸತಕ್ಕಂಥದ್ದರಲ್ಲಿ ಇವತ್ತಿನ ತಮ್ಮ ಸರ್ಕಾರದ ವಿಷಯಗಳನ್ನು ರಾಜ್ಯಪಾಲರ ಮುಖಾಂತರ ಏನು ಈ ರಾಜ್ಯದ ಜನತೆಯ ಮುಂದಿಟ್ಟಿದ್ದೀರಿ, ಆ 14 ಪುಟಗಳನ್ನು ನೋಡಿದಾಗ ಬಹುಶಃ ಇದು ನಿಷ್ಕ್ರಿಯವಾದ ಸರ್ಕಾರವಾಗಿ ಮುಂದಿನ ದಿನಗಳಲ್ಲಿ ಕೆಲಸವನ್ನು ನಿರ್ವಹಿಸುತ್ತದೆ ಎನ್ನತಕ್ಕಂಥ ಒಂದು ವಾತಾವರಣವನ್ನು ನಿರ್ಮಾಣ ಮಾಡ ತಕ್ಕಂಥ ಒಂದು ಭಾಷಣವನ್ನು ಓದಿಸಿದ್ದೀರಿ ಎನ್ನತಕ್ಕಂಥದ್ದು ನನ್ನ ಭಾವನೆ. ಈ ಒಂದು ಸಂದರ್ಭದಲ್ಲಿ ತಾವು ವಿಶ್ವಾಸ ಮತವನ್ನೇನು ಕೋರಿದ್ದೀರಿ, ಇವತ್ತು ನಿಮ್ಮ ಜವಾಬ್ದಾರಿ ಏನೆಂದರೆ ವಿಶ್ವಾಸ ಮತವನ್ನು ಪಡೆಯ ತಕ್ಕಂಥದ್ದು ಈ ಸದನದ ನಾವು ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತು ಸಂಪೂರ್ಣ ಸಹಕಾರ ಕೊಡಲಿಕ್ಕೆ ಸಿದ್ಧರಿದ್ದೇವೆ. ನೀವು ಮಾತಿನಲ್ಲಿ ಹೇಳ ತಕ್ಕಂಥದ್ದನ್ನು ಕೃತಿಯಲ್ಲಿ ತರತಕ್ಕಂಥದ್ದರಲ್ಲಿ ತೊಂದರೆಯಾದಾಗ ನಾವು ನಿಮ್ಮ ವಿರೋಧವಾಗಿ ನಾವೇನು ಕೆಲಸಗಳನ್ನು ಮಾಡಬೇಕಾಗುತ್ತದೆ ಆ ಕೆಲಸವನ್ನು ಮಾಡುತ್ತೇವೆನ್ನತಕ್ಕಂಥ ಮಾತನ್ನು ಹೇಳಿ, ಇವತ್ತು ನಮ್ಮ ಪಕ್ಷದ ಪರವಾಗಿ ಮಾತನಾಡಲಿಕ್ಕೆ ಸನ್ಮಾನ್ಯ ಅಧ್ಯಕ್ಷರು ನನಗೇನು ಅವಕಾಶ ಕೊಟ್ಟಿದ್ದೀರಿ, ನಿಮಗೆ ವಂದಿಸಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

ಶ್ರೀ ಸಿದ್ದರಾಮಯ್ಯ : (ವರುಣಾ) ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ದಿವಸ ಸದನದಲ್ಲಿ ಇರಲಿಲ್ಲ. ನಿಮ್ಮ ಆಯ್ಕೆ ಅವಿರೋಧವಾಗಿ ಆಗಿದೆ. ನಿಮಗೆ ಮೊದಲಿಗೆ ನನ್ನ ಹೃತ್ಪೂರ್ವಕವಾದ ಧನ್ಯವಾದಗಳು ಮತ್ತು ಅಭಿನಂದನೆಗಳು. ಮಾನ್ಯ ಮುಖ್ಯಮಂತ್ರಿಗಳು ಬಹಳ ತರಾತುರಿಯಲ್ಲಿ ಇವತ್ತು ರಾಜ್ಯಪಾಲರ

ಮೂಲಕ ಭಾಷಣವನ್ನು ಕೂಡ ಮಾಡಿಸಿದ್ದಾರೆ. ಹಾಗೆಯೇ ಅದೇ ದಿನ ವಿಶ್ವಾಸ ಮತವನ್ನು ಕೂಡ ಯಾಚನೇ ಮಾಡಿದ್ದಾರೆ. ರಾಜ್ಯಪಾಲರ ಭಾಷಣವನ್ನು ಇವತ್ತೇ ಮಾಡಿಸಬೇಕೆಂದೇನೂ ಇರಲಿಲ್ಲ. ಏಕೆಂದರೆ ಈ ತಿಂಗಳ 23ನೇ ತಾರೀಖಿನಿಂದ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯನ್ನು ಇಟ್ಟುಕೊಂಡಿರುವಂಥದ್ದು. 23ನೇ ತಾರೀಖಿನಂದೇ ರಾಜ್ಯಪಾಲರ ಭಾಷಣವನ್ನು ಮಾಡಿಸಿ ಇಲ್ಲಿ ಅದರ ಮೇಲಿನ ಚರ್ಚೆಯನ್ನು ಪ್ರಾರಂಭ ಮಾಡಬಹುದಾಗಿತ್ತು. ಅಷ್ಟೊಂದು ಆತುರ ಆತುರವಾಗಿ ರಾಜ್ಯಪಾಲರ ಮೇಲೆ ನೀವು ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಲೇಬೇಕೆಂದು ಒತ್ತಡ ಹಾಕಿ ಅದನ್ನು ಮಾಡಿಸತಕ್ಕಂಥ ಪ್ರಯತ್ನ ಏಕೆ ಮಾಡಿದ್ದೀರೋ ನನಗೆ ಗೊತ್ತಿಲ್ಲ.

ಶ್ರೀ ಎಸ್.ಸುರೇಶ್‌ಕುಮಾರ್ : ಅದಕ್ಕೆ Constitution ನಲ್ಲಿ ಅವಕಾಶವಿದೆ.

ಶ್ರೀ ಸಿದ್ದರಾಮಯ್ಯ : Constitution 23ನೇ ತಾರೀಖು ಮಾಡಿದರೆ ಬೇಡವೆಂದೇನೂ ಇರಲಿಲ್ಲ. ಅದು ಅಲ್ಲಿ ಇರಲಿ. ಸೋಮವಾರ ಮಾಡಬಹುದಾಗಿತ್ತು, ಇನ್ನೊಂದು ದಿನ ಮಾಡಬಹುದಾಗಿತ್ತು. Joint Session ಮತ್ತು ಇವತ್ತೇ confidence motion move ಮಾಡಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ, ಈ ರಾಜ್ಯದ ಜನತೆ ನಮಗೆ ಸಂಪೂರ್ಣ ಆಶೀರ್ವಾದ ಮಾಡಿದ್ದಾರೆ, ಅಭೂತಪೂರ್ವವಾದಂಥ ತೀರ್ಪನ್ನು ಕೊಟ್ಟಿದ್ದಾರೆ, ಸ್ಥಿರ ಸರ್ಕಾರ ಮಾಡಲಿಕ್ಕೆ ಕೊಟ್ಟಿದ್ದಾರೆ, ಸುಭದ್ರ ಸರ್ಕಾರ ಮಾಡಲಿಕ್ಕೆ ಬಹುಮತ ಕೊಟ್ಟಿದ್ದಾರೆ, ನಮಗೆ ಸಂಪೂರ್ಣ ಬಹುಮತವಿದೆ ಎನ್ನತಕ್ಕ ಮಾತನ್ನು ಅವರು ಮಾತನಾಡುವಾಗ ಹೇಳಿದ್ದಾರೆ. ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಕರ್ನಾಟಕ ರಾಜ್ಯದ ಜನತೆ ಸ್ಪಷ್ಟವಾಗಿ ಭಾರತೀಯ ಜನತಾ ಪಕ್ಷಕ್ಕೆ ಸರ್ಕಾರ ರಚನೆ ಮಾಡುವಷ್ಟು ಬೆಂಬಲವನ್ನು ಕೊಟ್ಟಿಲ್ಲ. ನಿಮಗೆ 110 ಸ್ಥಾನಗಳು ಇವೆಯೇ ಹೊರತು ನಿಮಗೆ 113 ಸ್ಥಾನಗಳನ್ನೇನೂ ಕೊಟ್ಟಿಲ್ಲ. 110 ಸ್ಥಾನಗಳು ಇರತಕ್ಕಂಥದ್ದನ್ನು simple majority ಎಂದು ಹೇಳುವುದಕ್ಕೆ ಬರುವುದಿಲ್ಲ. 115 ಸ್ಥಾನಗಳು ನಿಮ್ಮ ಪಕ್ಷದವೇ ಆಗಿದ್ದರೆ ನೀವು ವಿಶ್ವಾಸ ಮತ ಪಡೆಯಬೇಕೆಂದು ರಾಜ್ಯಪಾಲರು ಹೇಳುತ್ತಿರಲಿಲ್ಲ. ನಿಮಗೆ 113 ಸ್ಥಾನಗಳು ಇಲ್ಲವೆನ್ನುವ ಕಾರಣಕ್ಕೋಸ್ಕರವೇ, ನಿಮಗೆ 3 ಸ್ಥಾನಗಳ ಕೊರತೆ ಇದೆಯೆನ್ನುವ ಕಾರಣಕ್ಕೋಸ್ಕರವೇ ನೀವು ವಿಶ್ವಾಸ ಮತ ಪಡೆಯಲೇಬೇಕೆನ್ನುವ ಸೂಚನೆಯನ್ನು ರಾಜ್ಯಪಾಲರು ಕೊಟ್ಟಿರತಕ್ಕಂಥದ್ದು. ನಿಮಗೆ ರಾಜ್ಯದ ಜನತೆ ಸಂಪೂರ್ಣ ಆಶೀರ್ವಾದ ಮಾಡಿದ್ದಾರೆನ್ನುವುದರಲ್ಲಿ ಸತ್ಯ ಇಲ್ಲ.

ಈಗಾಗಲೇ ಖರ್ಗೆಯವರು ಹೇಳಿದರು. ನಿಮಗೆ 2 ದೃಷ್ಟಿಕೋನಗಳಿಂದಲೂ ಇಲ್ಲ. ಸ್ಥಾನಗಳ ದೃಷ್ಟಿ ಕೋನದಿಂದಲೂ ನೋಡಿದರೂ ಇಲ್ಲ. 110 ಸ್ಥಾನಗಳಷ್ಟೇ ನಿಮಗೆ ಬಂದಿರು ವುದು. ನಿಮಗೆ ವಿರುದ್ಧವಾಗಿ ಆಗಿರುವಂಥವೇ ಹೆಚ್ಚು ಸ್ಥಾನಗಳು ಬಂದಿರತಕ್ಕಂಥದ್ದು. ಶೇಕಡವಾರು ಎಷ್ಟು ಮತ ಬಂದಿದೆ ಎಂದು ಲೆಕ್ಕ ಹಾಕು ದರೂ ಕೂಡ ನಿಮಗೆ ಕಾಂಗ್ರೆಸ್‌ಗಿಂತ ಕಡಿಮೆ ಬಂದಿದೆ. ಬೇರೆ ಪಕ್ಷ ಅಂದರೆ ಜೆಡಿಎಸ್ ಬಿಡಿ, ಇಂಡಿಪೆಂಡೆಂಟ್ಸ್ ಬಿಡಿ. ಅದನ್ನು ಬಿಟ್ಟು ಲೆಕ್ಕ ಹಾಕಿದರೂ ಕೂಡ ಕಾಂಗ್ರೆಸ್‌ಗಿಂತ ನಿಮಗೆ ಸುಮಾರು 1% ಮತಗಳು ಕಡಿಮೆ ಬಿದ್ದಿವೆ. ಕಾಂಗ್ರೆಸ್‌ಗೆ 80 ಸ್ಥಾನ ಸಿಕ್ಕಿರಬಹುದು. ನಿಮಗೆ 110 ಸ್ಥಾನ ಸಿಕ್ಕಿರಬಹುದು. ಜೆ.ಡಿ.ಎಸ್.ಗೆ 28 ಸ್ಥಾನಗಳು ಸಿಕ್ಕಿವೆ. 6 ಜನ ಗೆದ್ದು ಬಂದಿದ್ದಾರೆ. ನಿಮಗೆ ಬಹುಮತ ಎಲ್ಲಿ ಬಂದಿದೆ? ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರಳ ಬಹುಮತ ಬಂದ ಪಕ್ಷ ಸರ್ಕಾರ ಮಾಡಬೇಕೆನ್ನುವುದು ಸಂವಿಧಾನಾತ್ಮಕವಾಗಿ ಎಲ್ಲರೂ ಒಪ್ಪಿಕೊಂಡಿರುವ ವಿಚಾರ. ಎಲ್ಲರೂ ಹೇಳತಕ್ಕಂಥ ವಿಚಾರ. ಬಹುಮತ ಎಲ್ಲಿದೆ? ನಮಗೆ ಸಂಪೂರ್ಣ ಬಹುಮತ ಬಂದಿದೆ, ನಮಗೆ ಜನರು ಆಶೀರ್ವಾದ ಮಾಡಿದ್ದಾರೆನ್ನುವುದರಲ್ಲಿ ಹುರುಳಿಲ್ಲ. ಕಾಂಗ್ರೆಸ್ ಪಕ್ಷಕ್ಕೆ 90 ಲಕ್ಷ ಮತ ಬಂದಿದ್ದರೆ, ನಿಮ್ಮ ಪಕ್ಷಕ್ಕೆ 88 ಲಕ್ಷ ಮತಗಳು ಸಿಕ್ಕಿವೆ. ಕಾಂಗ್ರೆಸ್ ಪಕ್ಷಕ್ಕೆ ಶೇಕಡ ವಾರು ಸುಮಾರು 34.58% ಬಂದಿದ್ದರೆ ನಿಮಗೆ 33.8%ನಷ್ಟು ಓಟು ಬಂದಿದೆ. ನಿಮಗೆ ಎಲ್ಲಿ ಬಂದಿದೆ? ಈ ಕರ್ನಾಟಕದಲ್ಲಿ 4ಕೋಟಿ 1 ಲಕ್ಷ ಮತ ದಾರರಿ ದ್ದಾರೆ. ಅದರಲ್ಲಿ 2 ಕೋಟಿ 60 ಲಕ್ಷ ಮತದಾನವಾಗಿದೆ. ನಿಮಗೆ ಬಂದಿರು ವುದು ಸುಮಾರು 88 ಲಕ್ಷ ಮತ. "ನಮಗೆಲ್ಲಾ majority ಬಂದುಬಿಟ್ಟಿದೆ, ಜನರ ಆಶೀರ್ವಾದ ಬಂದುಬಿಟ್ಟಿದೆ, ಕರ್ನಾಟಕದ ಐದೂವರೆ ಕೋಟಿ ಜನರಲ್ಲಿ 4 ಕೋಟಿ ಮತದಾರರಲ್ಲಿ ನಮಗೆ ಬಹುಮತ ಬಂದಿದೆ" ಎಂದು ಹೇಗೆ ನೀವು ಮಾಡುತ್ತೀರಿ? ಇದು ಜನರ ಅತ್ಯಂತ ಸ್ಪಷ್ಟ ಆದೇಶ, ನಿಮಗೂ ಕೂಡ ಸ್ಪಷ್ಟವಾದ ಬಹುಮತ ಕೊಟ್ಟಿಲ್ಲ. ಶೇಕಡವಾರು ಮತದಾನ ಲೆಕ್ಕ ಹಾಕಿಕೊಂಡರೆ ನಮಗೇ ಹೆಚ್ಚು ಮತಗಳು ಬಂದಿವೆ. ಹಾಗಂತ ನಾವೇನೂ ಸರ್ಕಾರ ಮಾಡುತ್ತೇವೆಂದು ಹೇಳುತ್ತಿಲ್ಲ. ಎಣಿಕೆ ಆದ ತಕ್ಷಣವೇ ನಾವು ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತುಕೊಳ್ಳುವುದಕ್ಕೆ ತಯಾರಿದ್ದೇವೆಂದು ಕಾಂಗ್ರೆಸ್ ಪಕ್ಷದಿಂದ ಹೇಳಿದ್ದೇವೆ. ನಾವು ವಿರೋಧ ಪಕ್ಷದಲ್ಲಿ ಕುಳಿತುಕೊಳ್ಳುವುದಕ್ಕೆ ಜನರ ಆದೇಶವಾಗಿದೆ.

ಶ್ರೀ ಅಪ್ಪಚ್ಚು ರಂಜನ್ : ನೀವು ವಿರೋಧ ಪಕ್ಷದ ನಾಯಕರಾಗಿ ಕುಳಿತುಕೊಳ್ಳಬೇಕಾಗಿತ್ತು ಅಲ್ಲವೇ?

ಶ್ರೀ ಸಿದ್ದರಾಮಯ್ಯ : ನೀವು ನಿಮ್ಮದು ನೋಡಿಕೊಳ್ಳಿ. ನಮ್ಮ ಬಗ್ಗೆ ಹೇಳುವುದಕ್ಕೆ ಏಕೆ ಬರುತ್ತೀರಿ? ನಿಮ್ಮ ತಟ್ಟೆಯಲ್ಲಿ ಏನೇನು ಬಿದ್ದಿದೆ ಎಂದು ತಾವು ನೋಡಿಕೊಂಡರೆ ಸಾಕು. ಈಗ ಬೇರೆಯವರ ತಟ್ಟೆ ನೋಡುವುದಕ್ಕೆ ಹೋಗಬೇಡಿ. ನಿಮ್ಮ ನಿಮ್ಮ ತಟ್ಟೆಯಲ್ಲಿ ಏನೇನು ಬಿದ್ದಿದೆ ಎಂದು ನೋಡಿಕೊಳ್ಳಿ. ನಿಮಗೆ ಇನ್ನೂ ಇಲಾಖೆ ಕೊಟ್ಟಿಲ್ಲವೇ? ಹೀಗೆ ಮಧ್ಯೆ ಮಧ್ಯೆ ಎದ್ದು ಮಾತನಾಡಿದರೂ ನಿಮಗೆ ಒಳ್ಳೆಯ ಇಲಾಖೆ ಸಿಗುವುದಿಲ್ಲ. ಇವರಿಗೆ ಮಂತ್ರಿ ಮಾಡಿಲ್ಲವೇ? ಹಾಗಾದರೆ ನಿಮಗೆ ಮಂತ್ರಿ ಸ್ಥಾನ ಸಿಗುವುದಿಲ್ಲ ಬಿಡಿ. ಏಕೆ ಎದ್ದೇಳುತ್ತೀರಿ? ನಿಮಗೆ ಮಂತ್ರಿ ಸ್ಥಾನ ಕೊಡುವುದಿಲ್ಲ. ಕೊಡುವುದಿದ್ದರೆ ಈಗಾಗಲೇ ಕೊಡಬೇಕಾಗಿತ್ತು. 31 ಜನ ಮಂತ್ರಿಗಳು ಆಗುತ್ತಿದ್ದಾರೆ. ನಿಮಗೆ ಇನ್ನೆಲ್ಲಿ ಅವಕಾಶವಿದೆ. ಮಧ್ಯೆ ಮಧ್ಯೆ ಎದ್ದು ಮಾತನಾಡುವವರಿಗೆ ಯಾರಿಗೂ ಕೊಡುವುದಿಲ್ಲ. ಆಗೋಯ್ತು. ಕೋಟಾ ಭರ್ತಿ ಆಗಿಹೋಗಿದೆ. ಇನ್ನು ನಿಮಗೆಲ್ಲಿ ಸಿಗುತ್ತದೆ? ಸಾಕು, ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಅಪ್ಪಚ್ಚು ರಂಜನ್ : ಬೇಡ ಬಿಡಿ.

ಶ್ರೀ ಸಿದ್ದರಾಮಯ್ಯ : ಸಚಿವ ಸ್ಥಾನ ಕೊಟ್ಟರೆ ತೆಗೆದುಕೊಳ್ಳದೆ ಬೇಡ ಎಂದು ಹೇಳಿಬಿಡುತ್ತಿದ್ದಿರಾ? ಕೊಟ್ಟಿಲ್ಲ ಅದಕ್ಕೆ ಹೇಳುತ್ತಿದ್ದೀರಿ. ಮಾನ್ಯ ಅಧ್ಯಕ್ಷರೆ, ಇವರಿಗೆ ಯಾವ ದೃಷ್ಟಿ ಕೋನದಿಂದ ನೋಡಿದರೂ ಕೂಡ ಬಹುಮತ ಸಿಕ್ಕಿಲ್ಲ. ನಿಮಗೆ 6 ಜನ independents ಸಹಾಯ ಮಾಡದೇ ಹೋದರೆ ನಿಮಗೆ ಬಹುಮತ ಇದೆಯೇ? ಸರ್ಕಾರ ನಡೆಸುವುದಕ್ಕೆ ಆಗುತ್ತದೆಯೇ? ಅದರಲ್ಲೂ 4 ಜನ ಕಾಂಗ್ರೆಸ್ಸಿಗರು ನಮ್ಮ ಪಕ್ಷದಿಂದ ಅವರಿಗೆ ಟಿಕೆಟ್ ಸಿಗದೆ ಅವರು rebel ಆಗಿ ನಿಂತು independent ಆಗಿ ಗೆದ್ದಿದ್ದಾರೆ. ನಿಮ್ಮ ಪಕ್ಷದವರು ಯಾರೋ ಒಬ್ಬರು ಎಂದು ತೋರುತ್ತದೆ. ಅದು ಕನಕಗಿರಿಯವರು ಒಬ್ಬರು. ಅವರಿಗೆ ಬಿಜೆಪಿ ಪಕ್ಷದಿಂದ ಟಿಕೆಟ್ ಸಿಗಲಿಲ್ಲವೆಂದು independent ಆಗಿ ನಿಂತು ಗೆದ್ದರು ಎಂದು ಹೇಳುತ್ತಾರೆ. ಅದನ್ನು ಸೇರಿಸಿಕೊಂಡರೂ ಸಹ ನಿಮ್ಮ ಪಕ್ಷದ ಸ್ಥಾನ 111 ಮಾತ್ರ. Assuming for the argument sake, ಅವರೂ ನಿಮ್ಮವರೆ ಅಥವಾ ನಿಮ್ಮ ತತ್ವ ಸಿದ್ಧಾಂತಗಳಿಗೆ ಓಟು ಕೊಟ್ಟಿದ್ದಾರೆ, ನಿಮ್ಮ ವಿಚಾರಕ್ಕೆ ಓಟು ಕೊಟ್ಟಿದ್ದಾರೆಂದು ಹೇಳಿದರೂ ಕೂಡ ನಿಮ್ಮ ಒಟ್ಟು ಸ್ಥಾನ 111 ಮಾತ್ರ. 111 ಸ್ಥಾನ ಅಂದರೆ ನೀವು ಸರ್ಕಾರ ಮಾಡುವುದಕ್ಕೆ ಅದು ಬಹುಮತವಲ್ಲ. ಇವತ್ತು ಇಷ್ಟು ದಿನಗಳಾದರೂ ಕೂಡ ನಿಮಗೆ ಗೊಂದಲವಿಲ್ಲದೇ ಹೋದರೆ ನೀವು ಬಹಳ ಸ್ಪಷ್ಟವಾಗಿ ನಿಮಗೆ ಎಲ್ಲಾ cohensiveness ಆಗಿ ಇದೆ ನಿಮ್ಮ ಪಾರ್ಟಿಯಲ್ಲಿ. ಏಕೆ ಖಾತೆಗಳನ್ನು

ಹಂಚಿಲ್ಲ? ಭಯದಿಂದ ಅಲ್ಲವೇ? ನಾಳೆ ಮಾಡುವುದಿರಲಿ, ಇವತ್ತು ಗೊಬ್ಬರ, ಬಿತ್ತನೆ ಬೀಜ ಇಲ್ಲವೆಂದು ಜನ ಜಗಳವಾಡುತ್ತಿದ್ದಾರೆ. ಲಾಠಿ ಚಾರ್ಜ್ ಆಗಿದೆ. ಒಬ್ಬ Minister ಸಹ ಹೋಗಿಲ್ಲ. ಎಲ್ಲರೂ ತೀರ್ಥಯಾತ್ರೆ ಮಾಡುತ್ತಿದ್ದೀರಿ. ಒಬ್ಬ Agriculture Minister ಆಗಿದ್ದರೆ ಅದನ್ನು ನೋಡಿಕೊಳ್ಳುವುದಕ್ಕೆ ಆಗುತ್ತಿರಲಿಲ್ಲವೇ? ಅವತ್ತೇ ಪ್ರಮಾಣ ವಚನ ತೆಗೆದುಕೊಂಡ ತಕ್ಷಣವೇ ಒಬ್ಬರಿಗೆ Agriculture ಇಲಾಖೆ ವಹಿಸಿದ್ದರೆ ಅವರು ಆ ಇಲಾಖೆಯನ್ನು ನೋಡಿ ಕೊಳ್ಳುತ್ತಿರಲಿಲ್ಲವೇ? ಅವರು ಮಾತನಾಡುವಾಗ ನಾವು ಎಷ್ಟು ಗಂಭೀರವಾಗಿ ಕೇಳಿದ್ದೇವೆ. ಯಡಿಯೂರಪ್ಪನವರು ಮಾತನಾಡುವಾಗ ಅತ್ಯಂತ ಗಂಭೀರವಾಗಿ ಕೇಳಿದ್ದೇವೆ. ಇನ್ನು ಮುಂದಾದರೂ ಕೂಡ ಈ ಕಡೆ ನಾವು ಮಾತನಾಡುವಾಗ ಸ್ವಲ್ಪ ತಾಳ್ಮೆಯಿಂದ ಕೇಳತಕ್ಕಂಥ ಮನಸ್ಥಿತಿಯನ್ನು ದಯವಿಟ್ಟು ಬೆಳೆಸಿಕೊಳ್ಳಿ, ಮಧ್ಯೆ ಮಧ್ಯೆ interfere ಆಗುವುದು, ಮುಖ್ಯಮಂತ್ರಿಗಳನ್ನು ಖುಷಿಪಡಿಸುವುದಕ್ಕೋಸ್ಕರ ಮಾತನಾಡುವುದು, ಅವರು ನಿಮಗೆ ಭೇಷ್ ಎನ್ನಲಿ ಎಂದು ಮಾತನಾಡು ವುದು, ಏನಾದರೂ ಕೆಲಸ ಮಾಡಿಕೊಡುತ್ತಾರೆಂದು ಮಾತನಾಡುವುದು, ದಯಮಾಡಿ, ಆ ಸಂಪ್ರದಾಯ ಇದೆಯಲ್ಲಾ, ಆ culture ಇದೆಯಲ್ಲಾ ಅದು ಬೇಡ. ಏನಾದರೂ ಉತ್ತರ ಕೊಡುವುದಿದ್ದರೆ ಅಥವಾ ನೀವು ಮಾತನಾಡು ವುದಿದ್ದರೆ ನಿಮಗೆ ಅವಕಾಶ ಸಿಕ್ಕಿದಾಗ ಏನು ಮಾತನಾಡುವುದಿದೆ ಅದನ್ನು ಮಾತನಾಡಿ. ಅದನ್ನು ಬಿಟ್ಟು ಇನ್ನೊಬ್ಬರು ಮಾತನಾಡುವಾಗ ಮಧ್ಯೆ ಬಾಯಿ ಹಾಕುವುದು ಸರಿಯಲ್ಲ. ಮಾತನಾಡುವುದಿದ್ದರೆ ಅಧ್ಯಕ್ಷರ ಅನುಮತಿ ತೆಗೆದುಕೊಂಡು ಮಾತನಾಡಿ. ನಮ್ಮದೇನೂ ತಕರಾರು ಇಲ್ಲ. ಹಿಂದೆ ಕೆಲವರು ಇದ್ದರು. ಅವರು ಮಧ್ಯೆ ಎದ್ದು ಮಾತನಾಡುತ್ತಿದ್ದರು. ಅವರು ಮನೆಗೆ ಹೊರಟು ಹೋದರು. ಅಲ್ಲಿ ಕುಳಿತಿದ್ದರು. ಅವರು ಮಧ್ಯೆ ಎದ್ದುಬಿಡುತ್ತಿದ್ದರು. ಪಾಪ, ಅವರು ಈಗ ಪತ್ತೆ ಇಲ್ಲ. ಮನೆಗೆ ಹೊರಟು ಹೋದರು. ಪಾಪ, ಆ ತರಹ ನಿಮಗೆ ಆಗುವುದು ಬೇಡ. ಏಕೆಂದರೆ, ಈ ರಾಜ್ಯದ ಜನರು ನಾವೇನು ಮಾಡು ತ್ತೇವೆಂದು ನೋಡುತ್ತಿರುತ್ತಾರೆ. ಅದಕ್ಕೋಸ್ಕರ ನೀವು ದಯಮಾಡಿ ನಿಮ್ಮ ವಿಚಾರ ಗಳಿದ್ದರೆ, ಮಾತುಗಳಿದ್ದರೆ ಆಮೇಲೆ ಹೇಳತಕ್ಕಂಥದ್ದನ್ನು ಕಲಿತುಕೊಳ್ಳಿ. ಆದ್ದರಿಂದ, ನಮಗೆ ಬಹುಮತ ಇದೆ ಎಂದು ಮಾನ್ಯ ಯಡಿಯೂರಪ್ಪನವರೇನು ಬಹಳ ದೊಡ್ಡದಾಗಿ claim ಮಾಡುತ್ತಿದ್ದಾರೆ, ನಿಮಗೆ ಆ ರೀತಿ ಇದ್ದಿದ್ದರೆ, ನಿಮಗೆ ಎಲ್ಲ cohesiveness ಇದ್ದಿದ್ದರೆ, ಗೊಂದಲವಿಲ್ಲದೇ ಹೋಗಿದ್ದರೆ ನಿಮಗೆ ಭಯ ಇಲ್ಲದೇ ಹೋಗಿದ್ದರೆ, ಹೆದರಿಕೆ ಇಲ್ಲದೇ ಹೋಗಿದ್ದರೆ ಇಲಾಖೆಗಳನ್ನು ಈಗಾಗಲೇ ಹಂಚುತ್ತಿದ್ದಿರಿ. ಅದಕ್ಕೆ ಅನಾಹುತವೇನಾಗುತ್ತದೆಂದು ನೋಡಿ.

ಈಗಲೇ ನಾನು ಬಹಳ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ಇವತ್ತು ಒಬ್ಬ Agriculture Minister ಇದ್ದಿದ್ದರೆ ಇದನ್ನು ನಿಭಾಯಿಸುವ ಕೆಲಸವಾಗುತ್ತಿತ್ತು. ಅದು ಇವತ್ತು ಆಗಲಿಲ್ಲ. ಗೋಲಿಬಾರ್‌ಗಳು ಆಗುತ್ತಿವೆ. ಇನ್ನೊಬ್ಬರ ಮೇಲೆ, ಕೇಂದ್ರ ಸರ್ಕಾರದ ಮೇಲೆ, ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದೇವೆಂದು ಕೈಕಟ್ಟಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಇದು ಬಹಳ ಮುಖ್ಯ, ಅದಕ್ಕಾಗಿ ಹೇಳುತ್ತಿದ್ದೇನೆ. ನಿಮಗೆ ಇನ್ನೂ ಭಯವಿರುವುದರಿಂದ, ನಿಮಗೆ ಅನುಮಾನಗಳಿರುವುದರಿಂದ ಏನಾಗುತ್ತದೋ? Vote of confidence ತೆಗೆದುಕೊಳ್ಳುವಾಗ ಏನಾಗುತ್ತದೋ ಎಂಬ ಭಯದಿಂದ ಇಲಾಖೆಗಳನ್ನು ಇವತ್ತಿಗೂ ಹಂಚಿಲ್ಲ. ಇದು ಬಹಳ ಸ್ಪಷ್ಟ. ಇದು ಈಗಲೂ ಏನಾಗುತ್ತದೋ ಎಂದು ನನಗೆ ಗೊತ್ತಿಲ್ಲ. ಇಲಾಖೆ ಹಂಚಿದ ಮೇಲೆ ಏನಾಗುತ್ತದೋ ಗೊತ್ತಿಲ್ಲ. ಹೋದ ಸಾರಿ ಯಡಿಯೂರಪ್ಪನವರು 7 ದಿನ ಮುಖ್ಯಮಂತ್ರಿಗಳಾಗಿದ್ದರು. ಮತ್ತೆ ಹಾಗಾಗ ಬೇಕೆಂದು ಹೇಳುವುದಿಲ್ಲ. ಅವರು 5 ವರ್ಷ ಇರಲಿ ಎಂದು ಹೇಳುತ್ತೇನೆ. ನೀವೆಲ್ಲ ಒಟ್ಟಿಗೆ ಇದ್ದು ಜನರಿಗೆ ಒಳ್ಳೆಯ ಕೆಲಸ ಮಾಡಿದರೆ 5 ವರ್ಷ ಇರಿ. ನಮ್ಮದೇನೂ ತಕರಾರಿಲ್ಲ. ನಮ್ಮ ಕಾಂಗ್ರೆಸ್ ಪಕ್ಷದ ವತಿಯಿಂದಂತೂ ನಾವು ಯಾವ ಕಾರಣಕ್ಕೂ ನಿಮ್ಮ ಸರ್ಕಾರವನ್ನು ಅಭದ್ರಗೊಳಿಸುವ ಕೆಲಸ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ನಿಮ್ಮಲ್ಲಿ ಅಸ್ಥಿರತೆ ಉಂಟುಮಾಡತಕ್ಕಂಥ ಶಕ್ತಿಗಳೇನಿವೆ, ಅಂಥ ಸನ್ನಿವೇಶಗಳು ಏನು ನಿರ್ಮಾಣವಾಗುತ್ತವೆ ಇದರ ಬಗ್ಗೆ ಎಚ್ಚರಿಕೆಯಿಂದ ಇದ್ದರೆ ಸಾಕು ಎಂದು ನಿಮಗೆ ನಾನು ಸೂಕ್ಷ್ಮವಾಗಿ ತಿಳಿಸ ತಕ್ಕಂಥ ವಿಚಾರವಿದು. ಏನಾಗುತ್ತದೆಂದು ಹೇಳುವುದಕ್ಕೆ ಬರುವುದಿಲ್ಲ. ಈಗ ಒಬ್ಬರು ಸ್ಪೀಕರ್ ಆಗಿಬಿಟ್ಟರು. ಇನ್ನು Deputy Speaker ನಮಗೇ ಬೇಕೆಂದು ಸದಾನಂದಗೌಡರು ಹೇಳುತ್ತಿದ್ದಾರೆ. ನಾವು ಹೇಳಲಿಲ್ಲ. ನಮಗೇ ಬೇಕೆಂದು ಹೇಳಿದರೆ ನಿಮ್ಮ ನಂಬರ್ ಆಗ ಎಷ್ಟಕ್ಕೆ ಬರುತ್ತದೆ? ಆಗ 114 ಬರುತ್ತದೆ. ಆದರೆ ಅದರಲ್ಲಿ ಇಬ್ಬರು ಹೊರಕ್ಕೆ ಹೊರಟು ಹೋದರೆ ನಿಮ್ಮ ಕತೆ ಏನು? ಅವರನ್ನು ಹುಡುಕಿಕೊಂಡು ಬರುವ ತನಕ ನಿಮ್ಮ ಕಷ್ಟ ಎಷ್ಟಾಗುತ್ತದೆಂದು ಗೊತ್ತಿದೆಯೇ? ಅವರೇನಾದರೂ ಆ ಕಡೆಗೆ ಊಟಕ್ಕೆ ಮತ್ಯಾವುದಕ್ಕಾದರೂ ಹೋದರೆ ನಿಮಗೆ ಬಹಳ ಕಷ್ಟವಾಗುತ್ತದೆ. Bill ಬಂದಾಗ ಕತೆ ಗೊತ್ತಾಗುತ್ತದೆ. ನಾವು ಹೋದರೆ ನಮಗೇನೂ ಆಗುವುದಿಲ್ಲ. ನಾವು ಹೊಟ್ಟೆ ತುಂಬಿಸಿಕೊಂಡು ಬರುತ್ತೇವೆ. ನಿಮ್ಮ ಕತೆ ಹೇಳಿ.

ಶ್ರೀ ಬಸವರಾಜ ಬೊಮ್ಮಾಯಿ : ನಮ್ಮ ಕಡೆಯಿಂದ ಇಬ್ಬರು ಹೋದಾಗ

ನಿಮ್ಮ ಕಡೆಯಿಂದ 4 ಜನರು ಹೋಗಿರುತ್ತಾರೆ. ನಿದ್ದೆ ಮಾಡುವುದಕ್ಕೆ ಹೋಗಬೇಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಮ್ಮ ಹತ್ತಿರ 10 ಜನ ಊಟಕ್ಕೆ ಬಂದಿರುತ್ತಾರೆ, ಕರೆದುಕೊಂಡು ಹೋದರೆ ನಮಗೇನೂ ಆಗುವುದಿಲ್ಲ. ನಿಮ್ಮಲ್ಲಿ ಇಬ್ಬರು ಹೊರಟುಹೋದರೆ ಕಷ್ಟ.

ಶ್ರೀ ಬಸವರಾಜ ಬೊಮ್ಮಾಯಿ : ಅಲ್ಲಿ ಇಬ್ಬರು ಹೋದರೂ ಅಷ್ಟೆ, ಇಲ್ಲಿ ಇಬ್ಬರು ಹೋದರೂ ಅಷ್ಟೆ. ಲೆಕ್ಕಾಚಾರ ನಮಗೂ ಗೊತ್ತಿದೆ.

ಶ್ರೀ ಸಿದ್ದರಾಮಯ್ಯ : ಕುಳಿತುಕೊಳ್ಳಿ. 5 ಜನರ ಮೇಲೆ ನೀವು ಅವಲಂಬನೆ ಆಗಿರುವುದು. ಹಾಗಾದರೆ ಆ 5 ಜನರಿಗೆ ಮಂತ್ರಿ ಸ್ಥಾನ ಏಕೆ ಕೊಟ್ಟಿದ್ದೀರಿ? ಯಾವ ಕಾಲದಲ್ಲಾದರೂ ಐದು ಜನ independets ಮಂತ್ರಿ ಸ್ಥಾನ ಕೊಟ್ಟಿದ್ದಾರೆಯೇ?

ಶ್ರೀ ಬಸವರಾಜ ಬೊಮ್ಮಾಯಿ : Independent ಅಭ್ಯರ್ಥಿ ಮುಖ್ಯಮಂತ್ರಿ ಯಾಗಿರುವ ಇತಿಹಾಸ ನಮ್ಮ ದೇಶದಲ್ಲಿದೆ.

ಶ್ರೀ ಸಿದ್ದರಾಮಯ್ಯ : ತಾವು ಪದೇ ಪದೇ ಎದ್ದು ಮಾತನಾಡಬೇಡಿ. ಕುಳಿತುಕೊಳ್ಳಿ. ನೀವು ಸೀನಿಯರ್ ಮೆಂಬರ್ ಇದ್ದೀರಿ. ಅಲ್ಲಿ ಹತ್ತು ವರ್ಷ ಸದಸ್ಯರಾಗಿ ಕೆಲಸ ಮಾಡಿದ್ದೀರಿ. First tine Minister ಆಗಿರುವವರು, ಆದಷ್ಟು ಕಡಿಮೆ ಮಾತನಾಡುವುದು ಒಳ್ಳೆಯದು.

ಶ್ರೀ ಹೆಚ್.ಸಿ.ಮಹದೇವಪ್ಪ : ಇಲ್ಲಿ ಪದೇ ಪದೇ ಎದ್ದು ಮಾತನಾಡುವವರಿದ್ದರು. ಅವರು ಹೊರಟು ಹೋಗಿರುವುದರಿಂದ ಬಸವರಾಜ ಬೊಮ್ಮಾಯಿ ಯವರು ಆ charge ತೆಗೆದುಕೊಂಡ ಹಾಗೆ ಕಾಣುತ್ತದೆ. ದಯಮಾಡಿ, ಆ charge ತೆಗೆದುಕೊಳ್ಳಬಾರದು.

ಶ್ರೀ ಸಿದ್ದರಾಮಯ್ಯ : ಬಸವರಾಜ್‌ರವರೇ ನಾನೇನು ಹೇಳುವುದೆಂದರೆ, ನಮ್ಮಲ್ಲಿಂದ ಹತ್ತು ಜನ ಕರೆದುಕೊಂಡು ಹೋದರು ಎಂದು ಇಟ್ಟುಕೊಳ್ಳೋಣ. ಇಪ್ಪತ್ತು ಜನರನ್ನೇ ಕರೆದುಕೊಂಡು ಹೋದರು ಎಂದು ಇಟ್ಟುಕೊಳ್ಳೋಣ. ನಮಗೆ ಏನೂ ಆಗುವುದಿಲ್ಲ. ಮೂರು ಜನರು ಹೋದರೆ ನಿಮ್ಮ ಕತೆ ಏನಾಗುತ್ತದೆಂದು ನಿಮಗೆ ಗೊತ್ತೆ? ಆದ್ದರಿಂದ, ನಾನು ಏಕೆ ಹೇಳುತ್ತಿದ್ದೇನೆಂದರೆ, ನಿಮ್ಮ ತಲೆಯ

ಮೇಲೆ ಕತ್ತಿ ತೂಗಾಡುತ್ತಲೇ ಇದೆ. ಯಾವಾಗ ಏನಾಗುತ್ತದೋ ಎಂದು ಹೇಳಲು ಬರುವುದಿಲ್ಲ. ಖಾತೆಯನ್ನು ಹಂಚಿದ ಮೇಲೆ ಏನಾಗುತ್ತದೋ ಎಂದು ಹೇಳಲು ಬರುವುದಿಲ್ಲ. ಯಡಿಯೂರಪ್ಪನವರು ಇಲ್ಲಿ ಇದ್ದಾಗ Vote of confidence ತಂದು ನಾವು ಮಾತನಾಡು ಮೊದಲೇ ಹೊರಟು ಹೋದರು. ಅದೇ ಸಂದರ್ಭದಲ್ಲಿ ಜೆ.ಡಿ.(ಎಸ್)ನವರು ಇವರಿಗೆ ಓಟ್ ಕೊಡಬಾರದು ಎಂದು ವಿಪ್ ಇಶ್ಯೂ ಮಾಡಿಬಿಟ್ಟರು. ಆ ರೀತಿ ವಿಪ್ ಅನ್ನು ಕೊಟ್ಟ ತಕ್ಷಣವೇ ಯಡಿಯೂರಪ್ಪ ನವರು ಇಲ್ಲಿಂದ ಖಾಲಿ ಮಾಡಿಬಿಟ್ಟರು. ಅಂದರೆ, ಈ ಸಲ ಆ ರೀತಿ ಆಗ ಬಾರದು ಎಂದು ನನ್ನ ಆಸೆ. ಆ ರೀತಿ ಆಗುವುದಿಲ್ಲವೆಂದು ನಾನು ಅಂದು ಕೊಂಡಿದ್ದೇನೆ. ಆದರೂ ನಿಮಗೆ ಈ ಸರ್ಕಾರ ಏನಾಗುತ್ತದೊ? ಉಳೀ ಯುತ್ತದೊ? ಇಲ್ಲವೊ? ಎಂಬ ಭಯ ಇದೆ. ಇಂಥ ಭಯದಲ್ಲಿ ತಾವು ಇದ್ದುಕೊಂಡು ನಮಗೆ ಈ ರಾಜ್ಯದ ಜನರು ಅಭೂತಪೂರ್ವವಾದ ಜನಾದೇಶ ಕೊಟ್ಟುಬಿಟ್ಟಿದ್ದಾರೆ, ಆಶೀರ್ವಾದ ಮಾಡಿಬಿಟ್ಟಿದ್ದಾರೆ, ನಮಗೆ ಐದು ವರ್ಷ ನಿರಾತಂಕವಾಗಿ ಸರ್ಕಾರ ಮಾಡಲು ಹೇಳಿಬಿಟ್ಟಿದ್ದಾರೆ ಎಂಬ ಮಾತನ್ನು ನೀವೇನಾದರೂ ಆತ್ಮಪೂರ್ವಕವಾಗಿ ಹೇಳುವಂಥ ಮಾತುಗಳೇ? ಇದರಲ್ಲಿ ಏನಾದರೂ ಹುರುಳಿದೆಯೇ? ನಿಮಗೆ ಸ್ಪಷ್ಟವಾದ ಜನಾದೇಶ ಸಿಕ್ಕಿಲ್ಲ. ಕಾಂಗ್ರೆಸ್ ಪಕ್ಷ 80 ಸ್ಥಾನಗಳಲ್ಲಿ ಗೆದ್ದು 116 ಸ್ಥಾನಗಳಲ್ಲಿ ಎರಡನೇ ಸ್ಥಾನದಲ್ಲಿದೆ. ಸುಮಾರು 12 ಕ್ಷೇತ್ರಗಳಲ್ಲಿ ಬಹಳ ಕನಿಷ್ಠ ಅಂದರೆ ಸರಿಸುಮಾರು 20 ರಿಂದ 900 ಮತಗಳ ಅಂತರದಿಂದ ಸೋತಿದ್ದೇವೆ. ಹಾಗೆಯೇ ಮತ ಆಗಿರತಕ್ಕದ್ದು, ಶೇಕಡವಾರು ಮತದಾನ, ಜನ ಆಶೀರ್ವಾದ ಮಾಡಿರತಕ್ಕದ್ದು, ಇವೆಲ್ಲವನ್ನು ನೋಡಿದರೆ ಕಾಂಗ್ರೆಸ್ ಪಕ್ಷಕ್ಕಿಂತ ನಿಮಗೆ ಕಡಿಮೆಯೇ ಬಂದಿದೆ. ನಿಮಗೆ ಜನರ ಆದೇಶ ಇಲ್ಲ. ನೀವು ಏನೇ ಇದ್ದರೂ ಆ ಆರು ಜನರನ್ನು ಸರ್ಕಸ್ ಮಾಡಿಯೇ ಉಳಿಸಿಕೊಳ್ಳಬೇಕು. ನಿಮ್ಮಲ್ಲಿ ಏನೇನಾಗುತ್ತದೋ ಗೊತ್ತಿಲ್ಲ. ಬಹಳ ಜನರಿಗೆ ಮಂತ್ರಿ ಪದವಿ ಸಿಗಲಿಲ್ಲವೆಂದು ಈಗಾಗಲೇ ಬೆಳೆಯು ಸಿರಿ ಮೊಳಕೆಯಲ್ಲಿ ಎಂಬಂತೆ ಗೊತ್ತಾಗಿಬಿಟ್ಟಿದೆ. ಪಾಪ ನಮ್ಮ ಶಂಕರಲಿಂಗೇಗೌಡರಿಗೆ ಮಂತ್ರಿ ಸ್ಥಾನ ಸಿಗಬೇಕಾಗಿತ್ತು. ನಾನು ಈಗಲೂ ಹೇಳುತ್ತಿದ್ದೇನೆ. ದಯಮಾಡಿ ನೀವು ಧರಣಿ ಮಾಡುವುದನ್ನು ಬಿಡಬೇಡಿ. ನಿಮಗೆ ನನ್ನ ಸಂಪೂರ್ಣ ಬೆಂಬಲ ಇದೆ. ನಮ್ಮ ಊರಿನವರಿಗೆ ಮಂತ್ರಿ ಸ್ಥಾನ ಕೊಡಲಿಲ್ಲವೆಂದು ನಮಗೆ ನೋವಿಲ್ಲವೆ?

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ : ನಾನು ಅನ್ನ ಇಟ್ಟ ಮನೆಗೆ ಕನ್ನ ಹಾಕುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಶಂಕರಲಿಂಗೇಗೌಡರೆ ನಾನು ನಿಮ್ಮ ಪರವಾಗಿಯೇ ಮಾತನಾಡುತ್ತಿದ್ದೇನೆ ಕುಳಿತುಕೊಳ್ಳಿ. ನಾನೇನೋ ವಕಾಲತ್ತು ವಹಿಸಿ ನಿಮಗೆ ಮಂತ್ರಿ ಸ್ಥಾನ ಕೊಡಿಸೋಣ ಎಂದರೆ ನೀವು ಬೇಡ ಎಂದರೆ ಹೇಗೆ? ಮಂತ್ರಿ ಸ್ಥಾನ ಬೇಡವೇ ನಿಮಗೆ? ಹೋಗಲಿ ನಿಮಗೆ ಮಂತ್ರಿ ಸ್ಥಾನ ಸಿಗಲಿ, ನಮ್ಮದು ದೊಡ್ಡ ಜಿಲ್ಲೆ, ನಮ್ಮ ಜಿಲ್ಲೆಗೆ ಮಂತ್ರಿ ಸ್ಥಾನ ಸಿಕ್ಕಿಲ್ಲವೆಂದು ನಾನು ವಕಾಲತ್ತು ಹಾಕಿದರೆ ನೀವು ಯಡಿಯೂರಪ್ಪನವರ ಪರವಾಗಿ ನಿಂತರೆ ಹೇಗೆ? ಸದ್ಯಕ್ಕೆ ನೀವು ನಮ್ಮ ಪರವಾಗಿ ನಿಂತುಕೊಳ್ಳಿ. ನಾನು ಏನು ಹೇಳುತ್ತೇನೆಂದರೆ, ಆನೇಕಲ್‌ನಲ್ಲಿ ಬಸ್‌ಗಳಿಗೆ ಬೆಂಕಿ, ಧಾರವಾಡದಲ್ಲಿ ಮೈಸೂರಿನಲ್ಲಿ ಗಲಾಟೆ ಯಾಗಿದೆ. ಇನ್ನು ಪಾಪ ಅನೇಕ ಜನ ತಮಗೆ ಸಿಕ್ಕಿಲ್ಲವೆಂದು ಬೂದಿ ಮುಚ್ಚಿದ ಕೆಂಡದಂತಿದ್ದಾರೆ. ಶ್ರೀನಿವಾಸ್‌ರವರೇ ನಿಮಗೆ ಸಿಕ್ಕಲ್ಲ ಅಲ್ಲವೆ? ನೀವು ಸೀನಿಯರ್ ಲೀಡರ್ ನಿಮಗೆ ಸಿಕ್ಕಿರಬೇಕಾಗಿತ್ತು ನಿಮಗೆ ಇನ್ನು ಸಿಕ್ಕಿಲ್ಲ. ನನಗೆ ನಿಮ್ಮ ಕಷ್ಟ ಸಂಕಟ ಎಲ್ಲಾ ಗೊತ್ತಿದೆ. ನಮಗೆ ಬಹಳ ಸ್ನೇಹಿತರುಗಳು ಇದ್ದಾರೆ.

ಶ್ರೀ ಎಂ.ಶ್ರೀನಿವಾಸ್ : ನಾನು 25 ವರ್ಷಗಳಿಂದ ಸದನಕ್ಕೆ ಬಂದು ಹೋಗುತ್ತಿದ್ದೇನೆ ನಾನು ಯಾವತ್ತು ಆ ರೀತಿ ಕೇಳಿಲ್ಲ.

ಶ್ರೀ ಸಿದ್ದರಾಮಯ್ಯ : 25 ವರ್ಷಗಳಿಂದ ಅವರಿಗೂ ತೊಂದರೆಯಾಗಿರುವುದು ನಮಗೆ ಗೊತ್ತಿದೆ. ನಮಗೇನು ಬೇಡ ಬಿಡಿ ನಿಮಗೆ ಬೇಡ ಎಂದರೆ ಬೇಡ.

ಶ್ರೀ ಎಂ.ಶ್ರೀನಿವಾಸ್ : ನನಗೆ ಯಾರಿಂದ ತೊಂದರೆಯಾಗಿದೆ ಎಂಬುದು ನಿಮಗೆ ಗೊತ್ತಿದೆ.

ಶ್ರೀ ಸಿದ್ದರಾಮಯ್ಯ : ಆಯಿತು ಬಿಡಿ ಅದು ನನಗೆ ಗೊತ್ತಿದೆ ಜೊತೆಗೆ ಈ ಕಷ್ಟವೂ ಗೊತ್ತಿದೆ. ವಾಕ್‌ಔಟ್ ಮಾಡುತ್ತಿದ್ದೀರಾ?

ಶ್ರೀ ಎ.ನಾರಾಯಣಸ್ವಾಮಿ : ನಮ್ಮ ಪರವಾಗಿ ವಕಾಲತ್ತು ಬೇಡ ಸ್ವಾಮಿ.

ಶ್ರೀ ಸಿದ್ದರಾಮಯ್ಯ : ಏಕೆ ಮಾನ್ಯ ಶಂಕರಲಿಂಗೇಗೌಡರವರು ವಾಕ್‌ಔಟ್ ಮಾಡುತ್ತಿದ್ದೀರಾ? ಮಾನ್ಯ ಯಡಿಯೂರಪ್ಪನವರೇ ತಾವು ಹೇಗಾದರೂ ಮಾಡಿ ಅವರನ್ನು ಮಂತ್ರಿಯನ್ನಾಗಿ ಮಾಡಿಬಿಡಿ. ಆದರೆ ನಿಮ್ಮ ತರಾತುರಿ ನೋಡಿದರೆ, ನಿಮಗೆ ಬೆಂಬಲ ಇದ್ದಿದ್ದರೆ ರಾತ್ರೋ ರಾತ್ರಿ ಹೋಗಿ ಇಂಡಿಪೆಂಡೆಂಟ್‌ರವರನ್ನು ಹಿಡಿದುಕೊಂಡು ಬರುವ ಪರಿಸ್ಥಿತಿ ಬರುತ್ತಿತ್ತಾ? ಹೆಲಿಕಾಪ್ಟರ್ ಕಳುಹಿಸಿ ರಾತ್ರೋ ರಾತ್ರಿ ಹೋಗಿ ಅವರನ್ನು ಹಿಡಿದುಕೊಂಡು ಬಂದು ಅವರಿಗೆ ಆಸೆ ಆಕಾಂಕ್ಷೆಗಳನ್ನು ತೋರಿಸಿ ಆಮಿಷಗಳನ್ನು ಒಡ್ಡಿ ಎಲ್ಲರಿಗೂ ಮಂತ್ರಿಗಳನ್ನಾಗಿ

ಮಾಡುತ್ತೇವೆ ಎಂದು ಹೇಳುವ ಪರಿಸ್ಥಿತಿ ನಿಮಗೆ ಬರುತ್ತಿತ್ತಾ? ಹೀಗಾಗಿ ತಾವು ಹೇಳುವಾಗ ಜನ ನಮಗೆ ಈ ಸಾರಿಯೂ ಬಹುಮತ ಕೊಟ್ಟಿಲ್ಲ. To tell you the truth, this is also a hung assembly. ನೀವು ಹೆಚ್ಚು ಜನರು ಇರಬಹುದು. You are a single largest partyನೇ ಹೊರತು ನಿಮಗೆ ಬಹುಮತ ಕೊಟ್ಟಿಲ್ಲ. This is also a hung assembly, ಇದೂ ಕೂಡ hung assembly. 110 ಜನಕ್ಕೆ ಬಹುಮತ ಆಗುವುದಿಲ್ಲ. 113 ಸ್ಥಾನ ಯಾವ ಪಕ್ಷಕ್ಕಾದರೂ ಬಹುಮತ ಕೊಟ್ಟರೇನೆ, ಅದು hung assembly hung assembly ಅಲ್ಲ ಎಂದು ಹೇಳಲು ಸಾಧ್ಯವಾಗುತ್ತದೆ. ಇದೂ ಕೂಡ hung assembly. ಇವರಿಗೆ ಸ್ಪಷ್ಟವಾದ ಬಹುಮತ ಕೊಟ್ಟಿಲ್ಲ. ಹೀಗಾಗಿ ಯಡಿಯೂರಪ್ಪನವರೇ, ನೀವು ಬಹಳ ನೆಮ್ಮದಿಯಿಂದ, ನಿರಾಳದಿಂದ ಬಹಳ ಒಳ್ಳೊಳ್ಳೆಯ ಮಾತುಗಳನ್ನು ಹೇಳಿದ್ದೀರಿ, ಅವೆಲ್ಲಾ ಸ್ವಾಗತ. ರೈತರ ಮಗನಾಗಿ, ಕಷ್ಟಪಟ್ಟು, ಹೋರಾಟ ಮಾಡಿಕೊಂಡು ಬಂದಿದ್ದೇನೆ, ಎಂದು ಹೇಳಿದ್ದೀರಿ. ಅದಕ್ಕೆಲ್ಲಾ ನಮ್ಮ ಸ್ವಾಗತ ಇದೆ. ಆದರೆ, ನೀವು ಬಂದ ತಕ್ಷಣ ಒಳ್ಳೆಯ ಕೆಲಸ ಗಳನ್ನು ಪ್ರಾರಂಭ ಮಾಡಬಾರದೇ? ಇವತ್ತೇನು ರಾಜ್ಯಪಾಲರ ಭಾಷಣವನ್ನು ಓದಿದರು ಅದರಲ್ಲೇನಾದರೂ ಉಪ್ಪು ಖಾರ ಇದೆಯಾ? ಹೇಳಿ ನೋಡೋಣ. ಅದೇಕೆ ಅಷ್ಟೊಂದು ಆತುರಾತುರವಾಗಿ ಓದಿಸಿದಿರಿ? ಅದರಲ್ಲಿ ಏನಾದರೂ ಬಿಜೆಪಿಯದು ಬದ್ಧತೆ ಇದೆಯೇ? ನಿಮ್ಮ ನೀತಿ ಏನೆಂದು ಹೇಳಿದ್ದೀರಾ? ತಾತ್ಕಾಲಿವಾಗಿ ಇರತಕ್ಕಂತಹ ಸಮಸ್ಯೆಗಳಿಗೆ ನಿಮ್ಮ ಸ್ಪಂದನ ಏನೆಂದು ಹೇಳಿದ್ದೀರಾ? ತತ್‌ಕ್ಷಣಕ್ಕೆ ನೀವು ಹೇಳಬೇಕಾಗಿತ್ತು. ಎಲ್ಲಾ ಕಡೆಗೆ ಬೇರೆ ಬೇರೆ ರಾಜ್ಯದವರು ಟ್ಯಾಕ್ಸ್ ಕಡಿಮೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಇವೊತ್ತು ಪೆಟ್ರೋಲ್, ಡೀಸೆಲ್ ಹಾಗೂ ಗ್ಯಾಸ್ ಬೆಲೆ ಜಾಸ್ತಿ ಆಗಿದೆ. ಮಾನ್ಯ ಆಚಾರ್ಯರವರೇ ನಾವು ಇವೊತ್ತೇ ಅನೌನ್ಸ್ ಮಾಡುತ್ತೇವೆ ಎಂದು ನೀವು ಹೇಳಬೇಕಾಗಿತ್ತು. ನಿನ್ನೆ ತಾವು ಪತ್ರಿಕೆಗೆ ನಾವು ಬಜೆಟ್‌ನಲ್ಲಿ ನೋಡುತ್ತೇವೆ ಎಂದು ಹೇಳಿದಿರಿ. ಏಕೆ? Are you not getting more taxes now? ಯುಪಿಎ ಸರ್ಕಾರವೇ ಹೆಚ್ಚಿಸಿರುವುದು. ವಾಜಪೇಯಿ ಸರ್ಕಾರದವರು ಎಷ್ಟು ಸಾರಿ ಹೆಚ್ಚಿಸಿದ್ದಾರೆ ಎಂಬುದನ್ನು ತೆಗೆದು ನೋಡಿ. It is a global phenomenon. ನೀವು ಸ್ವಲ್ಪ ಟೈಮ್ಸ್ ಆಫ್ ಇಂಡಿಯಾ ಬೇರೆ ಪೇಪರ್‌ಗಳನ್ನು ಓದಿಕೊಳ್ಳಬೇಕು. ದಯಮಾಡಿ ತಾವು ಸ್ವಲ್ಪ ಕೇಳಿ. ಗಲಾಟೆ ಮಾಡುವುದಕ್ಕೆ ಹೋಗಬೇಡಿ. ನಿಮಗೆ ಅದರಿಂದ ಏನೂ ಲಾಭ ಆಗುವುದಿಲ್ಲ. ನೀವು ಎಷ್ಟು ಗಲಾಟೆ ಮಾಡಿದರೂ ನಾನೇನು ಕುಳಿತುಕೊಳ್ಳುವುದೂ ಇಲ್ಲ, ನಿಲ್ಲಿಸುವುದೂ ಇಲ್ಲ. ಏಕೆ ಸುಮ್ಮನೆ ಮಾತನಾಡುತ್ತೀರಿ? ಇವತ್ತು ನೀವು ಹೇಳಬೇಕಾಗಿತ್ತು, You

should have come out with a statement. ನಾವು ಇಷ್ಟು percent sales tax ಅನ್ನು ಕಡಿಮೆ ಮಾಡಿದ್ದೇವೆಂದು ಹೇಳಬೇಕಾಗಿತ್ತು. Is it not in your hand? ಅದು ನಿಮ್ಮ preview ನಲ್ಲಿ ಬರುವುದಿಲ್ಲವೆ? ಬೇರೆ ರಾಜ್ಯಗಳವರು ಮಾಡಿಲ್ಲವೆ? ಆಂಧ್ರದಲ್ಲಿ ಅವರು ಪೂರ್ತಿಯಾಗಿ ಗ್ಯಾಸ್‌ಗೆ 50 ರೂಪಾಯಿ ಕೊಡುತ್ತೇವೆಂದು ಹೇಳಿದ್ದಾರೆ. ಮಹಾರಾಷ್ಟ್ರದವರು, ಬಿಹಾರದವರು, ಪಶ್ಚಿಮ ಬಂಗಾಳದವರು, ಹೀಗೆ ಎಲ್ಲಾ ರಾಜ್ಯದವರು ಹೇಳಿದ್ದಾರೆ. ನೀವ್ಯಾಕೆ ಹೇಳಬಾರದು? ದಯಮಾಡಿ ತಾವು ಈಗಲೂ ಕೂಡ demand, ಈಗ ನಿಮಗೆ ಐದು ರೂಪಾಯಿ ಪೆಟ್ರೋಲ್ ಬೆಲೆ ಜಾಸ್ತಿಯಾದರೆ, ನಿಮಗೆ sales tax ಇರುವುದು admiral tax ಇರುವುದು to that extent ನಿಮಗೆ tax ಹೆಚ್ಚಾಯಿತು. ಹೆಚ್ಚಾದ ಟ್ಯಾಕ್ಸ್‌ನಲ್ಲಿ ನೀವು ಗ್ರಾಹಕರಿಗೂ ಸ್ವಲ್ಪ ಕೊಡಿ. We are not going to loose anything, are you going to loose anything? No. Oil price ಜಾಸ್ತಿಯಾದ ತಕ್ಷಣವೇ ನಿಮಗೆ ಸೇಲ್ಸ್ ಟ್ಯಾಕ್ಸ್ ಹೆಚ್ಚಿಗೆ ಬರುವುದಕ್ಕೆ ಪ್ರಾರಂಭವಾಗುತ್ತದೆ. ರಾಜ್ಯದ ತೆರಿಗೆ ಜಾಸ್ತಿಯಾಯಿತು. ನಿಮಗೆ ಹೆಚ್ಚಾದ ತೆರಿಗೆಯಲ್ಲಿ, ಇವತ್ತಿನ ಪರಿಸ್ಥಿತಿಯನ್ನು ಕೇಂದ್ರ ಸರ್ಕಾರ ನಿಭಾಯಿಸಿದೆ. ಅದೇ ರೀತಿ ನೀವು ಸ್ವಲ್ಪ ನಿಭಾಯಿಸಿ. ನಿನ್ನೆ ಮಾನ್ಯ ಮನಮೋಹನಸಿಂಗ್ ರವರು ಎಲ್ಲಾ ರಾಜ್ಯದವರಿಗೆ ಅಪೀಲ್ ಮಾಡಿಕೊಂಡಿದ್ದಾರೆ. ಸ್ವಲ್ಪ ಟ್ಯಾಕ್ಸ್ ಅನ್ನು ಕಡಿಮೆ ಮಾಡಿ ರಾಜ್ಯಗಳೂ ಕೊಡಿ ನೀವು ಸ್ವಲ್ಪ ಹೊರೆ ಹೊತ್ತುಕೊಳ್ಳಿ, It is a global phenomenon, crude oil ಬೆಲೆ ಜಾಸ್ತಿಯಾಗಿದೆ 135 ಡಾಲರ್ ಆಗಿದೆಯೆಂದು ಹೇಳಿದ ಮೇಲೆ, ನೀವು ಕೂಡ ಸೇಲ್ಸ್ ಟ್ಯಾಕ್ಸ್ ಅನ್ನು ಕಡಿಮೆ ಮಾಡುತ್ತೇವೆಂದು ಹೇಳುತ್ತೀರೆಂದು ಯೋಚನೆ ಮಾಡಿದ್ದೆ. ನೀವು 2%, 3% ಕಡಿಮೆ ಮಾಡುವುದರಿಂದ you are not going to loose anything. You are not going to loose anything to that extent. 5 ರೂಪಾಯಿ ಇದ್ದದ್ದು ನಾಲ್ಕು ರೂಪಾಯಿ ಆಗಬಹುದು, ಮೂರು ರೂಪಾಯಿ ಇದ್ದದ್ದು ಎರಡು ರೂಪಾಯಿ ಆಗಬಹುದು. Why can't you do that, please ನಮ್ಮ ಪಕ್ಷದ ವತಿಯಿಂದ demand ಮಾಡುತ್ತೇನೆ, ಕೂಡಲೇ sales tax ಅನ್ನು ಕಡಿಮೆ ಮಾಡತಕ್ಕಂಥ ನಿರ್ಣಯವನ್ನು ನೀವು ಮಾಡಬೇಕು, ಬಜೆಟ್‌ವರೆಗೆ ನೀವು ಕಾಯುವುದಕ್ಕೆ ಹೋಗಬೇಡಿ. ಸೆಸ್ ತೆಗೆಯುವುದಕ್ಕೆ ಬೇಕಾದರೆ ನೀವು ಬಜೆಟ್‌ವರೆಗೆ ಕಾಯಿರಿ. ಎಂಟ್ರಿ ಟ್ಯಾಕ್ಸ್ ತೆಗೆಯಬೇಕಾದರೆ ನೀವು ಬಜೆಟ್‌ವರೆಗೆ ಕಾಯಿರಿ, but not sales tax ಮಾಡುವುದಕ್ಕೆ ಏನು ಕಷ್ಟ? In a single

notificationನಲ್ಲಿ ನೀವು ಅದನ್ನು ಮಾಡಬಹುದು. Amendment ನಂತರ ಮಾಡಿಕೊಂಡರಾಯಿತು. why are you waiting? ನಾವು ಜನ ಪರವಾಗಿದ್ದೇವೆ. ಬಡವರ ಪರವಾಗಿ ಇದ್ದೇವೆ, ರೈತರ ಪರವಾಗಿ ಇದ್ದೇವೆ ಎಂದು ಪದಗಳನ್ನು ಪ್ರಯೋಗ ಮಾಡುವುದರಿಂದ ಜನರಿಗೆ ಅನುಕೂಲವಾಗುವುದಿಲ್ಲ. ಆ ಪದಗಳಿಂದ ಜನರಿಗೇನೂ ಅನುಕೂಲವಾಗುವುದಿಲ್ಲ. ರೈತರಿಗೇನು ಅನುಕೂಲವಾಗುವುದಿಲ್ಲ ಬಡಜನತೆಗೆ ಏನು ಅನುಕೂಲವಾಗುವುದಿಲ್ಲ. ದಯಮಾಡಿ ಮಾನ್ಯ ಯಡಿಯೂರಪ್ಪನವರೇ ನಿಮ್ಮ ಬಗ್ಗೆ ನನಗೆ ವಿಶ್ವಾಸವಿದೆ. Please come out with a statement. ನಾವು ಇಷ್ಟು ಪರ್ಸೆಂಟ್ ಸೇಲ್ಸ್ ಟ್ಯಾಕ್ಸ್ ಅನ್ನು ಕಡಿಮೆ ಮಾಡಿದ್ದೇವೆ. ಗ್ರಾಹಕರಿಗೆ ಇಷ್ಟು ಭಾರ ಕಡಿಮೆ ಮಾಡಿ ದ್ದೇವೆ, ಕೇಂದ್ರ ಸರ್ಕಾರ now it is global phenomenon. 5% import taxಅನ್ನು ಕಡಿಮೆ ಮಾಡಿದೆ. ಎರಡೂವರೆ ಪರ್ಸೆಂಟ್ export tax ಅನ್ನು ಕಡಿಮೆ ಮಾಡಿದೆ. ಪಶ್ಚಿಮ ಬಂಗಾಲ ಸರ್ಕಾರ ಮಾಡಿದೆ. ನೀವು ಕಡಿಮೆ ಮಾಡಿ. ದಯಮಾಡಿ ನೀವು ಇದರ ಬಗ್ಗೆ ಗಂಭೀರವಾಗಿ ಕೂಡಲೇ ಯೋಚನೆ ಮಾಡಬೇಕು, ನಾಳೆಯೇ ಸೇಲ್ಸ್ ಟ್ಯಾಕ್ಸ್ ಅನ್ನು ಕಡಿಮೆ ಮಾಡತಕ್ಕಂಥ ಕೆಲಸವನ್ನು ಮಾಡಬೇಕೆಂದು ನಾನು ಕಾಂಗ್ರೆಸ್ ಪಕ್ಷದ ವತಿಯಿಂದ ಬಹಳ ತೀವ್ರವಾದ ಒತ್ತಾಯವನ್ನು ಮಾಡುತ್ತಿದ್ದೇನೆ. ದಯಮಾಡಿ ನೀವು ಇದನ್ನು ಮಾಡಬೇಕು. ಇಲ್ಲದೆ ಹೋದರೆ, ಕೇವಲ ನೀವು ಮಾತುಗಳಲ್ಲಿ, ಸುಂದರವಾದ ಪದಗಳನ್ನು ಪ್ರಯೋಗ ಮಾಡುತ್ತೀರಿ. ಸುಂದರವಾದ ಪದಗಳನ್ನು ಎಲ್ಲರೂ ಪ್ರಯೋಗಿಸಬಹುದು. ಕಾವ್ಯಮಯವಾಗಿ ಹೇಳಬಹುದು, ಅಡಿಗರ ಪದ ಹೇಳಬಹುದು, ಕುವೆಂಪುರವರ ಎಲ್ಲಾ ಪದಗಳನ್ನು ಹೇಳಬಹುದು, ಮಂಕುತಿಮ್ಮನ ಕಗ್ಗದಿಂದ ಎಲ್ಲಾ ತೆಗೆದುಕೊಂಡು ಹೇಳಬಹುದು. ಡಿ.ವಿ.ಗುಂಡಪ್ಪ ನವರದು ಹೇಳಬಹುದು. ಅದನ್ನು ಹೇಳುವುದರಿಂದ ಹೊಟ್ಟೆ ತುಂಬಬೇಕಲ್ಲವೆ? ಎಲ್ಲಾ ಕಡೆ ಹಾಹಾಕಾರ ಇದೆ. ನೀವು ಬಿಪಿಎಲ್ ಕಾರ್ಡು ಕೊಟ್ಟಿಲ್ಲವೆಂದು ಹಾಹಾಕಾರ ಇದೆ. ಅದರ ಬಗ್ಗೆ ನೀವು ಏನಾದರೂ ಮಾತನಾಡಿ ಎರಡು ರೂಪಾಯಿಗೆ ಕೆ.ಜಿ. ಅಕ್ಕಿ ನಾಳೆಯಿಂದ ಪ್ರಾರಂಭಿಸುತ್ತೇವೆಂದು ಏನಾದರೂ ಹೇಳಿದ್ದೀರಾ? ಯೂನಿಟ್ ಸಿಸ್ಟಂ ಅನ್ನು ತೆಗೆದುಕೊಂಡು ಬಂದಿದ್ದರಿಂದ ಕಷ್ಟವಾಗಿದೆ. ನಾವು ಒಂದು ಕಾರ್ಡಿಗೆ 20 ಕೆ.ಜಿ. ಕೊಡುತ್ತೇವೆಂದು ನಿಮ್ಮ manifesto ನಲ್ಲಿ ಹೇಳಿದ್ದೀರಿ. You said it in your manifesto ನೀವು ಇದನ್ನು ರಾಜ್ಯಪಾಲರ ಭಾಷಣದಲ್ಲಿ ಹೇಳಬೇಕಾಗಿತ್ತು. ಹಾಗಾದರೆ ಬಡವರ ಬಗ್ಗೆ ಏನು ಕಾಳಜಿ? ಇವೆಲ್ಲಾ ನೀವು ಹೇಳದೆ, ಸುಮ್ಮನೆ ಬಡವರ ಬಗ್ಗೆ ಸುಂದರವಾದ ಕನಸು ಕಟ್ಟಿಬಿಟ್ಟರೆ ಆಗಿ

ಬಿಡುತ್ತದೆಯೆ? ದೊಡ್ಡ ದೊಡ್ಡ ಪದಗಳನ್ನು ಬಳಸಿಬಿಟ್ಟರೆ ಆಗುತ್ತದೆಯೆ? ದಲಿತರ ಬಗ್ಗೆ ಹಿಂದುಳಿದವರ ಬಗ್ಗೆ ಶೋಷಿತರ ಬಗ್ಗೆ ನಮ್ಮ ಪಕ್ಷ ಅವರ ಪರವಾಗಿ ಇರುತ್ತೇವೆ, ಅವರಿಗೆ ನ್ಯಾಯ ಕೊಡುತ್ತೇವೆಂದು ಹೇಳಿದವರು ನೀವು ಹೀಗೇನಾ ನ್ಯಾಯ ಕೊಡುವುದು? ನೀವೇ ದೊಡ್ಡದಾಗಿ ರೈತರಿಗೆ ಹೇಳಿದಿರಿ. ನಾವು ಪಂಪ್‌ಸೆಟ್ಟುಗಳಿಗೆ ಪುಕ್ಕಟೆಯಾಗಿ ವಿದ್ಯುತ್ತ್ ಅನ್ನು ಕೊಡುತ್ತೇವೆಂದು ಹೇಳಿದಿರಿ. ನಾನು ನಿಮ್ಮ ರಾಜ್ಯಪಾಲರ ಭಾಷಣವನ್ನು ಓದಿದೆ. ಅದರಲ್ಲಿ ನೀವು ಏನು ಹೇಳಿದಿರಿ ಎಂದರೆ, ಈಗಿರ ತಕ್ಕಂಥ ವಿದ್ಯುತ್ ಜನರೇಷನ್ ಇದೆಯಲ್ಲ ಅದನ್ನು ದುಪ್ಪಟ್ಟು ಮಾಡುತ್ತೇವೆಂದು ಹೇಳಿದ್ದೀರಿಯೇ ಹೊರತು ಪುಕ್ಕಟೆಯಾಗಿ ಕೊಡುತ್ತೇವೆಂದು ಎಲ್ಲಿ ಹೇಳಿದ್ದೀರಿ? ನನಗೆ ನಿಮ್ಮ ಭಾಷಣ ಓದಿದ ಜ್ಞಾಪಕವಿದೆ. ಅಧಿಕಾರಕ್ಕೆ ಬಂದ next dayನೇ issue ಮಾಡುತ್ತೇವೆಂದು ಹೇಳಿದಿರಿ. ಮೊದಲನೇ ಫೈಲ್ ಅದನ್ನು ಸಹಿ ಮಾಡುವುದು ಎಂದು ಹೇಳಿದಿರಿ. ಆ ಫೈಲ್ ಈಗ ಎಲ್ಲಿ ಇದೆ? ಮಾನ್ಯ ಯಡಿಯೂರಪ್ಪನವರೆ ನೀವು ಈಗ ಅದರ ಬಗ್ಗೆ ಹೇಳಬೇಕು. ಮಾನ್ಯ ಅಧ್ಯಕ್ಷರೆ ಆ ಫೈಲ್ ಏನಾಯಿತು? ಇದು ಸುಮ್ಮನೆ ಹೇಳುವುದು. ಪಾಪ ರೈತರು ನಿಮ್ಮ ಮಾತು ಕೇಳಿ ಖುಷಿ ಪಟ್ಟರು. 10 HP ವರೆಗೆ ಪಕ್ಕಟೆಯಾಗಿ ಪವರ್ ಕೊಡುತ್ತೇವೆಂದು ನಾವು ಹೇಳಿದ್ದವು. ನಮಗೆ ಜನ ಆದೇಶ ಕೊಟ್ಟಿದ್ದರೆ ಬಂದ ತಕ್ಷಣ ನಾವು ಮಾಡುತ್ತಿದ್ದೆವು. ರಾಜ್ಯಪಾಲರ ಭಾಷಣದಲ್ಲಿ ಹೇಳಿಸುತ್ತಿದ್ದೇವು. It is our commitment.ಕೊಡುತ್ತೇವೆಂದು ಹೇಳುತ್ತಿದ್ದೆವು. but you have not mentioned a single word in the Governor's address, ರಾಜ್ಯದ ಜನತೆಗೆ ನೀವು ಏನು ಹೇಳುವುದು? ಕಬ್ಬಿನ ಬೆಳೆಗೆ 160 ರೂಪಾಯಿ ಬೆಂಬಲ ಬೆಲೆ ಎಂದು ಮಾನ್ಯ ರಾಜ್ಯಪಾಲರು ಘೋಷಣೆ ಮಾಡಿದರು. ಸರ್ಕಾರ ಅನೌನ್ಸ್ ಮಾಡಿದೆ. ಸರ್ಕಾರದಿಂದ ಕೊಡಬೇಕು. ಯಾರೋ ಫ್ಯಾಕ್ಟರಿಯವರು ಕೋರ್ಟಿಗೆ ಹೋಗಿದ್ದಾರೆಂದರೆ ನೀವು ಸರ್ಕಾರದವರು ಮಾಡಿ. 160 ರೂಪಾಯಿ ಕೊಡುತ್ತೇವೆಂದು ಹೇಳಿರುವುದು ಸರ್ಕಾರದವರು. 160 ರೂಪಾಯಿ ಬೆಂಬಲ ಬೆಲೆ ಕೊಡುತ್ತೇವೆಂದು ಸರ್ಕಾರ ಹೇಳಿದೆ. ನೀವು ಬಂದು ಈಗಾಗಲೇ ಒಂದು ವಾರವಾಯಿತು. ಆದ್ದರಿಂದ, ಇದನ್ನು ರೈತರಿಗೆ ಕೊಡುತ್ತೇವೆಂದು ಪ್ರಕಟಣೆ ಮಾಡಿ. ಆದರೆ, ಇದುವರೆಗೆ ತಾವು ಏನನ್ನು ಹೇಳಿಲ್ಲ. ರಾಜ್ಯಪಾಲರ ಭಾಷಣ ಒಂದು ರೀತಿಯಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದ ರೀತಿಯಲ್ಲಿ ನನಗೆ ಕಾಣುತ್ತದೆ. ಏಕೆಂದರೆ, ಆದರಲ್ಲಿ ಒಂದು ಗೊತ್ತು ಗುರಿ, ಬದ್ಧತೆಗಳಿಲ್ಲ ಮತ್ತು ಸಮಸ್ಯೆಗಳಿಗೆ ಯಾವುದೇ ರೀತಿಯ ಸ್ಪಂದನೆ ಇಲ್ಲ. ಮಾನ್ಯ ಸುರೇಶ್ ಕುಮಾರ್‌ರವರೆ, ನಾನು ಹೇಳಿರತಕ್ಕಂಥ ಉದ್ದೇಶ ಏನೆಂದರೆ, ಇಷ್ಟು ಆತುರವಾಗಿ

ಇದನ್ನು ಮಾಡದೆ ಇದರ ಬಗ್ಗೆ ಯೋಚನೆ ಮಾಡಿ ಮಾಡಬಹುದಾಗಿತ್ತು. ಆತುರವಾಗಿ ರಾಜ್ಯಪಾಲರಿಂದ ಭಾಷಣ ಮಾಡಿಸತಕ್ಕಂಥ ಅಗತ್ಯತೆ ಇರಲಿಲ್ಲ. vote of confidence ತೆಗೆದುಕೊಂಡು ಆ ನಂತರ ಇದನ್ನು ಮಾಡಬಹುದಾಗಿತ್ತು. ಇವತ್ತಿನ ಯಾವುದೇ ಸಮಸ್ಯೆಗಳಿಗೆ ಸ್ಪಂದಿಸಿಲ್ಲ. ಇವತ್ತು ಅನೇಕ ಸಮಸ್ಯೆಗಳಿವೆ. ಇವರು ಬಂದ ತಕ್ಷಣವೇ ಎಡವಿದರು ಎಂದು ಈ ರಾಜ್ಯದ ಜನ ಈಗಾಗಲೇ ನೋಡುತ್ತಿದ್ದಾರೆ. ಮೊದಲೇ ನಿಮ್ಮ ಮೇಲೆ ಸಂಪೂರ್ಣ ವಿಶ್ವಾಸ ಇಲ್ಲ. ಪ್ರಾರಂಭದಲ್ಲಿಯೇ ನೀವು ಎಡುವುದಕ್ಕೆ ಪ್ರಾರಂಭ ಮಾಡಿದರೆ ನಿಮ್ಮ ಮೇಲೆ ಜನರ ವಿಶ್ವಾಸ ಹೇಗೆ ಉಳಿದುಕೊಳ್ಳುತ್ತದೆ? ಈ ಸದನದಲ್ಲಿ ವಿಶ್ವಾಸ ಪಡೆದುಕೊಳ್ಳುವುದು ಬೇರೆ. ಏಕೆಂದರೆ, 5 ಜನರಿಗೆ ಮಂತ್ರಿ ಪದವಿ ಕೊಟ್ಟಿದ್ದೀರಿ. ಮತ್ತೆ ಅವರೆಲ್ಲರನ್ನು ಕಷ್ಟಪಟ್ಟು ಕರೆದುಕೊಂಡು ಬಂದು ಇಲ್ಲಿ ಕುಳ್ಳಿರಿಸಿಕೊಂಡಿದ್ದೀರಿ. ಓಟು ಹಾಕುವ ಹೊತ್ತಿಗೆ ಏನೇನೂ ಆಗುತ್ತದೆಯೋ ಗೊತ್ತಿಲ್ಲ. ಅದು ಬೇರೆ. ಆದರೆ, ಜನರ ವಿಶ್ವಾಸವನ್ನು ನೀವು ಉಳಿಸಿಕೊಳ್ಳಬೇಕಲ್ಲವೇ? ಮಾನ್ಯ ಅಧ್ಯಕ್ಷರೆ, ನಾನು ದೀರ್ಘವಾಗಿ ಹೆಚ್ಚು ಸಮಯ ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ನೀವು ಏನೇನು ಒಳ್ಳೆಯ ಮಾತುಗಳೆಲ್ಲವನ್ನು ಹೇಳಿದ್ದೀರಲ್ಲಾ ಆ ಮಾತುಗಳಿಗೋಸ್ಕರ ಅಂದರೆ, ಅವುಗಳೆಲ್ಲವನ್ನು ಜಾರಿ ಮಾಡುತ್ತೀರೋ ಆಥವಾ ಇಲ್ಲವೋ ಎಂಬುದರ ಬಗ್ಗೆ ನಾವು ಕಾಯುತ್ತೇವೆ. ಜಾರಿ ಮಾಡಿದರೆ ನಾವು ನಿಮಗೆ ಬೆನ್ನು ತಟ್ಟಿ ಅಭಿನಂದನೆಯನ್ನು ಸಲ್ಲಿಸುತ್ತೇವೆ. ಆದರೆ, ಮಾಡದೆ ಹೋದರೆ ಜನರು ಸುಮ್ಮನೆ ಇರುವುದಿಲ್ಲ ಮತ್ತೆ ನಾವೂ ಕೂಡ ಸುಮ್ಮನೆ ಇರುವುದಿಲ್ಲ. ಇದನ್ನು ನಿಮಗೆ ಸೂಕ್ಷ್ಮವಾಗಿ ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ನಿಮಗೆ ಬಂದರತಕ್ಕಂಥ ಮತ ಕೂಡ fair and free election ನಿಂದ ಬಂದಿದೆಯೆಂದು ನಾನು ಹೇಳಿಕೊಳ್ಳುವುದಕ್ಕೆ ಹೋಗುವುದಿಲ್ಲ. ಈ ರಾಜ್ಯದ ತುಂಬಾ ದುಡ್ಡಿನ ಪ್ರಭಾವ ಎಷ್ಟು ನಡೆದಿದೆ ಎನ್ನತಕ್ಕಂಥದು ಗೊತ್ತಿದೆ. ಯಾವ್ಯಾವ ಕ್ಷೇತ್ರದಲ್ಲಿ ದುಡ್ಡಿನ ಪ್ರಭಾವ ನಡೆದಿದೆ ಎಂಬುದು ಗೊತ್ತಿದೆ. ಬಿಜೆಪಿಯವರು ಇಷ್ಟು ಧಾರಾಳವಾಗಿ ದುಡ್ಡು ಖರ್ಚು ಮಾಡಿದ್ದನ್ನು ನಾನು ಇದುವರೆಗೆ ಎಲ್ಲಿಯೂ ನೋಡಿರಲಿಲ್ಲ. ಕರ್ನಾಟಕ ಇತಿಹಾಸದಲ್ಲಿ ನಾನೂ ಕೂಡ 10 ಚುನಾವಣೆಯನ್ನು ಫೇಸ್ ಮಾಡಿದ್ದೇನೆ. ಎರಡು–ಮೂರರಲ್ಲಿ ನಾನು ಸಹ ಸೋತಿದ್ದೇನೆ. 6 ಸಾರಿ ಇಲ್ಲಿಗೆ ಗೆದ್ದು ಬಂದಿದ್ದೇನೆ. ಆದರೆ, ಹಣದ ಇಷ್ಟೊಂದು ಪ್ರಭಾವ ನಾನು ಎಂದು ನೋಡಿರಲಿಲ್ಲ. ಆದರೆ, ಈ ಸಾರಿ ಅಪ್ಪರಮಟ್ಟಿಗೆ ಹೆಂಡ ಮತ್ತು ಹಣದ ಪ್ರಭಾವ ನಡೆದಿದೆ. ಬಿಜೆಪಿ ಪಕ್ಷದ ತತ್ವ ಮತ್ತು ಸಿದ್ಧಾಂತಗಳ ಮೇಲೆ ನಿಮಗೆ ಓಟು ಬಂದಿವೆಯೇ?

ಶ್ರೀ ಬಸವರಾಜ್ ಬೊಮ್ಮಾಯಿ :- ಎಲ್ಲವೂ ಕೂಡ ಚಾಮುಂಡೇಶ್ವರಿಯ ಕೃಪೆ.

ಶ್ರೀ ಸಿದ್ಧರಾಮಯ್ಯ :- ಮಾನ್ಯ ಬಸವರಾಜ್ ಬೊಮ್ಮಾಯಿರವರೆ, ಚಾಮುಂಡೇಶ್ವರಿ ಕೃಪೆ ಎಂದು ನೀವು ಕೂಡ ಮಾಡಿ ಎಂದು ಹೇಳ ಲಾಗಿದೆಯೇ? ಚಾಮುಂಡೇಶ್ವರಿಯಲಲಿ ನಡೆಯುತ್ತದೆಂದು ನೀವೂ ಕೂಡ ಮಾಡಬೇಕೆಂದು ಎಲ್ಲಿದೆ ಮಾನ್ಯ ಬಸವರಾಜ್‌ರವರೆ?

ಶ್ರೀ ಬಸವರಾಜ್ ಬೊಮ್ಮಾಯಿ:- ಚಾಮುಂಡೇಶ್ವರಿಯಲ್ಲಿ ನಡೆದಿರತಕ್ಕಂಥದರ ದಾಖಲೆಗಳನ್ನು ನೆನಪು ಮಾಡಿಕೊಡುತ್ತಿದ್ದೇನೆ.

ಶ್ರೀ ಸಿದ್ಧರಾಮಯ್ಯ:- ಅದರಲ್ಲಿ ಬಿಜೆಪಿಯವರದು ಪಾಲು ಇಲ್ಲವೇ? ಈಗ ಎಲ್ಲವನ್ನೂ ಕೂಡ ಹೇಳುವುದಕ್ಕೆ ಬಹಳ ಚೆನ್ನಾಗಿ ಕಾಣಿಸುತ್ತದೆ. ಆದರೆ, ಅದರ ಹುಳುಕು ಹುಡುಕುವುದಕ್ಕೆ ಹೋದರೆ ಬೇಕಾದಷ್ಟಿವೆ, ಎಲ್ಲಾ ಹುಳುಕನ್ನು ಸುಮ್ಮನೆ ಹೇಳುವುದು ಬೇಡ. ಬೇಕಾದರೆ ಅದರ ಬಗ್ಗೆ ದೊಡ್ಡ ಚರ್ಚೆ ಮಾಡುವುದಾದರೆ ಮಾಡೋಣ. ಈಗ ಅವೆಲ್ಲಾ ಬೇಡ. ಮಾನ್ಯ ಅಧ್ಯಕ್ಷರೆ, ಇವರಿಗೆ ಬಹುಮತ ಇಲ್ಲ. ಇವತ್ತಿನ ದಿವಸ ಸರ್ಕಾರ 5 ಜನ ಪಕ್ಷೇತರಿರೆಲ್ಲರಿಗೂ ಮಂತ್ರಿ ಪದವಿ ಕೊಟ್ಟು ಇವರು ಅಧಿಕಾರಕ್ಕೆ ಬಂದಿದ್ದಾರೆ. ಆದ್ದರಿಂದ, ಇವರ ತಲೆ ಮೇಲೆ ಕತ್ತಿ ತೂಗಾಡುತ್ತಿದೆ. ಯಾವಾಗ ಏನು ಆಗುತ್ತದೆಯೋ ಎಂಬುದು ಗೊತ್ತಿಲ್ಲ. ಆ ರೀತಿ ಆಗಬೇಕೆಂದು ನಾನೇನು ಆಸೆ ಪಡುವುದಿಲ್ಲ. ಅವರಿಗೆ ಒಳ್ಳೆಯದಾಗ ಲೆಂದು ನಾನು wish ಮಾಡುತ್ತೇನೆ. ಆದರೆ, ಪಾಪ, ಅವರ ತಲೆಯ ಮೇಲೆ ಕತ್ತಿ ತೂಗಾಡುತ್ತಿದೆ. ಆದ್ದರಿಂದ, ಆ ವಿಶ್ವಾಸ ನಿರ್ಣಯ ಅಗತ್ಯ.

ಶ್ರೀ ಎಸ್. ಸುರೇಶ್ ಕುಮಾರ್:- ಅವಿಶ್ವಾಸ ನಿರ್ಣಯವಲ್ಲ. ವಿಶ್ವಾಸ ನಿರ್ಣಯ.

ಶ್ರೀ ಸಿದ್ಧರಾಮಯ್ಯ :- sorry, ವಿಶ್ವಾಸ ನಿರ್ಣಯ ಅಗತ್ಯ. ಆದರೆ, ಎರಡೂ ಕೂಡ ಒಂದೇ. ಅಪ್ಪನ ಜೊತೆ ಅಥವಾ ಅವ್ವನ ಜೊತೆ ಊಟ ಮಾಡಿದರೂ ಕೂಡ ಒಂದೆ. ನೀವು ಮಂಡಿಸಿರುವದು ವಿಶ್ವಾಸ ಮತ, ಆದರೆ ಅವಿಶ್ವಾಸ ಮತ ಎಂದರೇನು? ನಮಗೆ ಅವಿಶ್ವಾಸ ಇಲ್ಲವೆಂದರೆ ಆಯಿತಲ್ಲವೇ? we don't have confidence ಎಂದರೇನು? ನೀವು ಹೌಸ್‌ನ ವಿಶ್ವಾಸ ಕೇಳಿದ್ದೀರಿ. we have no confidence ಎಂದರೆ ಏನರ್ಥ? ಎರಡು ಒಂದೇ ಅಲ್ಲವೇ? ಆದ್ದರಿಂದ, ನಮಗೆ we have no confidence in you. the people of karnataka have no confidence in

you. ವಿಶ್ವಾಸ ಮತ ಯಾಚನೆ ಮಾಡುವ ನಿರ್ಣಯವನ್ನು ನೀವು ಮಂಡಿಸಿದ್ದೀರಿ. ಇದನ್ನು ನಾವು ವಿರೋಧ ಮಾಡು ತ್ತೇವೆ. ಆದರೆ, ಈಗಲೂ ಕೂಡ ನಾನು ಹೇಳುವುದೇನೆಂದರೆ, ಕನಿಷ್ಟ ಪಕ್ಷ ಇವತ್ತಿನ ದಿವಸ ಇರತಕ್ಕಂಥ burning issue ಗಳಿಗೆ ಕೂಡಲೇ ಸ್ಪಂದಿಸ ಬೇಕೆಂದು ಸರ್ಕಾರವನ್ನು ಈ ಸಂದರ್ಭದಲ್ಲಿ ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ಈಗ ಸರ್ಕಾರದ ಕಡೆಯಿಂದ ಉತ್ತರ. ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ. ಬಿ. ಎಸ್. ಯಡಿಯೂರಪ್ಪ (ಮುಖ್ಯ ಮಂತ್ರಿಗಳು :– ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರತಿಪಕ್ಷದ ನಾಯಕರಾದಂಥ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಮಾಜಿ ಮುಖ್ಯ ಮಂತ್ರಿಗಳು ಮತ್ತು ಜೆ. ಡಿ. ಎಸ್. ಪಕ್ಷದ ಪ್ರಮುಖ ರಾದಂಥ ಶ್ರೀ ಹೆಚ್. ಡಿ. ಕುಮಾರ ಸ್ವಾಮಿಯವರು ಮತ್ತು ಮಾನ್ಯ ಸಿದ್ದ ರಾಮಯ್ಯನವರು ಬಹಳ ಗಂಬೀರವಾದಂಥ ಕೆಲವು ಸಲಹೆ ಮತ್ತು ಟೀಕೆಗಳನ್ನು ಮಾಡಿದ್ದಾರೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಎಷ್ಟು ಗಟ್ಟಿಯಾಗಿ ಪ್ರತಿಪಕ್ಷ ಇರು ತ್ತದೆಯೋ ಅಷ್ಟೆ ಎಚ್ಚರಿಕೆಯಿಂದ ಆಡಳಿತ ಪಕ್ಷ ಇರುತ್ತದೆ. ಮತ್ತೆ ಅಷ್ಟೇ ಎಚ್ಚರಿಕೆಯಿಂದ ಅಧಿಕಾರ ವರ್ಗ ಕೂಡ ಇರುತ್ತದೆ. ನನಗೆ ಅತ್ಯಂತ ಸಂತೋಷ ವಾಗಿದೆ. ಏಕೆಂದರೆ, ಒಂದು ರೀತಿಯಲ್ಲಿ ಆ ಕಡೆ 108 ಜನ ಬಲಾಢ್ಯರು ಅನು ಭವಿಗಳು ಇದ್ದಾರೆ. ಈ ಭಾಗದಲ್ಲಿ 116 ಜನ ಇದ್ದೇವೆ. ನನ್ನ ದೃಷ್ಟಿಯಿಂದ ಕಳೆದ 25–30 ವರ್ಷಗಳಲ್ಲಿ ಈ ನಾಡಿನ 5.5 ಕೋಟಿ ಜನರ ಅಭಿವೃದ್ಧಿ ದೃಷ್ಟಿ ಯಿಂದ ಈ ಮನೆಯಲ್ಲಿ ಸರಿಯಾಗಿ ಚರ್ಚೆಯಾಗಿ, ಆ ಸಮಸ್ಯೆಗೆ ಪರಿಹಾರ ಹುಡುಕುವಂಥ ಕೆಲಸ ಆಗಬೇಕಾಗಿತ್ತೋ ಆ ಕೆಲಸ 100ಕ್ಕೆ 100 ಮುಂದೆ ಬರು ವಂಥ ದಿವಸಗಳಲ್ಲಿ ಆಗುತ್ತದೆಂಬ ವಿಶ್ವಾಸ ತಾವು ಮಾತನಾಡಿದ ದಾಟಿಯಿಂದ ನನಗೆ ಅರ್ಥವಾಗುತ್ತದೆ. ಈ ಒಂದು ಚುನಾಯಿತ ಸ್ಥಾನದಲ್ಲಿ ಕುಳಿತಿರುವ ನಾವು ಗಳೆಲ್ಲರೂ ಜನರ ಸೇವಕರು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಜನರು ಮಾಲೀ ಕರಾಗಿದ್ದಾರೆ. ನಾವು ಅವರ ಸೇವಕರಾಗಿದ್ದೇವೆ. ಆದರೆ, ಈಗ ಏಕೋ ಒಂದು ವ್ಯತ್ಯಾಸಗಳಾಗಿವೆ. ಈಗ ಅದರ ಯಾವುದೇ ಒಂದು ವಿವರಕ್ಕೆ ನಾನು ಹೋಗು ವುದಿಲ್ಲ. ನೀವು ಕೊಟ್ಟಂಥ ಸಲಹೆಗಳನ್ನು, ಎಚ್ಚರಿಕೆಯನ್ನು ಅತ್ಯಂತ ಗಂಬೀರ ವಾಗಿ ನಾನು ಗಮನಿಸುತ್ತಿದ್ದೇನೆ. ನಿಮಗೆ ವಿಶ್ವಾಸ ಬರುವ ರೀತಿಯಲ್ಲಿ ನಮ್ಮ ಸರ್ಕಾರ ಕೆಲಸ ಮಾಡುತ್ತದೆ ಎಂಬ ಭರವಸೆಯನ್ನು ಈ ಸಂದರ್ಭದಲ್ಲಿ ನಾನು ಕೊಡುತ್ತೇನೆ. ರಸಗೊಬ್ಬರದ ಬಗ್ಗೆ ಚರ್ಚೆ ಆಯಿತು. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಮತ್ತು ಮಾನ್ಯ ಸಿದ್ಧರಾಮಯ್ಯನವರೆ ನಾವು ಅಧಿಕಾರಕ್ಕೆ ಬಂದು

ಒಂದು ವಾರವಾಗಿದೆಯಷ್ಟೆ. ನಾವು ಮಾನ್ಯ ಪ್ರಧಾನ ಮಂತ್ರಿಗಳ ಹತ್ತಿರ ಹೋದಾಗ ನಾನು ಮೊದಲು ಮಾತನಾಡಿದಂಥ ವಿಷಯ ಏನೆಂದರೆ, ನಮ್ಮಲ್ಲಿ early monsson ಪ್ರಾರಂಭವಾಗಿರುವುದರಿಂದ ಜನ ನೆಮ್ಮದಿಯಿಂದ ಉಳುಮೆ ಮಾಡಿ ಬಿತ್ತನೆ ಕೆಲಸ ಪ್ರಾರಂಭ ಮಾಡುತ್ತಿದ್ದಾರೆ. ಆದರೆ, ರಾಷ್ಟ್ರಪತಿ ಆಳ್ವಿಕೆ ಸಂದರ್ಭದಲ್ಲಿ ಆ ಕಡೆ ರಸಗೊಬ್ಬರವನ್ನು ಏನು ಸ್ಟಾಕ್ ಮಾಡಬೇಕಾಗಿತ್ತ ಅದು ಆಗದೆ ಇರುವುದರಿಂದ ಈಗ ರಸಗೊಬ್ಬರದ ಕೊರತೆಯಾಗಿದೆ. ಆ ಸಂದರ್ಭ ದಲ್ಲಿ ಇದರ ಕೊರತೆ ಇರುವುದರಿಂದ ರಸಗೊಬ್ಬರದ ಕೊರತೆಯಾಗಿದ್ದರಿಂದ ಈ ವ್ಯತ್ಯಾಸಗಳಾಗಿವೆ. ಆದ್ದರಿಂದ, ತಾವು ತತ್‌ಕ್ಷಣ ಕರ್ನಾಟಕ ರಾಜ್ಯಕ್ಕೆ ಅಗತ್ಯ ಇರುವಂಥ ರಸಗೊಬ್ಬರವನ್ನು ಪೂರೈಸುವುದಕ್ಕೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿದಾಗ ಅಧಿಕಾರಿಗಳಿಗೆ ಸೂಚನೆ ಕೊಟ್ಟು ತತ್‌ಕ್ಷಣ ಕ್ರಮವನ್ನು ನಾನು ತೆಗೆದುಕೊಳ್ಳುತ್ತೇನೆಂದು ಅತ್ಯಂತ ಕಳಕಳಿಯಿಂದ ಮಾನ್ಯ ಪ್ರಧಾನಿಯವರು ನನಗೆ ಭರವಸೆ ಕೊಟ್ಟರು.

ಅದು ಆದ ಮೇಲೆ ನಾನು ಮಾಡಿದ ಮೊದಲನಯ ಕೆಲಸ 7-8 ಜಿಲ್ಲೆಯ ಜಿಲ್ಲಾಧಿಕಾರಿಗಳು ಮತ್ತು ಎಸ್.ಪಿ., ಸಿ.ಇ.ಒ.ಗಳ ಜೊತೆಗೆ ವಿಡಿಯೋ ಕಾನ್ಫರೆನ್ಸ್ ಮಾಡುವುದರ ಮೂಲಕ ಅಲ್ಲಿಯ ಸ್ಥಿತಿಗಳು ಏನಿದೆ, ಬಿತ್ತನೆ ಬೀಜದ ಕೊರತೆ ಏನಿದೆ, ರಸಗೊಬ್ಬರ ಸ್ಟಾಕ್ ಏನಿದೆ, ವಿತರಣೆಗೆ ಏಕೆ ಕೊರತೆಯಾಗಿದೆ, ವ್ಯತ್ಯಾಸ ಏನಾಗಿದೆ. ಎಲ್ಲಿ ಮಳೆ ಬಿದ್ದಿದೆ ಎಲ್ಲಿ ಬಿತ್ತನೆ ಪ್ರಾರಂಭವಾಗಿದೆ. ಅಲ್ಲಿ ತಕ್ಷಣ, ರಸಗೊಬ್ಬರ, ಬಿತ್ತನೆ ಬೀಜ ಯಾವ ರೀತಿಯಲ್ಲಿ ವಿತರಣೆಯಾಗಬೇಕೆಂದು ಸೂಚನೆಗಳನ್ನು ಕೊಟ್ಟಿದ್ದೇನೆ. ಯಾರು ರಸಗೊಬ್ಬರವನ್ನು ಕಳ್ಳತನದಿಂದ ದಾಸ್ತಾನು ಮಾಡುತ್ತಿದ್ದಾರೆ, ಹೆಚ್ಚಿನ ರೇಟಿಗೆ ಮಾರಾಟ ಮಾಡುತ್ತಿದ್ದಾರೆಂದು ಗಮನಕ್ಕೆ ಬಂದಿದೆ. ಅವರ ಮೇಲೆ ನಿರ್ಧಾಕ್ಷಿಣ್ಯವಾಗಿ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೂಡ ನಾನು ಹೇಳಿದ್ದೇನೆ. ಆ ದಿಕ್ಕಿನಲ್ಲಿ ಪ್ರಯತ್ನ ಕೂಡ ನಡೆದಿದೆ. day and night ಅಧಿಕಾರಿಗಳು ಕೆಲಸವನ್ನು ಮಾಡಿದ್ದಾರೆ. ನಿನ್ನೆ ರಾತ್ರಿ ಒಂಭತ್ತೂವರೆವರೆಗೂ ಸಹ ನಮ್ಮ ಅಧಿಕಾರಿಗಳ ಜೊತೆ ಈ ವಿಷಯದಲ್ಲಿ ನಾನು ಸಮಾಲೋಚನೆಯನ್ನು ಮಾಡಿದ್ದೇನೆ. ಈ ಮನೆಯ ಮೂಲಕ ನಾಡಿನ ರೈತ ಸಮೂಹಕ್ಕೆ ಭರವಸೆಯನ್ನು ಕೊಡುತ್ತೇನೆ, ರಸಗೊಬ್ಬರ ಮತ್ತು ಬಿತ್ತನೆ ಬೀಜದ ಕೊರತೆ ಆಗದ ರೀತಿಯಲ್ಲಿ ವ್ಯವಸ್ಥೆ ಮಾಡುತ್ತೇವೆ. ರೈತರಿಗೆ ಏನಾಗಿದೆ, ನಾನು ಈ ಮನೆಯ 224 ಜನ ಶಾಸಕರಲ್ಲಿ ವಿನಂತಿಯನ್ನು ಮಾಡುವಂಥದ್ದು ರಸ ಗೊಬ್ಬರದ ಕೊರತೆಯಾಗುತ್ತದೆ ಎಂದು ಅಂದುಕೊಂಡು 2 ಚೀಲ ಬೇಕಾದಲ್ಲಿ 10 ಚೀಲವನ್ನು ಸ್ಟಾಕ್ ಮಾಡುತ್ತಿದ್ದಾರೆ. ಅದಕ್ಕೆ ಈ ಮನೆಯ ಮೂಲಕ ರೈತರಿಗೆ

ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಅಗತ್ಯ ಇರುವಷ್ಟು ರಸಗೊಬ್ಬರವನ್ನು ಖರೀದಿ ಮಾಡಿ ಹೆಚ್ಚಿನ ರಸಗೊಬ್ಬದವನ್ನು ತರುವುದಕ್ಕೆ ಏನೇನು ಪ್ರಯತ್ನ ಮಾಡಬೇಕು ಆ ಎಲ್ಲಾ ಪ್ರಯತ್ನವನ್ನು ನಾನು ಮಾಡುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ವಿಚಾರ. ತಾವು ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೀರಿ. ಈಗಾಗಲೇ ರಾಜ್ಯದಲ್ಲಿ early monsoon ಪ್ರಾರಂಭವಾಗಿದೆ. ತಾವು ರೈತರ ಹೆಸರಿನಲ್ಲಿ ಪ್ರಮಾಣ ವಚನವನ್ನು ಸ್ವೀಕರಿಸಿದ್ದೀರಿ. ತಾವು ಎಲ್ಲೋ ಒಂದು ಕಡೆ ಈ ಸಭೆಯನನು ತಪ್ಪುದಾರಿಗೆ ಎಳೆಯುತ್ತಿದ್ದೀರಿ ಎನ್ನುವ ಭಾವನೆ ನನಗೆ ಬರುತ್ತಿದೆ. early monsoon ಪ್ರಾರಂಭವಾಗಿ ಸುಮಾರು 8–10 ದಿವಸವಾಯಿತು. ಬಿತ್ತನೆ ಕೆಲಸ ರಾಜ್ಯದ ಎಲ್ಲಾ ಕಡೆ ಚುರುಕಾಗಿ ನಡೆಯುತ್ತಿದೆ. ಸುಮಾರು 20–30 percent ಬಿತ್ತನೆ ಕಾರ್ಯಕ್ರಮ ಮುಗಿದುಹೋಗಿದೆ. ಇವತ್ತು ಎಲ್ಲಿ ನೋಡಿದರೂ ಯಾವ ಗೋದಾಮಿನಲ್ಲೂ ಕೂಡ ಒಂದು ಕೆ. ಜಿ. ಗೊಬ್ಬರ ಸಿಗುತ್ತಿಲ್ಲ. ನನ್ನ ಕ್ಷೇತ್ರದಲ್ಲಿ ಕೂಡ ನಾವು ಹುಡುಕಿದರೂ ಒಬ್ಬರಿಗೆ ಒಂದು ಕೆ. ಜಿ. ಕೊಡಲು ಸಾಧ್ಯ ವಾಗುತ್ತಿಲ್ಲ. ಇವತ್ತು ಕೂಡ ನಾನು ಅದನ್ನು ಪರಿಶೀಲನೆ ಮಾಡಿದ್ದೇನೆ. ನನಗೆ ಇದರ ಬಗ್ಗೆ ಅನುಭವ ಇದೆ. ಈ ಹಿಂದೆ ನಾನು ಈ ಇಲಾಖೆಯ ಮಂತ್ರಿಯಾಗಿದ್ದವನು. ನಾನು ಒಂದನ್ನು ಹೇಳುತ್ತೇನೆ, ಬಹುಶಃ ನಿಮಗೆ ಗೊಬ್ಬರ ಬರುವುದರ ಒಳಗಾಗಿ ಬಿತ್ತನೆ ಕಾರ್ಯಕ್ರಮ ಮುಗಿದು ಹೋಗುತ್ತದೆ.

ಶ್ರೀ. ಬಿ. ಎನ್. ಯಡಿಯೂರಪ್ಪ : ನಾನು ಈ ಮನೆಯ ಸದಸ್ಯರಲ್ಲಿ ವಿನಂತಿ ಮಾಡುವುದೇನೆಂದರೆ, ನೀವೆಲ್ಲಾ ನನಗೆ ಸಹಕಾರ ಕೊಡಿ, ನಾಳೆ ಪ್ರಧಾನಮಂತ್ರಿ ಗಳ ಹತ್ತಿರ ನಾನು ಮಾತನಾಡಿದ ಮೇಲೆ ನಮ್ಮ ಮುಖ್ಯ ಕಾರ್ಯದರ್ಶಿಯವರು ಮತ್ತು ಕೇಂದ್ರದ ಇತರ ಅಧಿಕಾರಿಗಳ ಹತ್ತಿರ ಮಾತನಾಡಿದ ಮೇಲೆ, Government of india ದ ಫರ್ಟಲೆಸರ್ಸ್ ಸೆಕ್ರೆಟರಿಯವರು ನಾಳೆ ಇಲ್ಲಿಗೆ ಬರುತ್ತಿದ್ದಾರೆ. ಚರ್ಚೆ ಮಾಡುತ್ತಿದ್ದೇನೆ. ತತ್‌ಕ್ಷಣ..

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೇ ನಾನು...

ಅಧ್ಯಕ್ಷರು: ಅವರು ಇನ್ನು ಈಲ್ಡ್ ಆಗಿಲ್ಲ. ದಯಮಾಡಿ ಕುಳಿತುಕೊಳ್ಳಿ. ಅವರು ಉತ್ತರವನ್ನು ಹೇಳುತ್ತಿದ್ದಾರೆ.

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿ ಯವರು ನಾಳೆ ಕೇಂದ್ರದ ಫರ್ಟಿಲೈಸರ್ಸ್ ಕಾರ್ಯದರ್ಶಿಯವರು ಬರುತ್ತಿದ್ದಾರೆ

ಅವರ ಜೊತೆ ಚರ್ಚೆ ಮಾಡುವುದಾಗಿ ಹೇಳಿದ್ದಾರೆ, ಸಂತೋಷ, ಏಕೆಂದರೆ ಹಾಸನದಲ್ಲಿ ನಾನು ಐದೂ ಜನ ಶಾಸಕರು ಸಂಬಂಧಪಟ್ಟಂಥ ಕೃಷಿ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಕೃಷಿ ಬೆಳೆ, ತೋಟಗಾರಿಕೆ ಬೆಳೆ ಮತ್ತು ಪ್ಲಾಂಟೇಷನ್ ಬೆಳೆ ಸೇರಿ ಇವತ್ತು 3,66,000 ಹೆಕ್ಟೇರ್ ಜಮೀನಿಗೆ ಗೊಬ್ಬರ ಬೇಕಾಗಿದೆ. ಅದರಲ್ಲೂ ಪ್ರಮುಖವಾದ ಬೆಳೆಯನ್ನು ಇವತ್ತು 45 ಸಾವಿರ ಹೆಕ್ಟೇರ್‌ನಲ್ಲಿ ಆಲೂಗಡ್ಡೆ ಬೆಳೆಯಬೇಕಾಗಿದೆ. ಈ ಸನ್ನಿವೇಶ ನಮ್ಮ ಹಾಸನ ಜಿಲ್ಲೆಯಲ್ಲಿದೆ. ಇವತ್ತು ಸುಮಾರು 1,28,000 ಟನ್ ಗೊಬ್ಬರ ನಮಗೆ ಬೇಕಾಗಿದೆ. ಅದು 19:19 ಅಥವಾ ಬೇರೆ ಗೊಬ್ಬರ ಇರಬಹುದು. ನಮ್ಮಲ್ಲಿ ವಿಶೇಷವಾಗಿ 20:20 ಗೊಬ್ಬರವನ್ನು ಹಾಕುತ್ತೇವೆ. ಮಾನ್ಯ ದೇವೇಗೌಡರು ಫರ್ಟಿಲೈಸರ್ ಸಚಿವರಾದ ಮಾನ್ಯ ರಾಮ್ ವಿಲಾಸ್ ಪಾಸ್ವಾನ್‌ರವರ ಹತ್ತಿರ ಮಾತನಾಡಿದ್ದಾರೆ. ಆಗ ಅವರು ದೇವೇಗೌಡರಿಗೆ ಫೋನ್ ಮಾಡಿ ಹೇಳಿದರು, ಮಾನ್ಯ ಮುಖ್ಯಮಂತ್ರಿಯವರ ಜೊತೆ ನಾನು ಮಾತನಾಡಿದ್ದೇನೆ. ರಾಜ್ಯದಲ್ಲಿ ಗೊಬ್ಬರದ ಕೊರತೆ ಇಲ್ಲ ಎಂದು ಮುಖ್ಯಮಂತ್ರಿಯವರು ನನಗೆ ಹೇಳಿದ್ದಾರೆಂದು ಅವರು ತಿಳಿಸಿರುತ್ತಾರೆ. ಇದನ್ನು ನಾನು ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ. ಅದಲ್ಲದೆಯೇ ಒಂದು ರಾಜ್ಯದ ಹಿಂದೂ ಪತ್ರಿಕೆಯಲ್ಲಿ ಈ ರಾಜ್ಯದಲ್ಲಿ ಗೊಬ್ಬರಕ್ಕೆ ಕೊರತೆ ಇಲ್ಲ ಎಂದು ಮಾನ್ಯ ಮುಖ್ಯ ಮಂತ್ರಿಯವರು ಯಾವ ಅಧಿಕಾರಿಗಳ ಕಡೆಯಿಂದ ಮಾಹಿತಿ ತೆಗೆದುಕೊಂಡು ಹೇಳಿದರೋ ನನಗೆ ಗೊತ್ತಿಲ್ಲ. ದಯಮಾಡಿ, ಏಕೆಂದರೆ ಕಳೆದ ಸಲ ನಮ್ಮ ರಾಜ್ಯದಲ್ಲಿ ಹಿಂದಿನ ಸರ್ಕಾರ ಇದ್ದಾಗ ಸುಮಾರು 70 ಸಾವಿರ ಟನ್ ಗೊಬ್ಬರ ಸ್ಟಾಕ್‌ನಲ್ಲಿತ್ತು. ಈಗ ಎಷ್ಟು ಸ್ಟಾಕ್ ಇದೆಯೋ ಅವರನ್ನೇ ಕೇಳಿ. ಏಕೆಂದರೆ ನಾನು ಅವರ ಮೇಲೆ ಆಪಾದನೆ ಮಾಡುತ್ತಿಲ್ಲ. ಅವರು ಬಂದು ಇನ್ನೂ ಐದು ದಿವಸವಾಗಿದೆ. ಆದರೆ, ಪ್ರಧಾನ ಮಂತ್ರಿಗಳ ಹತ್ತಿರ ಮಾತನಾಡಿ ಇದನ್ನೆಲ್ಲಾ ಸರಿಪಡಿಸುತ್ತೇನೆಂದು ಹೇಳಿದ್ದೀರಲ್ಲ. ಆದರೆ ಪರ್ಟಿಲೈಸರ್ಸ್ ಸಚಿವರೇ ಮುಖ್ಯಮಂತ್ರಿಯವರ ಗಮನಕ್ಕೆ ತಂದಾಗ ಈ ರಾಜ್ಯದಲ್ಲಿ ಗೊಬ್ಬರದ ಕೊರತೆ ಇಲ್ಲಾ ಎಂದು ನೀವು ಹೇಳಿರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ದಯಮಾಡಿ ಕೂಡಲೇ ಇದನ್ನು ಸರಿಪಡಿಸಿ ಎಂದು ಹೇಳುತ್ತೇನೆ.

ಶ್ರೀ ಬಂಡೆಪ್ಪ ಕಾಶಂಪೂರ್ : ಮಾನ್ಯ ಅಧ್ಯಕ್ಷರೇ..

ಅಧ್ಯಕ್ಷರೆ : ತಾವು ದಯಮಾಡಿ ಕುಳಿತುಕೊಳ್ಳಿ. ಅವರು ಉತ್ತರವನ್ನು ಮುಗಿಸಲಿ. ಅವರು ಉತ್ತರ ಕೊಟ್ಟ ಮೇಲೆ ಹೇಳಿ.

ಶ್ರೀ ಹೆಚ್. ಸಿ. ಬಾಲಕೃಷ್ಣ: ಅವರು ಅವರ ಅನುಭವವನ್ನು ಹೇಳುತ್ತಿದ್ದಾರೆ. ವಿರೋಧ ಪಕ್ಷದದವರಿಗೆ ಅವಕಾಶ ಕೊಡಿ.

ಅಧ್ಯಕ್ಷರು: ಮುಖ್ಯಮಂತ್ರಿಯವರು ಉತ್ತರ ಕೊಟ್ಟಮೇಲೆ ಹೇಳಿ. ಅನಂತರ ಮತ್ತೆ ಏನಾದರು ಕೇಳುವುದಿದ್ದರೆ ಕೇಳಿ.

ಶ್ರೀ ಬಂಡೆಪ್ಪ ಕಾಶಂಪೂರ್ : ನಾನು ಹಿಂದಿನ ಮಂತ್ರಿ ಮಂಡಲದಲ್ಲಿ ಕೃಷಿ ಸಚಿವನಾಗಿದ್ದೆ. ಒಂದೇ ಒಂದು ನಿಮಿಷ ನಾನು ಹೇಳಿಬಿಡುತ್ತೇನೆ. ಹೋದ ವರ್ಷವೇ ನಾನು ಆ ಇಲಾಖೆಯ ಮಂತ್ರಿಯಾದಾಗ ಕೇಂದ್ರ ಸರ್ಕಾರದಿಂದ ಒಂದು ನಿರ್ದೇಶನ ಬಂದಿದ್ದು ಮುಂದಿನ ದಿನಗಳಲ್ಲಿ ಡಿ. ಎ. ಪಿ. ಆಗಲಿ ಬೇರೆಯದ್ದಾಗಲಿ ಉತ್ಪಾದನೆ ಕಡಿಮೆಯಾಗುತ್ತಿದೆ. ಆದ್ದರಿಂದ ರಾಜ್ಯ ಸರ್ಕಾರಗಳು ತಮ್ಮ ವ್ಯವಸ್ಥೆಯನ್ನು ತಾವು ಮಾಡಿಕೊಳ್ಳಬೇಕು ಎಂಬ ನಿರ್ದೇಶನವನ್ನು ಕೊಟ್ಟಿದ್ದರು. ಅದಕೋಸ್ಕರ ಘನತೆವೆತ್ತ ರಾಜ್ಯಪಾಲರ ಆಡಳಿತದಲ್ಲಿ ಈ ಕೆಲಸ ಮಾಡಬೇಕಾಗಿತ್ತು.

(ಗೊಂದಲ)

ಮಾನ್ಯ ಮುಖ್ಯಮಂತ್ರಿಯವರು ಬಂದು 8 ದಿವಸವಾಗಿದೆ. ನಾನು ಪೇಪರ್ ಟಿ. ವಿ. ಯನ್ನೆಲ್ಲಾ ನೋಡುತ್ತಿದ್ದೆ. ರೈತರ ಪ್ರತಿಭಟನೆ ಎಲ್ಲಾ ಕಡೆ ನಡೆಯುತ್ತಿತ್ತು. ಅವರು ಪ್ರಣಾಳಿಕೆಯಲ್ಲಿಯೂ ಹೇಳಿದ್ದರು. ಗೊಬ್ಬರದ ಸಲುವಾಗಿ 500 ಕೋಟಿ ರೂಪಾಯಿಯನ್ನು ಆವರ್ಥ ನಿಧಿ ಇಡುತ್ತೇವೆಂದು. ಅವತ್ತೇ 200 ಕೋಟಿ ರೂಪಾಯಿಯ ದಾಸ್ತಾನನ್ನು ಖರೀದಿ ಮಾಡಬೇಕಾಗಿತ್ತು. ಆ ರೀತಿಯ ಪರಿಸ್ಥಿತಿ ಇದೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಯವರು ಈಗಲಾದರು immediate ಆಗಿ ಕೇಂದ್ರ ಸರ್ಕಾರದ ಮೇಲೆ ಅವಲಂಬಿಸದೆ ರಾಜ್ಯ ಸರ್ಕಾರವೇ ಒಂದು agency ಯನ್ನು ನಿಗದಿ ಮಾಡಿ ಬಹಳಷ್ಟನ್ನು ತಮ್ಮದೇ ಆದಂಥ ಮೂಲದಿಂದ import ಮಾಡಿಕೊಳ್ಳುವುದನ್ನು ಮಾಡಬೇಕು. ಮತ್ತು ಏನು 50 percent ಸಬ್ಸಿಡಿಯನ್ನು ಇಳಿಸಿದ್ದಾರೆ. ಹಿಂದಿನ ಸರ್ಕಾರದಲ್ಲಿ ಇವರು ಹಣಕಾಸು ಸಚಿವರಾಗಿದ್ದರು. ಆಗ ಇದು 75 ಪರ್‌ಸೆಂಟ್ ಇತ್ತು. ತಾವು ರೈತರ ಪರವಾಗಿ ಇದ್ದೀರಿ, ಈಗಲೂ ಇದನ್ನು 50 ರಿಂದ 75 ಪರ್‌ಸೆಂಟ್‌ಗೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಸಿದ್ದರಾಜು : ಮಾನ್ಯ ಅಧ್ಯಕ್ಷರೆ, ರಾಸಾಯನಿಕ ಗೊಬ್ಬರವೇನಿದೆ ಇದು ವಿಷ. ಇದರಿಂದ ಭೂಮಿ ಬಂಜರಾಗುತ್ತಿದೆ. ಇದರಿಂದ ಇನ್ನು 8– 10 ವರ್ಷಗಳಲ್ಲಿ ಗರಿಕೆ ಸಹ ಬೆಳೆಯುವುದಿಲ್ಲ. ಸುಭಾಷ್‌ಪಾಳೇಕಾರ್

ರವರ ರೈತರ ಕೃಷಿ ಪದ್ಧತಿ ಬಗೆಗಿನ ವರದಿಯಲ್ಲಿ ನಮ್ಮ ಭಾರತ ಮೂಲದ ಗೋಮೂತ್ರ ಏನಿದೆಯೋ ಅದರಲ್ಲಿ ಬೇಸಾಯ ಮಾಡುವಂಥ ವ್ಯವಸ್ಥೆಯನ್ನು ಮಾಡಿ. ತಾವು ಸುಭಾಷ್ ಪಾಳೆಕರ್‌ರವರನ್ನು ಕರೆದು ಅವರೊಂದಿಗೆ ಚರ್ಚೆ ಮಾಡಿ ಅವರು ರಾಜ್ಯದಲ್ಲಿ ಪ್ರವಾಸ ಮಾಡುವಂತೆ ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರ ಕಳಕಳಿ ನನಗೆ ಅರ್ಥವಾಗುತ್ತದೆ. ನಾಳೆಯಿಂದ ನಮ್ಮ ನಮ್ಮ ಕ್ಷೇತ್ರಕ್ಕೆ ಹೋದಾಗ ಯಾವ ಸಾಮಾನ್ಯ ರೈತ ಮಳೆ ಬಿದ್ದು ಭೂಮಿ ಹದ ಮಾಡಿ ಬಿತ್ತನೆ ಸಮಯದಲ್ಲಿ ಬೀಜ, ರಸಗೊಬ್ಬರ ಸಿಗಲಿಲ್ಲವೆಂದು ಹೇಳಿದರೆ ಅವನು ಯಾವ ಪರಿಸ್ಥಿತಿಗೆ ಬರುತ್ತಾನೆ ಎಂಬುದು ರೈತರ ಮಕ್ಕಳಾದ ನಮಗೆಲ್ಲಾ ಗೊತ್ತಿದೆ. ದುರ್ದೈವ ನಾನು ಇದಕ್ಕೆ ಯಾರನ್ನು ಬೆಟ್ಟು ಮಾಡಿ ತೋರಿಸುವುದಿಲ್ಲ. ರಾಷ್ಟ್ರಪತಿಯವರ ಆಳ್ವಿಕೆಯ ಸಂದರ್ಭದಲ್ಲಿ ಯಾವ ಮುಂದಾಲೋಚನೆ ಮಾಡಿ ಅಧಿಕಾರಿಗಳು ಪೂರ್ವಭಾವಿ ಸಿದ್ಧರೆಯನ್ನು ವಾಡಿಕೊಳ್ಳಬೇಕಾಗಿತ್ತೋ ಕೆಲವು ಕಡೆ ಕೊರತೆಗಳಾಗಿವೆ. ಎನ್ನುವುದನ್ನು ಅವರ ಗಮನಕ್ಕೆ ತಂದು ಸರಿಪಡಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇನೆ. ಎರಡನೆಯದು. ಕೊನೆಯ ಪಕ್ಷ ನಾನು ಪಕ್ಷ ಬೇದ ಮರೆತು ಒಂದು ಮಾತನ್ನು ಹೇಳುತ್ತಿದ್ದೇನೆ. ನಾನು ಪ್ರಧಾನಿಯವರ ಹತ್ತಿರ ಕರ್‌ಟೆಸಿಗಾಗಿ ಗೌರವವನ್ನು ಸೂಚಿಸಿ ಮಾತನಾಡಿಸಿ ಬರಲು ಹೋಗಿದ್ದು. ಆ ಸಂದರ್ಭದಲ್ಲಿ ರಾಜ್ಯದಲ್ಲಿ ಮಳೆ ಬಿದ್ದು ರೈತರು ಸಂತಸದಿಂದ ಇರುವಂಥದ್ದು, ರಸಗೊಬ್ಬರಕ್ಕೆ ಪರದಾಡುತ್ತಿದ್ದ ಪರಿಸ್ಥಿತಿಯನ್ನು ಅವರ ಗಮನಕ್ಕೆ ತಂದೆ. ನಿನ್ನೆ ಮೊನ್ನೆ ರೈತರ ಕೆಲಸ ಬಿಟ್ಟು ಬೇರೆ ಏನೂ ಕೆಲಸ ಮಾಡಬಾರದು ಎಂದು ಜಿಲ್ಲಾಧಿಕಾರಿಗಳಿಗೆ, ಸಿ. ಇ. ಒ. ಗಳಿಗೆ ಸೂಚನೆ ಕೊಟ್ಟಿದ್ದೇನೆ. ಎಲ್ಲಾದರೂ ರಸಗೊಬ್ಬರದ ವಿತರಣೆಯಲ್ಲಿ ವ್ಯತ್ಯಾಸಗಳಾದರೆ, ಎಲ್ಲಾದರೂ ದಾಸ್ತಾನು ಮಾಡಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವುದು ಕಂಡುಬಂದರೆ ಉಗ್ರವಾದ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿರುವುದಷ್ಟೇ ಅಲ್ಲ ಉಗ್ರವಾದ ಕ್ರಮವನ್ನೂ ತೆಗೆದುಕೊಂಡಿದ್ದೇವೆ.

ಮೂರನೆಯದು ನಮ್ಮ ಗೌರವಾನ್ವಿತ ಸದಸ್ಯರು ಒಪ್ಪುತ್ತೀರಿ ಎಂದುಕೊಂಡಿದ್ದೇನೆ. ಅವರು ಬಂದರೆ ಏನಾಗುತ್ತದೆ ಎಂದು ದಯಮಾಡಿ ಯೋಚನೆ ಮಾಡದೆಯೇ ಪ್ರಧಾನಿಯವರ ಜೊತೆ ನಾನು ಮಾತನಾಡಿ ನಮ್ಮ ಮುಖ್ಯ ಕಾರ್ಯದರ್ಶಿ ಉನ್ನತಾಧಿಕಾರಿಗಳು ಅಲ್ಲಿರುವಂಥ ಕಾರ್ಯದರ್ಶಿಗಳ ಜೊತೆ ಕೃಷಿ ಇಲಾಖೆಯ ಅಧಿಕಾರಿಗಳ ಜೊತೆ ಮಾತನಾಡಿದ ಮೇಲೆ ಕೇಂದ್ರ ರಸ

ಗೊಬ್ಬರ ಇಲಾಖೆಯ ಕಾರ್ಯದರ್ಶಿಯವರೇ ಬೇರೆ ಎಲ್ಲಾ ಕೆಲಸವನ್ನು ಬದಿ ಗೊತ್ತಿ ನಾಳೆ ಮಧ್ಯಾಹ್ನ ಇಲ್ಲಿಗೆ ಬರುತ್ತಿದ್ದಾರೆ. ಅವರ ಜೊತೆ ನಮ್ಮ ಪರಿಸ್ಥಿತಿ ಯನ್ನು ತಿಳಿಸುತ್ತಿದ್ದೇವೆ. ಏಕೆಂದರೆ ನಮ್ಮ ಗೌರವಾನ್ವಿತ ಸದಸ್ಯರಿಗೆ ಗೊತ್ತಿದೆ. ರಸಗೊಬ್ಬರದ ಕಾರ್ಖಾನೆಗಳಿಗೆ ಕೇಂದ್ರ ಸರ್ಕಾರ ಸುಮಾರು 4 ತಿಂಗಳಿನಿಂದ 10 ಸಾವಿರ ಕೋಟಿಗೂ ಹೆಚ್ಚು ಸಹಾಯಧನವನ್ನು ಬಿಡುಗಡೆ ಮಾಡಿಲ್ಲ.

ಶೀ ಹೆಚ್. ಡಿ. ರೇವಣ್ಣ : ಆ ರೀತಿ

ಅಧ್ಯಕ್ಷರು : ಮಾನ್ಯ ರೇವಣ್ಣನವರೇ, ಮಾನ್ಯ ಮುಖ್ಯಮಂತ್ರಿಯವರು ಮಾತನಾಡುತ್ತಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ರೇವಣ್ಣನವರೆ, ನಾನು ಮಾತನಾಡುತ್ತಿದ್ದೇನೆ. ನಾನು ನಿಂತಾಗ ದಯವಿಟ್ಟು ನಮ್ಮ ಸದಸ್ಯರು ಯಾರೂ ಮಾತನಾಡುವ ಅಗತ್ಯ ಇಲ್ಲ. 10 ಸಾವಿರ ಕೋಟಿ ರೂಪಾಯಿ ಸಹಾಯಧನ ಬಂದಿಲ್ಲ. ಆದ್ದರಿಂದ ಮುಂದಿನ ತಿಂಗಳ15 ರಿಂದ ಮಂಗಳೂರು ಫರ್ಟಿಲೈಸರ್ಸ್‌ನವರು ನಾವು ಗೊಬ್ಬರದ ಉತ್ಪಾದನೆಯನ್ನು ನಿಲ್ಲಿಸುತ್ತಿದ್ದೇವೆ. ನಮ್ಮ ಹತ್ತಿರ ಇರುವ ಬಂಡವಾಳ ಖಾಲಿಯಾಗಿದೆಯೆಂದು ಹೇಳಿದರು. ನೀವು ನಿಲ್ಲಿಸ ಕೂಡದು, ಕೇಂದ್ರ ಸರ್ಕಾರ ನಮ್ಮ ನೆರವಿಗೆ ಬರುತ್ತದೆ ಎಂದು ನನಗೆ ವಿಶ್ವಾಸ ಇದೆ. ಆ ಬಗ್ಗೆ ಕೂಡ ಕೇಂದ್ರ ಸರ್ಕಾರದ ಗಮನಕ್ಕೆ ತರುತ್ತೇವೆ ಎಂಬ ಮಾತನ್ನು ಹೇಳಿದ್ದೇನೆ. ಇಲ್ಲಿರುವ ಗೌರವಾನ್ವಿತ ಸದಸ್ಯರಿಗೆ ಗೊತ್ತಿದೆ. ರಸ ಗೊಬ್ಬರದ ಉತ್ಪಾದನೆ, ಉತ್ಪಾದಕರಿಗೆ ಸಹಾಯಧನ ನೀಡುವುದು, ರಾಜ್ಯಗಳಿಗೆ ಸರಬರಾಜು ಮಾಡುವಂಥದ್ದು ಕೇಂದ್ರ ಸರ್ಕಾರದ ಕರ್ತವ್ಯ. ಅದು ರಾಜ್ಯದಲ್ಲಿ. ಈ ಹಿನ್ನೆಲೆಯಲ್ಲಿ ನಾನು ಇವತ್ತು ಕೂಡ ಮಧ್ಯ ಪ್ರದೇಶದ ಮುಖ್ಯ ಮಂತ್ರಿಗಳ ಜೊತೆ ಮಾತನಾಡಿದೆ. ಸೋಯಾಬಿನ್ ನಮ್ಮಲ್ಲಿ ದೊಡ್ಡ ಪ್ರಮಾಣದಲ್ಲಿ ಬಿತ್ತನೆಯಾಗುತ್ತಿದೆ, ತತ್‌ಕ್ಷಣ ನಮಗೆ ಬಿತ್ತನೆ ಬೀಜ ಬೇಕು, ಕಳುಹಿಸಿಕೊಡಿ ಎಂದು ವಿನಂತಿ ಮಾಡಿದ್ದೇನೆ. ಆ ಕಡೆ ಸಹ ಗಮನಕೊಡುತ್ತಿದ್ದೇನೆ. ನಾಲ್ಕನೆ ಯದು, ನಿಮ್ಮೆಲ್ಲರನ್ನೂ ಕರೆದುಕೊಂಡು ಬಹುಶಃ ಹದಬಿದ್ದಾಗ, ಬಿತ್ತನೆ ಕೆಲಸ ಪ್ರಾರಂಭವಾದಾಗ ರಸಗೊಬ್ಬರದ ಕೊರತೆಯಾದರೆ ನಾನು ಪ್ರತಿ ಪಕ್ಷದ ಎಲ್ಲಾ ನಾಯಕರನ್ನು ಕರೆದುಕೊಂಡು ಪ್ರಧಾನಿಯವರ ಹತ್ತಿರ, ಕೇಂದ್ರ ಸಚಿವರ ಹತ್ತಿರ ಇನ್ನೆರಡು ದಿವಸದಲ್ಲಿ ನಿಯೋಗವನ್ನು ಕರೆದುಕೊಂಡು ಹೋಗಲು ಸಿದ್ಧನಿದ್ದೇನೆ. ನನ್ನ ಕಡೆಯಿಂದ ಏನೇನು ಸಾಧ್ಯ ಇದೆಯೋ, ಅದೆಲ್ಲವನ್ನು ಮಾಡುತ್ತೇನೆ ರೈತನ

ಮಗ ನಾನು ಒಬ್ಬನೆ ಅಲ್ಲಿ. ಇಲ್ಲಿ ಇರುವವರೆಲ್ಲಾ ನಮ್ಮ ರೈತರ ಮಕ್ಕಳೆ. ಆದ್ದರಿಂದ ಏನೇನು ತುರ್ತು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳು ತ್ತೇನೆ. ನಾನು ನಿಮ್ಮಲ್ಲಿ ಹೇಳುವುದೇನೆಂದರೆ ಈ ಮನೆಯಲ್ಲಿ ಈ ಚರ್ಚೆಯು ಮೆಸೇಜ್, ಏನೆಂದರೆ ಏನೋ ರಸಗೊಬ್ಬರದ ಕೊರತೆ ಇದೆ ಎನ್ನುವಂಥ ಸುದ್ಧಿ ಹೋದರೆ ರೈತರು ಆತಂಕಕ್ಕೆ ಒಳಗಾಗುತ್ತಾರೆ ಮತ್ತು ಮುಂದೆ ಎರಡು ತಿಂಗಳಿಗೆ ಬೇಕಾದ ಗೊಬ್ಬರವನ್ನು ಈಗಲೇ ಸ್ಟಾಕ್ ಮಾಡಲು ಪ್ರಾರಂಭ ಮಾಡುತ್ತಾರೆ. ಆದ್ದರಿಂದ ನಾನು ರೈತರಲ್ಲೂ ವಿನಂತಿ ಮಾಡಿದ್ದೇನೆ, ಈಗ ಬಿತ್ತನೆಗೆ ಅಗತ್ಯ ಇರುವಂಥ ಗೊಬ್ಬರಗಳನ್ನು ಖರೀದಿ ಮಾಡಿ, ಎಷ್ಟೇ ಕಷ್ಟವಾದರು ಅಗತ್ಯವಿರುವ ಗೊಬ್ಬರವನ್ನು ಕೊಡಲು ಏನೇನು ಸಾಧ್ಯ ಇದೆಯೋ ಅವ್ಯವಸ್ಥೆಯನ್ನು ಮಾಡುತ್ತೇವೆ. ಅದಕ್ಕೆ ಟಾಪ್ ಪ್ರಯಾರಿಟಿಯನ್ನು ಕೊಡುತ್ತೇವೆ ಎಂಬ ಭರವಸೆಯನ್ನು ಈ ಮನೆಯ ಮೂಲಕ ಜನರಿಗೆ ಕೊಡುತ್ತಿದ್ದೇನೆ. ಬಿತ್ತನೆ ಬೀಜದ ಬಗ್ಗೆ ಕೊರತೆ ಇಲ್ಲ. ಈಗಾಗಲೇ ರಾಷ್ಟ್ರಪತಿಗಳ ಆಳ್ವಿಕೆಯ ಸಂದರ್ಭದಲ್ಲಿ ನಾವೇನು ಬಿತ್ತನೆ ಬೀಜಕ್ಕೆ ಸಬ್ಸಿಡಿ 5 ಎಕರೆವರೆಗೆ ಕೊಟ್ಟಿದ್ದೆವೋ ಅದನ್ನು ಅವರು ಎರಡು ಎಕರೆಗೆ ಮಾಡಿದ್ದರು. 2 ಗಂಟೆಯೊಳಗೆ 5 ಎಕರೆ ಇರುವ ಎಲ್ಲಾ ಸಣ್ಣ ರೈತರಿಗೂ ಸಬ್ಸಿಡಿ ರೂಪದಲ್ಲಿ ಬಿತ್ತನೆ ಬೀಜವನ್ನು ಕೊಡಬೇಕೆಂದು ಈಗಾಗಲೆ ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದೇವೆ.

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಆ ರೀತಿ..

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಯವರು ಪೂರ್ಣ ಮಾಡಲಿ ರೇವಣ್ಣನವರೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಒಂದು ನಿಮಿಷ.

ಶ್ರೀ ಪ್ರಕಾಶ್ ಹುಕ್ಕೇರಿ : ಗ್ರಾಮ ಮಟ್ಟದಲ್ಲಿ ಗ್ರಾಮಸೇವಾ ಸಹಕಾರಿ ಸಂಘಗಳ ಮೂಲಕ ಅದನ್ನು ಹಂಚುವ ವ್ಯವಸ್ಥೆಯನ್ನು ಮಾಡಿ. ತಾಲ್ಲೂಕು ಮಟ್ಟದಲ್ಲಿ ಹಂಚುವುದರಿಂದ ರೈತರು 12 ತಾಸು ತಾಲ್ಲೂಕು ಕೇಂದ್ರಕ್ಕೆ ಬಂದು ಇರ ಬೇಕಾಗುತ್ತದೆ. ಆದ್ದರಿಂದ ಬಿತ್ತನೆ ಬೀಜವನ್ನು ಗ್ರಾಮಸೇವಾ ಸಹಕಾರಿ ಸಂಘದ ಮೂಲಕ ಹಂಚುವ ವ್ಯವಸ್ಥೆಯನ್ನು ಮಾಡಬೇಕು. ಆ ರೀತಿ ಮಾಡಿದರೆ ಬಹಳ ಅನುಕೂಲವಾಗುತ್ತದೆ.

ಶ್ರೀ. ಬಿ. ಎಸ್. ಯಡಿಯೂರಪ್ಪ : ಅದೊ ಒಳ್ಳೆಯ ಸಲಹೆ ಆಯಿತು.

ಶ್ರೀ ಬಂಡೆಪ್ಪ ಕಾಶಂಪೂರ್ : ಆ ರೀತಿ ಮಾಡಿದರೆ ಬಹಳ ಸಂತೋಷ.

ಅದೇ ರೀತಿ 50 ಪರ್ಸೆಂಟ್ ಇರುವುದನ್ನು 75 ಪರ್ಸೆಂಟ್ ಮಾಡಿ ಸಾಕು.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಬಂಡೆಪ್ಪ ಕಾಶಂಪೂರ್‌ರವರೆ, ತಾವು ಸಚಿವರಾಗಿದ್ದಿರಿ. ತಮಗೆ ಅನುಭವ ಇದೆ. ನಾನು ನಿಮ್ಮನ್ನು ಕರೆಯುತ್ತೇನೆ. ನೀವು ಸಲಹೆಗಳನ್ನು ಕೊಡಿ. ನೀವು ನಿಮ್ಮ ಕ್ಷೇತ್ರಕ್ಕೆ ನಾಳೆ ಹೋದಾಗ ಎಲ್ಲೆಲ್ಲಿ ಏನೇನು ಕೊರತೆ ಇದೆ ಆ ಬಗ್ಗೆ ತತ್‌ಕ್ಷಣ ನಮ್ಮ ಅಧಿಕಾರಿಗಳ ಗಮನಕ್ಕೆ ಕೊಡಿ. ಜಿಲ್ಲಾಧಿಕಾರಿಗಳಿಗೆ ಮತ್ತು ಸಿ. ಇ. ಓ. ಗಳಿಗೆ ಸೂಚನೆ ಕೊಟ್ಟಿದ್ದೇನೆ. ರಸಗೊಬ್ಬರ, ಬಿತ್ತನೆ ಬೀಜ ರೈತಪರವಾದ ಕೆಲಸಗಳನ್ನು ಬಿಟ್ಟು ಬಾಕಿ ಎಲ್ಲಾ ಕೆಲಸವನನು ಬಂದ್ ಮಾಡಿ, ಯಾವ ಒಬ್ಬ ಅಧಿಕಾರಿ ರಜೆ ತೆಗೆದುಕೊಂಡು ಬೆಂಗಳೂರಿನ ಕಡೆ ತಿರುಗಿನೋಡಲು ನಾನು ಬಿಡುವುದಿಲ್ಲ. ಆ ರೀತಿ ಮಾಡಿದರೆ ಕ್ರಮ ತೆಗೆದುಕೊಳ್ಳಬೇಕೆಂದು ಸೂಚನೆ ಕೊಟ್ಟಿದ್ದೇನೆ. ಎಲ್ಲೆಲ್ಲಿ ಏನೇನು ಕೊರತೆ ಇದೆಯೆಂದು ನಿಮಗೆ ಅನ್ನಿಸುತ್ತದೋ ಅದನ್ನು ನಮ್ಮ ಗಮನಕ್ಕೆ ತರುವ ಪ್ರಯತ್ನ ಮಾಡಿ. ಅದಕ್ಕೆ ಟಾಪ್ ಪ್ರೆಯಾರಿಟಿ ಕೊಟ್ಟು ನಾವೆಲ್ಲಾ ಒಟ್ಟಾಗಿ ಸೇರಿ ಆ ಸಮಸ್ಯೆಯನ್ನು ಬಗೆಹರಿಸಿ, ರೈತ ನೆಮ್ಮದಿಯಿಂದ ಬಿತ್ತನೆ ಮಾಡಬೇಕು. ಅವನು ಒಳ್ಳೆಯ ಬೆಳೆ ಬೆಳೆಯಬೇಕು. ಅದಕ್ಕಾಗಿ ಕೊನೆಯ ಪಕ್ಷ ಹಿಂದೆ ಸಮ್ಮಿಶ್ರ ಸರ್ಕಾರ ಎಂದು ಇತ್ತು. ಈಗ ನಿಮ್ಮ ದೃಷ್ಟಿಯಿಂದ ಏನಾದರೂ ಕರೆದುಕೊಳ್ಳಿ. ಆದರೆ ಈ ಹೊಸ ಸರ್ಕಾರ ಬಂದ ಮೇಲೆ ಆ ವರುಣ ದೇವನ ಕೃಪೆಯಿಂದ ಒಳ್ಳೆಯ ಮಳೆಯಾಗಿದೆ. ಜನರು ಸಮೃದ್ಧಿಯಿಂದ ಇನ್ನೂ ಸಂತೃಪ್ತಿಯಿಂದ ಇರುವುದಾದರೆ ಇಲ್ಲಿರುವ 224 ಜನ ಸದಸ್ಯರಿಗೂ ಕೀರ್ತಿ ಬರುತ್ತದೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಆಡಳಿತ ಪಕ್ಷ ವಿರೋಧ ಪಕ್ಷ ಎರಡೂ ಒಂದೇ ಇದು ಸರ್ವೆಸಾಮಾನ್ಯವಾದದ್ದು, ಶಾಶ್ವತವಾಗಿ ಯಾರೂ ಒಂದೇ ಕಡೆ ಕುಳಿತುಕೊಳ್ಳುವುದಿಲ್ಲ. ಮತದಾರರ ತೀರ್ಮಾನದಂತೆ ನಾವು ಈಗ ಇಲ್ಲಿ ಕುಳಿತಿದ್ದೇವೆ.

ಶ್ರೀ ಎಂ. ಎಸ್. ಸಿದ್ಧರಾಜು :– ಮಾನ್ಯ ಅಧ್ಯಕ್ಷರೆ..

ಅಧ್ಯಕ್ಷರು: ತಾವು ದಯಮಾಡಿ ಕುಳಿತುಕೊಳ್ಳಿ. ಅವರು ಇನ್ನೂ ಉತ್ತರವನ್ನು ಪೂರ್ಣ ಮಾಡಿಲ್ಲ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ. ಎಸ್. ಸಿದ್ಧರಾಜು : ಮಾನ್ಯ ಮುಖ್ಯಮಂತ್ರಿಗಳೇ, ರೈತರ ಕೃಷಿ ಪದ್ಧತಿ ಬಗ್ಗೆ ಉತ್ತರ ಕೊಡಬೇಕು.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಅದರ ಬಗ್ಗೆ ಆಮೇಲೆ ಉತ್ತರ ಕೊಡುತ್ತಾರೆ.

ಶ್ರೀ ಎಂ. ಎಸ್. ಸಿದ್ಧರಾಜು : ಸುಭಾಷ್ ಪಾಳೇಕಾರ್‌ರವರ ವರದಿಯ ಬಗ್ಗೆ ಅವರು ಉತ್ತರವನ್ನು ಕೊಡಲಿ.

ಅಧ್ಯಕ್ಷರು : ಮಾನ್ಯ ಮುಖ್ಯ ಮಂತ್ರಿಯವರು ಉತ್ತರ ಕೊಡುವಾಗ ಮಧ್ಯದಲ್ಲಿ ಯಾರೂ ಎದ್ದು ನಿಂತು ಮಾತನಾಡಬಾರದು.

ಶ್ರೀ. ಬಿ. ಎಸ್. ಯಡಿಯೂರಪ್ಪ: ನಾನು ಯಾವುದೇ ವಿವರಕ್ಕೆ ಹೋಗುವುದಿಲ್ಲ. 4.6.2008 ನಿನ್ನೆ ದಿವಸ ಪ್ರಧಾನ ಮಂತ್ರಿಯವರ ಹತ್ತಿರ ನಾನು ಏನು ಮಾತನಾಡಿದೆ, ಮಾತನಾಡಿದ ಮೇಲೆ ಇಲ್ಲಿ ಕಾಂಪ್ಲೆಕ್ಸ್ ಗೊಬ್ಬರ ಬೇರೆ ಬೇರೆ ರಸಗೊಬ್ಬರದ ಸಮಸ್ಯೇಯೇನಿದೆ ಅದಕ್ಕೆ ಯಾವ ರೀತಿಯ ನೆರವನ್ನು ನಾವು ನಿರೀಕ್ಷೆ ಮಾಡುತ್ತಿದ್ದೇವೆ ಎಂಬ ಬಗ್ಗೆ ಪ್ರಧಾನ ಮಂತ್ರಿಯವರಿಗೆ ಪತ್ರವನ್ನು ಬರೆದಿದ್ದೇನೆ. ಮುಖ್ಯ ಕಾರ್ಯದರ್ಶಿಯವರು ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ಮಾತನಾಡುತ್ತಿದ್ದಾರೆ. ಆ ಕಡೆ ಗಮನವನ್ನು ನಾನು ಕೊಡುತ್ತಿದ್ದೇನೆ. ತಾವೆಲ್ಲಾ ಸಹಕಾರವನ್ನು ಕೊಡಬೇಕು. ಎರಡನೆಯದು ತಾವು ಸಂಖ್ಯೆಗಳ ಬಗ್ಗೆ ಹೇಳಿದಿರಿ. ಪೆಟ್ರೋಲ್, ಡೀಸೆಲ್ ಬಗ್ಗೆ ತಾವು ಪ್ರಸ್ತಾಪ ಮಾಡಿದ್ದೀರಿ. ನಾನು ಒಂದು ಮಾತನ್ನು ಹೇಳುತ್ತೇನೆ. ವಿಶ್ವಾಸ ಮತ ಸಾಬೀತಾದ ಮೇಲೆ ಮಂತ್ರಿ ಮಂಡಲದ ಸಭೆಯಲ್ಲಿ ನಾವು ಕುಳಿತು ಇದರ ಬಗ್ಗೆ ಸಮಾಲೋಚನೆ ಮಾಡಬೇಕೆಂದು ನಿರ್ಧಾರ ಮಾಡಿದ್ದೇನೆ ಇವತ್ತು ಬೇರೆ ಬೇರೆ ರಾಜ್ಯಗಳು ಮತ್ತು ನಮ್ಮ ರಾಜ್ಯದಲ್ಲಿರುವ ಸ್ಥಿತಿಗತಿಯನ್ನು ನೋಡಿಕೊಂಡು ಪೆಟ್ರೋಲ್, ಡೀಸೆಲ್ ಬಗ್ಗೆ ಯಾವ ಪ್ರಮಾಣದಲ್ಲಿ ಕಡಿಮೆ ಮಾಡಬೇಕು ಎಂಬ ಬಗ್ಗೆ ಚಿಂತನೆಯನ್ನು ಮಾಡುತ್ತಿದ್ದೇನೆ. ಸದ್ಯದಲ್ಲೆ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತಿದ್ದೇನೆ. ಮೂರನೆಯದು ತಾವು ಒಂದು ಚರ್ಚೆಯನ್ನು ಮಾಡಿದಿರಿ, 110 ಸ್ಥಾನಗಳಿದೆ, ನಿಮಗೆಲ್ಲಿದೆ ಬಹುಮತ ಎಂದು ತಮಗೆ ಗೊತ್ತಿದೆ ಹಿಂದೆ ಈ ರಾಜ್ಯದಲ್ಲಿ ಜನ ಕಾಂಗ್ರೆಸ್ ಬೇಡ ಎಂದು ಬಿ. ಜೆ. ಪಿ. ಗೆ Number one place ನಲ್ಲಿ ಬಂದಾಗ 65 ಸ್ಥಾನ ಇದ್ದಂಥ ನೀವು ಕಾಂಗ್ರೆಸ್‌ನವರು ಸಮ್ಮಿಶ್ರ ಸರ್ಕಾರ ಮಾಡಿದಿರಿ. ಆಗ ನಾವು ಟೀಕೆ ಮಾಡಲಿಲ್ಲ.

ಶ್ರೀ ಸಿದ್ಧರಾಮಯ್ಯ : ಬಹಳ ಟೀಕೆ ಮಾಡಿದಿರಿ.

ಶ್ರೀ. ಬಿ. ಎಸ್. ಯಡಿಯೂರಪ್ಪ : ಇವತ್ತು ಕೇಂದ್ರ ಸರ್ಕಾರದಲ್ಲಿ 543 ಸಂಸತ್ ಸದಸ್ಯರಲ್ಲಿ ಕಾಂಗ್ರೆಸ್ಸಿನ ಸಂಸತ್ ಸದಸ್ಯರು 145 ಜನರಿದ್ದಾರೆ, ಇವತ್ತು ಸಮ್ಮಿಶ್ರ ಸರ್ಕಾರ ನಡೆಯುತ್ತಿದೆ. ಭಾರತೀಯ ಜನತಾ ಪಾರ್ಟಿ...

ಶ್ರೀ ಡಿ. ಕೆ. ಶಿವಕುಮಾರ್:– ನೀವು ಅದಕ್ಕೆ ಏನಾದರೂ ಒಂದು ಹೆಸರು ಕೊಟ್ಟು ಬಿಟ್ಟು ನಮ್ಮದು ಸಮ್ಮಿಶ್ರ ಸರ್ಕಾರವೆಂದು ಹೇಳಿ, ಬಿಜೆಪಿ ಸರ್ಕಾರವೆಂದು ಹೇಳಬೇಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಅಟ್ ಲೀಸ್ಟ್ ನೀವು ನಮ್ಮ ಕಾಂಗ್ರೆಸ್ಸಿನ ಸ್ನೇಹಿತರು, ಟೀಕೆ ಮಾಡುವುದಕ್ಕೆ ಮುಂಚೆ ನಾವು ಎಲ್ಲಿದ್ದೆವು, ನಾವು ಎಲ್ಲಿಗೆ ಬರುತ್ತಿದ್ದೇವೆಂದು ಆತ್ಮಾವಲೋಕನ ಮಾಡಿಕೊಳ್ಳಬೇಕಲ್ಲವೆ?

ಶ್ರೀ ಸಿದ್ಧರಾಮಯ್ಯ :– ಯಡಿಯೂರಪ್ಪನವರೇ ಮಧ್ಯದಲ್ಲಿ ನೀವು ಇಂಟರ್ ಫಿಯರ್ ಆಗುವುದು ಬೇಡ. ನೀವೂ ಆರು ವರ್ಷ ಅಧಿಕಾರದಲ್ಲಿದ್ದು, India is shining ಎಂದು ಎಲ್ಲಿಗೆ ಬಂದಿರಿ ಎಂಬುದು ದೇಶದ ಜನರಿಗೆ ಗೊತ್ತಿಲ್ಲವೇ?

ಶ್ರೀ ಬಿ. ಎಸ್. ಯಡಿಯೂರಪ್ಪ : ಎಲ್ಲವೂ ಗೊತ್ತಿದೆ. ಅದಕ್ಕೆ ನಾನು ರಾಜಕಾರಣ ಬೆಳೆಸಲಿಕ್ಕೆ ಹೋಗುವುದಿಲ್ಲ.

ಶ್ರೀ ಸಿದ್ಧರಾಮಯ್ಯ :– ರಾಷ್ಟ್ರ ಮಟ್ಟದಲ್ಲಿ India is shining ಎಂದು ಹೇಳಿದಿರಿ, Karnataka shining ಮಾಡಿ ನೋಡೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ : ರಾಜ್ಯಪಾಲರ ಬಾಷಣದ ಮೇಲೆ ಚರ್ಚೆ ಮಾಡಲಿಕ್ಕೆ ದಿನಾಂಕವನ್ನು ಸನ್ಮಾನ್ಯ ಅಧ್ಯಕ್ಷರು ತೀರ್ಮಾನ ಮಾಡಿದ್ದಾರೆ. ಆಗ ವ್ಯಾಪಕವಾಗಿ ಚರ್ಚೆ ಮಾಡೋಣ. BJP growth 1994 ರಲ್ಲಿ 40 ಜನ ಶಾಸಕರು, 1999 ರಲ್ಲಿ 44 ಜನ ಶಾಸಕರು. 2004 ರಲ್ಲಿ 79 ಜನ, 2008 ರಲ್ಲಿ 110 ಜನ ಶಾಸಕರು. ಆದ್ದರಿಂದ ಕ್ರಮೇಣ ಜನ ಬಿ.ಜೆ.ಪಿ ತತ್ವ, ಸಿದ್ಧಾಂತ, ನೀತಿ ಇವೆಲ್ಲವುಗಳನ್ನು ಒಪ್ಪಿಕೊಂಡು ನಮ್ಮ ಜೊತೆ ಬರುತ್ತಿದ್ದಾರೆಂದು ಹೇಳ ಬಯಸುತ್ತೇನೆ. ತಮ್ಮಲ್ಲಿ ನಾನು ವಿನಂತಿ ಮಾಡುತ್ತೇನೆ. ಇವತ್ತೇನೂ ವಿಶ್ವಾಸ ಮತವನ್ನು ಮಂಡನೆ ಮಾಡಿದ್ದೇನೆ, ನಾನು 5 ವರ್ಷ ಪೂರ್ಣ ಆಡಳಿತವನ್ನು ಮಾಡುತ್ತೇವೆಂದು ಈ ನಾಡಿನ ಜನರಿಗೆ ವಿಶ್ವಾಸದಿಂದ ಹೇಳುತ್ತೇವೆ. ಈ ವಿಶ್ವಾಸ ಮತಕ್ಕೆ ನೀವೆಲ್ಲರೂ ಸಹಕರಿಸಿ ಬೆಂಬಲ ಕೊಡಬೇಕು ಎಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ (ವಿರೋಧ ಪಕ್ಷದ ನಾಯಕರು):– ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದರು. ಸುಮಾರು 10 ಸಾವಿರ ಕೋಟಿ ರೂಪಾಯಿಗಳನ್ನು ಕೇಂದ್ರದವರು ಕೊಡಬೇಕಾಗಿತ್ತು. ಅದಕ್ಕಾಗಿ private factory, fertilizers ಗೊಬ್ಬರವನ್ನು ಸಪ್ಲೈ ಮಾಡುತ್ತಿಲ್ಲ. ಅದಕ್ಕಾಗಿ

ಇದೆಲ್ಲಾ ತಾಪತ್ರಯವಾಗಿದೆ. ಎಂದು ಹೇಳಿದರು. ಇದು ಕೇವಲ ಕರ್ನಾಟಕಕ್ಕೆ ಮಾತ್ರವಲ್ಲ. ಇಡೀ ಭಾರತ ದೇಶದಲ್ಲೆಲ್ಲಾ ಸಮಸ್ಯೆಯಾಗಿದೆ. ಆದರೆ ತಾವು ಮುತುವರ್ಜಿ ವಹಿಸಿ ಎಷ್ಟರಮಟ್ಟಿಗೆ ತೆಗೆದುಕೊಂಡು ಬರುತ್ತೀರಿ ಎಂಬ ಬಗ್ಗೆ ಸ್ಪಷ್ಟವಾಗಿ ಹೇಳಲಿಲ್ಲ. ಸೀಡ್ಸ್ ಬಗ್ಗೆ ಕೂಡ ಅದೇ ರೀತಿಯಾಗಿ ಹಾರಿಕೆ ಉತ್ತರವನ್ನು ಕೊಟ್ಟಿರಿ. ಇನ್ನೊಂದು ನಾವು 100 ಜನ ಆರಿಸಿ ಬಂದಿದ್ದೇವೆಂದು ತಾವು ಪ್ರತಿ ಸಾರಿ ಹೇಳುತ್ತಿದ್ದೀರಿ. 100 ಜನ ಕೌರವರು ಆ ನಮ್ಮ 5 ಜನ ಪಾಂಡವರನ್ನು ತೆಗೆದುಕೊಂಡು ಸಧ್ಯಕ್ಕೆ ನಡೆಸಿಕೊಂಡು ಹೋಗುತ್ತಿದ್ದಾರೆ. ನಾಳೆ ಆ ಪಾಂಡವರು ಹೊರಗಡೆ ಬಂದರೆ ಈ ಕೌರವರ ರಾಜ್ಯ ದಬಕ್ಕನೆ ಬಿದ್ದು ಬಿಡುತ್ತದೆ. ಸಧ್ಯಕ್ಕೆ ಒಂದಾಗಿದ್ದೀರಿ, ಇನ್ನೂ ಬೇರೆಯಾಗಿಲ್ಲ. ಇನ್ನೂ ನಮ್ಮವರೇನಿದ್ದಾರೆ ಅವರ ಜೊತೆಯಲ್ಲಿದ್ದೇ ನಿಮ್ಮದು ಕೌರವರು ಪಾಂಡವರ ರಾಜ್ಯ ನಡೆದ ಹಾಗೆ ನಡೆದಿದೆ. ಇವತ್ತಿನವರೆಗೆ ಆರೆ ದಿವಸ ಆದರೆ ಆ ಆರು ದಿವಸ ಆದಮೇಲೆ ನಿಮ್ಮ portfolio ಹಂಚಿಕೆಯೊಳಗೆ ಗೊತ್ತಾಗುತ್ತದೆ ನೋಡೋಣ. ಅದರ ಬಗ್ಗೆ ನಾನು ಈಗ ಮಾತನಾಡುವುದಕ್ಕೆ ಹೋಗುವುದಿಲ್ಲ. ಅವರ ಪಾಲು ಹಂಚಿಕೆ ಆದ ಮೇಲೆ ಏನೇನಾಗುತ್ತದೆ, ಯಾವ ರೀತಿಯಾಗುತ್ತದೆಂಬ ದೃಷ್ಟಿಯಿಂದ ನಾನು ಹೇಳುತ್ತಿರುವುದು. ನಿಮ್ಮನ್ನು ಆ ಕಥೆಗೆ ನಾನು ಹೋಲಿಸುತ್ತಿಲ್ಲ. fertilizers supply ಬಗ್ಗೆ ತಮ್ಮಿಂದ ಸ್ಪಷ್ಟವಾದ ಉತ್ತರವಿಲ್ಲ. ಅದೇ ರೀತಿಯಾಗಿ ನಮ್ಮ ಡೀಸೆಲ್, ಗ್ಯಾಸ್ ಮತ್ತು ಉಳಿದಂಥವುಗಳ ಮೇಲೆ ಸೇಲ್ಸ್ ಟ್ಯಾಕ್ಸ್ Immediately withdraw ಮಾಡಿಕೊಳ್ಳುತ್ತೇವೆಂದು ನೀವು ಸ್ಪಷ್ಟವಾಗಿ ಹೇಳುತ್ತಿಲ್ಲ. ನಾನು ಇವತ್ತು ಮೀಟಿಂಗ್‌ನಲ್ಲಿಟ್ಟು ವಿಚಾರ ಮಾಡುತ್ತೇನೆಂದು ಹೇಳಿದ್ದೀರಿ ಇದರ ಬಗ್ಗೆ ತೀರ್ಮಾನಿಸಲು ಐದಾರು ದಿವಸ ಸಮಯವೇನು ಬೇಕಾಗುವುದಿಲ್ಲ. ಮಾನ್ಯ ಸಿದ್ಧರಾಮಯ್ಯನವರು ಹೇಳಿದ ಹಾಗೆ ಇವತ್ತೇ withdraw ನೀವು ಮಾಡಿಕೊಳ್ಳಬಹುದಿತ್ತು. ಯಾವ ತಾಪತ್ರಯವಿಲ್ಲ. ಏಕೆಂದರೆ ಆಂಧ್ರದಲ್ಲಿ, ಬೇರೆಲ್ಲಾ ಕಡೆ ಮಾಡಿದ್ದಾರೆ. ಸೇಲ್ಸ್ ಟ್ಯಾಕ್ಸ್ ವಿತ್ ಡ್ರಾ ಮಾಡಲಿಕ್ಕೆ ಕ್ಯಾಬಿನೆಟ್ ಮೀಟಿಂಗ್ ಮಾಡುವುದು ಬೇಕಾಗಿಲ್ಲ. ಫೈನಾನ್ಸ್ ಮಿನಿಸ್ಟರ್ ಇದಕ್ಕೆ ಒಂದು ನೋಟಿಫಿಕೇಷನ್ ಮಾಡಿಕೊಂಡು ವಿತ್ ಡ್ರಾ ಮಾಡಿಕೊಳ್ಳುತ್ತಾರೆಂದರೆ ಇದು ವ್ಯಾಟ್ ಅಡಿಯಲ್ಲಿ ಬಂದಿಲ್ಲ. ಇದಕ್ಕೆ ಸದನದ ಒಪ್ಪಿಗೆ ಕೂಡ ಬೇಕಾಗಿಲ್ಲ. Finance department ಮತ್ತು ಮುಖ್ಯ ಮಂತ್ರಿಯವರು ಸೇರಿ ಮಾಡತಕ್ಕದ್ದು, ಇವೆಲ್ಲವನ್ನು ನೋಡಿದಾಗ ನಿಜವಾಗಲೂ ನೀವು ಏನು Vote of confidence ಇವತ್ತು ಕೇಳುತ್ತಿದ್ದಿರಿ, ನಾವ್ಯಾಕೆ ಕೊಡಬೇಕು. ರೈತರ ಬಗ್ಗೆ

ಕಾಳಜಿ ಇಲ್ಲ, ಶುಗರ್ ಕೇನ್‌ಗೆ ರಾಜ್ಯಪಾಲರು ಅನೌನ್ಸ್ ಮಾಡಿರುವ 160 ರೂಪಾಯಿಗಳನ್ನು ಕೊಡಲು ತಯಾರಿಲ್ಲ. ಫ್ರೀ ಸಪ್ಲೈ fuel ಅನ್ನು ಕೂಡ ಮಂಜೂರು ಮಾಡಿ ಕೊಡುತ್ತೇವೆಂದು ಹೇಳಿ ಅದನ್ನು ಮಾಡಿಲ್ಲ. ಒಂದು ಕೆ. ಜಿ. ಅಕ್ಕಿಗೆ ಎರಡು ರೂಪಾಯಿಗಳಂತೆ ಕೊಡುವುದರ ಬಗ್ಗೆ ನಿರ್ಣಯ ಇಲ್ಲ. ಯಾವ ನಿರ್ಣಯ ವನ್ನು ನೀವು ತೆಗೆದುಕೊಂಡಿದ್ದೀರಿ ಎಂದು ಇಲ್ಲಿ ವಿಶ್ವಾಸ ಮತವನ್ನು ಪಡೆಯು ತ್ತಿದ್ದೀರಿ? ಆದ್ದರಿಂದ ಮಾನ್ಯ ಅಧ್ಯಕ್ಷರೇ ನಾವಂತೂ ಇದಕ್ಕೆ ಒಪ್ಪಿಗೆ ಕೊಡಲಿ ಕ್ಕಾಗುವುದಿಲ್ಲ. ಇದನ್ನು ನಾವು ಪ್ರೊಟೆಸ್ಟ್ ಮಾಡಿ ವಾಕ್ ಔಟ್ ಮಾಡುತ್ತೇವೆ.

(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ನಾಯಕರು ಹಾಗೂ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

4. ವಿಶ್ವಾಸ ಮತದ ಅಂಗೀಕಾರ

ಪ್ರಸ್ತವದ ಅಂಗೀಕಾರ

ಶ್ರೀ. ಬಿ. ಎಸ್. ಯಡಿಯೂರಪ್ಪ : (ಮಾನ್ಯ ಮುಖ್ಯ ಮಂತ್ರಿಯವರು: ಮಾನ್ಯ ಅಧ್ಯಕ್ಷರೆ, ಈ ಕೆಳಕಂಡ ಪ್ರಸ್ತಾಪವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಈ ಸದನವು ಶ್ರೀ. ಬಿ. ಎಸ್. ಯಡಿಯೂರಪ್ಪ ಅವರ ನೇತೃತ್ವದ ಸಚಿವ ಸಂಪುಟದಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ.

ಅಧ್ಯಕ್ಷರು : ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರುವ ಕೆಳಕಂಡ ಪ್ರಸ್ತಾವವನ್ನು ಅಂಗೀಕರಿಸುವುದು

ಈ ಸದನವು ಶ್ರೀ ಬಿ. ಎಸ್. ಯಡಿಯೂರಪ್ಪನವರ ನೇತೃತ್ವದ ಸಚಿವ ಸಂಪುಟದಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ.

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು. ಮತ್ತು ಪ್ರಸ್ತಾವಕ್ಕೆ ಒಪ್ಪಿಗೆ ನೀಡಲಾಯಿತು.

ಅಧ್ಯಕ್ಷರು : ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರುವ ಕೆಳಕಂಡ ಪ್ರಸ್ತಾವವನ್ನು ಅಂಗೀಕರಿಸುವುದು.

ಈ ಸದನವು ಶ್ರೀ ಬಿ. ಎಸ್. ಯಡಿಯೂರಪ್ಪನವರ ನೇತೃತ್ವದ ಸಚಿವ ಸಂಪುಟದಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸುತ್ತೆ.

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು ಮತ್ತು ವಿಶ್ವಾಸಮತ ಕೋರುವ ಪ್ರಸ್ತಾವಕ್ಕೆ ಒಪ್ಪಿಗೆ ನೀಡಲಾಯಿತು.

ಪ್ರಕಟಣೆ

ಅಧ್ಯಕ್ಷರು : ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ಮಾನ್ಯ ಘನವೆತ್ತ ರಾಜ್ಯಪಾಲರು ಮಾಡಿದ ಭಾಷಣದ ಮೇಲಿನ ವಂದನಾರ್ಪಣಾ ನಿರ್ಣಯದ ಮೇಲೆ ಚರ್ಚಿಸಲು ಅನುಕೂಲವಾಗುವಂತೆ ದಿನಾಂಕ 23.6.2008 ರಿಂದ 26.6.2008. ರವರೆಗೆ ಸದನವನ್ನು ನಡೆಸಲಾಗುವುದು.

ಈಗ ಸಭೆಯ ಮುಕ್ತಾಯವಾಗಿ ಪುನಃ ದಿನಾಂಕ 23.06.2008 ರಂದು ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ 5 ಗಂಟೆ 37 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ದಿನಾಂಕ 23 ನೇ ಜೂನ್ ಮಾಹೆ 2008 ರಂದು ಸೋಮವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)